ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 10 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 293 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬುದ್ಧ, ಬಸವೇಶ್ವರ, ಶಿವಾಜಿ, ಗಾಂಧೀಜಿ, ಡಾ.ಅಂಬೇಡ್ಕರ್ ಅವರನ್ನೇ ಬಿಡದವರು ನನ್ನನ್ನು ಬಿಡುತ್ತಾರೆಯೇ...!

ಬಿಜೆಪಿಯತ್ತ ಕುಮಾರಸ್ವಾಮಿ ಮತ್ತೊಂದು ಬಾಣ

- ಉತ್ತರ ನೀಡದೆ ವೀರಾವೇಶ ತೋರುತ್ತಿದ್ದಾರೆ ಎಂದು ಕಿಡಿ
- ಬಿಜೆಪಿ ನಾಯಕರ ಟೀಕೆಗಳಿಗೆ ಮಾಜಿ ಮುಖ್ಯಮಂತ್ರಿ ಟಾಂಗ್

ಬೆಂಗಳೂರು: ಪೇಶ್ವೆ ವಂಶಾವಳಿಯ ನಾಯಕರೊಬ್ಬರನ್ನು ಬಿಜೆಪಿ ಮುಂದಿನ ಮುಖ್ಯಮಂತ್ರಿ ಮಾಡಲು ಹೊರಟಿದೆ ಎಂಬ ತಮ್ಮ ಹೇಳಿಕೆಯ ಬಗ್ಗೆ ನಡೆದಿರುವ ಅಪಪ್ರಚಾರದ ಬಗ್ಗೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಗುರುವಾರ ಸರಣಿ ಟ್ವೀಟ್ ಮಾಡಿರುವ ಅವರು, ಇಂಥ ಅಪಪ್ರಚಾರ, ವಿಕೃತಿಗಳಿಗೆ ನಾನು ಜಗ್ಗುವುದಿಲ್ಲ. ಪೇಶ್ವೆಗಳ ವಂಶಾವಳಿಗೆ ಸಂಬಂಧ ಪಟ್ಟ ವ್ಯಕ್ತಿಯನ್ನು ರಾಜ್ಯ ಬಿಜೆಪಿ ಮುಂದಿನ ಮುಖ್ಯಮಂತ್ರಿ



ಮಾಡಲು ಹುನ್ನಾರ ನಡೆಸಿದೆ ಎಂಬುದು ನನ್ನ ಹೇಳಿಕೆ ಆಗಿತ್ತು. ಇದರಲ್ಲಿ ಗೊಂದಲ ಇಲ್ಲ, ಸ್ಪಷ್ಟತೆ ಇತ್ತು. ಕರ್ನಾಟಕ ರಾಜ್ಯದ ಮೇಲೆ, ಅದರಲ್ಲೂ ನಾವೆಲ್ಲರೂ ಶ್ರದ್ಧೆ, ಭಕ್ತಿಯಿಂದ ನಡೆದುಕೊಳ್ಳುವ ಶ್ರೀ ಶೃಂಗೇರಿ ಪೀಠ, ಅಲ್ಲಿನ ▶ 9ನೇ ಪುಟಕ್ಕೆ

ನಾನು ಕೈಜೋಡಿಸಿದ್ದಕ್ಕೆ ಯಡಿಯೂರಪ್ಪ ರಾಜಕೀಯ ಜೀವನ ಉಳಿಯಿತು

ಪೇಶ್ವೆ ವಂಶಸ್ಥರು ಅವರಿಗೆ ಅಧಿಕಾರ ಕೊಡಲು ಬಿಡಲಿಲ್ಲ: ಹೆಚ್‌ಡಿಕೆ ಹೊಸ ಬಾಂಬ್

ಕುಮಟಾ, ಫೆ.9– ಬಿ.ಎಸ್.ಯಡಿಯೂರಪ್ಪನವರ ರಾಜಕೀಯ ಜೀವನ ಬಿಜೆಪಿಯಲ್ಲಿ ನನ್ನಿಂದಾಗಿ ಉಳಿಯಿತು. ಇಲ್ಲದಿದ್ದರೆ ಯಾವಾಗಲೋ ಅವರ ರಾಜಕೀಯ ಭವಿಷ್ಯ ಮುಳುಗಿ ಹೋಗುತ್ತಿತ್ತು ಎಂದು ಮಾಜಿ ಮುಖ್ಯಮಂತ್ರಿ, ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೊಸ ಬಾಂಬ್ ಹಾಕಿದ್ದಾರೆ. ಕುಮಟಾದಲ್ಲಿ ಗುರುವಾರ ಜೆಡಿಎಸ್ ಪಂಚರತ್ನ ರಥಯಾತ್ರೆಯ ಸಂದರ್ಭದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಈ ವೇಳೆ ಬಿಎಸ್‌ವೈ ಪುತ್ರ ವಿಜಯೇಂದ್ರಗೆ ರಾಜಕೀಯ ಧಾಟಿಯಲ್ಲಿ ತಿರುಗೇಟು ಕೊಟ್ಟರು. ನಾವು ಯಡಿಯೂರಪ್ಪ ▶ 9ನೇ ಪುಟಕ್ಕೆ

ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿ ಹೆಚ್ಚಳ

ಸಂವಿಧಾನದ ಒಂಭತ್ತನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸಲು ಕೇಂದ್ರಕ್ಕೆ ಶಿಫಾರಸು

- ರಾಜ್ಯ ಸಚಿವ ಸಂಪುಟ ತೀರ್ಮಾನ
- ವಿಧಾನಮಂಡಲದಲ್ಲಿ ವಿಸ್ತೃತ ಚರ್ಚೆ
- ನಿರ್ಣಯ ಅಂಗೀಕಾರಕ್ಕೆ ನಿರ್ಧಾರ

ಬೆಂಗಳೂರು, ಫೆ.9(ಕೆಎಂಶಿ)– ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿ ಹೆಚ್ಚಳಕ್ಕೆ ಸಂವಿಧಾನದ 9ನೇ ಪರಿಚ್ಛೇದಕ್ಕೆ ಅಳವಡಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ. ಕೇಂದ್ರಕ್ಕೆ ಶಿಫಾರಸು ಮಾಡುವ ಮುನ್ನ ನಾಳೆಯಿಂದ ಆರಂಭಗೊಳ್ಳಲಿರುವ ವಿಧಾನ ಮಂಡಲದ ಅಧಿವೇಶನದಲ್ಲಿ ಈ ಸಂಬಂಧ ವಿಸ್ತೃತ ಚರ್ಚೆ ನಡೆಸಿ, ಮೀಸಲಾತಿ ಪ್ರಮಾಣ ಹೆಚ್ಚಳವಾಗಿರುವುದನ್ನು ಸದನದ ಗಮನಕ್ಕೆ ತಂದು ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿ, ಕೇಂದ್ರಕ್ಕೆ ಕಳುಹಿಸಲು ಸಭೆ ನಿರ್ಧರಿಸಿದೆ.



ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ರಾಜ್ಯ ಸರ್ಕಾರ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಹೆಚ್ಚಿಸಲು ತೀರ್ಮಾನ ಕೈಗೊಂಡಿದೆ. ಇವೆರಡು ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಒಟ್ಟು ಮೀಸಲಾತಿ ಪ್ರಮಾಣವನ್ನು ಪರಿಶಿಷ್ಟ ಜಾತಿಗೆ ಶೇ.15ರಿಂದ 17, ಪರಿಶಿಷ್ಟ ವರ್ಗಕ್ಕೆ ಶೇ.3ರಿಂದ 7ರಷ್ಟು ಸುಗ್ರೀವಾಜ್ಞೆ ಹೊರಡಿಸಿ ನಂತರ ವಿಧಾನಸಭೆಯಲ್ಲಿ ಈ ತೀರ್ಮಾನಕ್ಕೆ ಕಾಯ್ದೆಯ ಸ್ವರೂಪ ನೀಡಲಾಗಿತ್ತು. ಮೀಸಲಾತಿ ಹೆಚ್ಚಳದ ಲಾಭ ಸಿಗುವಂತಾಗಲು ಇದನ್ನು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರ್ಪಡೆ ಮಾಡಬೇಕು ಎಂಬ ಬೇಡಿಕೆಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮೀಸಲಾತಿಯನ್ನು ಸಂವಿಧಾನದ ಷೆಡ್ಯೂಲ್‌ಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡುವ ತೀರ್ಮಾನವನ್ನು ಕೈಗೊಳ್ಳಲಾಗಿದೆ.

ರಾಜ್ಯದ 30 ಐಟಿಐ ಮೇಲ್ದರ್ಜೆಗೆ

ರಾಜ್ಯದ ಸರ್ಕಾರಿ ಐಟಿಐಗಳನ್ನು ಟಾಟಾ ಸಂಸ್ಥೆಯ ಸಹಭಾಗಿತ್ವದಲ್ಲಿ ಉನ್ನತೀಕರಣಗೊಳಿಸಲು 155 ಸರ್ಕಾರಿ ಐಟಿಐಗಳ ಪೈಕಿ 30 ಐಟಿಐಗಳನ್ನು 927 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸಲು ಸಭೆ ಸಮ್ಮತಿಸಿದೆ 30 ಸರ್ಕಾರಿ ಐಟಿಐಗಳನ್ನು ಟಾಟಾ ಟೆಕ್ನಾಲಜಿ ಸಂಸ್ಥೆ 927 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸುತ್ತಿದ್ದು, ಇದರಲ್ಲಿ 816 ಕೋಟಿ ರೂ.ಗಳನ್ನು ಸಂಸ್ಥೆ ಭರಿಸಲಿದ್ದು ಉಳಿದ 111 ಕೋಟಿ ರೂ.ಗಳನ್ನು ಸರ್ಕಾರ ಭರಿಸಲಿದೆ ಎಂದರು. ಪ್ರತಿ ಐಟಿಐಗಳನ್ನು 27 ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಕೊಡಗಲ್ಲಿ ಪೊಲೀಸ್ ವಸತಿ ಸಂಕೀರ್ಣ: ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಪೊಲೀಸ್ ವಸತಿ ಸಂಕೀರ್ಣ ನಿರ್ಮಾಣದ 12 ಕೋಟಿ ರೂ. ವೆಚ್ಚದ ಯೋಜನೆಗೂ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಸಚಿವ ಮಾಧುಸ್ವಾಮಿ ಹೇಳಿದರು.

ಚಾ.ನಗರದ 166 ಗ್ರಾಮಗಳಿಗೆ ಕುಡಿಯುವ ನೀರು: ಚಾಮರಾಜನಗರ ಜಿಲ್ಲೆಯ 166 ಗ್ರಾಮಗಳಿಗೆ ▶ 9ನೇ ಪುಟಕ್ಕೆ

ದೇವರಾಜ ಸಿವಿಲ್, ಸಂಚಾರ ಠಾಣೆಗೆ ಹೊಸ ಕಟ್ಟಡಗಳ ಭಾಗ್ಯ

ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರರಿಂದ ಲೋಕಾರ್ಪಣೆ

ಮೈಸೂರು, ಫೆ.9(ಆರ್‌ಕೆ)–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ನಿರ್ಮಿಸಿರುವ 3.2 ಕೋಟಿ ರೂ. ವೆಚ್ಚದ ದೇವರಾಜ ಸಿವಿಲ್ ಮತ್ತು ಸಂಚಾರ ಪೊಲೀಸ್ ಠಾಣೆ ನೂತನ ಕಟ್ಟಡವನ್ನು ಮೇಯರ್ ಶಿವಕುಮಾರ್ ಮತ್ತು ಶಾಸಕ ಎಲ್. ನಾಗೇಂದ್ರ ಇಂದು ಉದ್ಘಾಟಿಸಿದರು.

ನೆಲಮಹಡಿಯಲ್ಲಿ ದೇವರಾಜ ಸಿವಿಲ್ ಮತ್ತು ಮೊದಲ ಮಹಡಿಯಲ್ಲಿ ದೇವರಾಜ ಸಂಚಾರ ಠಾಣೆ ಕಾರ್ಯ ನಿರ್ವಹಿಸಲಿದ್ದು, ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಪ್ರತ್ಯೇಕ ಕೊಠಡಿ, ಕಂಪ್ಯೂಟರ್, ಅಪರಾಧ ತಂಡ, ಮಹಿಳೆಯರು ಪುರುಷ ಸಿಬ್ಬಂದಿ ವಿಶ್ರಾಂತಿ ಕೊಠಡಿ, ಶೌಚಾಲಯ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ನೂತನ ಕಟ್ಟಡದಲ್ಲಿ ಒದಗಿಸಲಾಗಿದೆ.

ಇತ್ತೀಚೆಗಷ್ಟೇ ಗೃಹ ಸಚಿವ ಅರಗ ಜ್ಞಾನೇಂದ್ರ ಅವರು ಆಲನಹಳ್ಳಿ ಮತ್ತು ಹೆಬ್ಬಾಳು ಪೊಲೀಸ್ ಠಾಣೆಗಳ ನೂತನ ಕಟ್ಟಡಗಳನ್ನು ಉದ್ಘಾಟಿಸಿದ್ದರು. ಇದರೊಟ್ಟಿಗೆ ಮೈಸೂರಿನಲ್ಲಿ ನಾಲ್ಕು ಠಾಣೆಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಾಣವಾದಂತಾಗಿದೆ. ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಮೇಯರ್ ಶಿವಕುಮಾರ್, ಈ ಹಿಂದೆ ಪೊಲೀಸರ ಕಂಡರೆ ಜನರು ಹೆದರಿ ಓಡುತ್ತಿದ್ದರು. ಕಾಲ ಬದಲಾದಂತೆ ಈ ಪೊಲೀಸರು ಜನ ಸ್ನೇಹಿಗಳಾಗಿದ್ದಾರೆ. ಎಲ್ಲಾ ಠಾಣಾ ವ್ಯಾಪ್ತಿಗಳಲ್ಲಿ ನಾಗರಿಕರ ಸಭೆ ನಡೆಸಿ ಕುಂದು–ಕೊರತೆಗಳಿಗೆ ಸ್ಪಂದನೆ ನೀಡಿದರೆ ಸಮಾಜದ ಹಲವು ಸಮಸ್ಯೆಗಳು ನಿವಾರಣೆಯಾಗಲಿವೆ ಎಂದರು. ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕಾನೂನು–ಸುವ್ಯವಸ್ಥೆ ನಿರ್ವಹಿಸಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಪತ್ತೆ ಮಾಡಲು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಲು ಅನುಕೂಲವಾಗುವಂತೆ ಮೈಸೂರಿಗೆ 4 ಹೊಸ ಪೊಲೀಸ್ ಠಾಣೆ ಕಟ್ಟಡ ನಿರ್ಮಿಸಲು ಸರ್ಕಾರ ಅನುದಾನ ನೀಡಿ ಸಾಕಾರಗೊಳಿಸಿದೆ ಇನ್ನೂ 2 ಠಾಣೆಗಳಿಗೆ ಮಂಜೂರು ಮಾಡಿಸಲಾಗುವುದು ಎಂದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಜಾಹ್ನವಿ, ಎಸಿಪಿಗಳಾದ ಶಾಂತಮಲ್ಲಪ್ಪ, ಗಜೇಂದ್ರ ಪ್ರಸಾದ್, ಸಂದೇಶ್ ಕುಮಾರ್, ಎಸ್.ಇ. ಗಂಗಾಧರಸ್ವಾಮಿ, ಅಶ್ವತ್ಥನಾರಾಯಣ, ಪರಶುರಾಮಪ್ಪ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.





ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ನಿರ್ಮಿಸಿರುವ ದೇವರಾಜ ಸಿವಿಲ್ ಮತ್ತು ಸಂಚಾರ ಠಾಣೆಗಳ ನೂತನ ಕಟ್ಟಡಗಳನ್ನು ಮೇಯರ್ ಶಿವಕುಮಾರ್ ಹಾಗೂ ಶಾಸಕ ಎಲ್.ನಾಗೇಂದ್ರ ಅವರು ಉದ್ಘಾಟಿಸಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಜಾಹ್ನವಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹೇಳಿಕೆಯಿಂದ ರಾಜಕೀಯ ಗೊಂದಲ

ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಅಸಮಾಧಾನ

ಮೈಸೂರು, ಫೆ.9(ಎಂಟಿವೈ)–ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗೊಂದಲ ಸೃಷ್ಟಿಸಲು ಬಿಜೆಪಿ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಬಿಜೆಪಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ರಾಜಕೀಯ ಪಕ್ಷವಲ್ಲ. ಅದು ಕುಟುಂಬವೊಂದಕ್ಕೆ ಸೀಮಿತವಾಗಿರುವ ಪಕ್ಷ. ಹಿಂದೆ ಅಪ್ಪ–ಮಕ್ಕಳ ಪಕ್ಷವಾಗಿತ್ತು. ಈಗ ಸೊಸೆ–ಮೊಮ್ಮಕ್ಕಳ ಪಕ್ಷವಾಗಿ ಹೊರಹೊಮ್ಮಿದೆ. ಬದ್ಧತೆಯೇ ಇಲ್ಲದ ನಾಯಕ ಎನಿಸಿರುವ ಹೆಚ್.ಡಿ.ಕುಮಾರಸ್ವಾಮಿಗೆ ಬಿಜೆಪಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಸಾಂದರ್ಭಿಕ ಸುಳ್ಳುಗಳನ್ನು ಹೇಳುತ್ತಾ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಸಮಾಜದ ಎಲ್ಲ ವರ್ಗಗಳ ಸರ್ವತೋಮುಖ ಅಭಿವೃದ್ಧಿಯೇ ನಮ್ಮ ಆಶಯ. ಚುನಾವಣೆ ಅಥವಾ ರಾಜಕೀಯಕ್ಕಾಗಿ ಮತದಾರರ ಓಲೈಕೆಗಾಗಿ ಯಾವುದೇ ಕಾರ್ಯಕ್ರಮವನ್ನೂ ನಾವು ಮಾಡುತ್ತಿಲ್ಲ. ರಾಜ್ಯದಾದ್ಯಂತ ವಾತಾವರಣ ನಮ್ಮ ಪರವಾಗಿದೆ. ಜಿಲ್ಲೆಯಲ್ಲಿ ವಿಧಾನಸಭೆ ಚುನಾವಣೆಗೆ ಚೆನ್ನಾಗಿ ತಯಾರಿ ನಡೆಯುತ್ತಿದೆ. ಮತಗಟ್ಟೆ ಸಮಿತಿ ರಚಿಸಿದ್ದೇವೆ. ಮೂವತ್ತು ಮತದಾರರಿಗೆ ಒಬ್ಬೊಬ್ಬ ಪ್ರಮುಖರನ್ನು ನಿಯೋಜಿಸಲಾಗಿದೆ. ಘಟಕದ ಸಹ ವಕ್ತಾರ ಡಾ.ಕೆ.ವಸಂತಕುಮಾರ್ ಮಾತನಾಡಿ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ನಾಯಕರು ಪಕ್ಷದ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ಯಾರು ಮುಖ್ಯಮಂತ್ರಿ ಆಗಬೇಕು ಎನ್ನುವುದನ್ನು ನಮ್ಮ ಪಕ್ಷ ನಿರ್ಧರಿಸುತ್ತದೆ. ಆ ಬಗ್ಗೆ ಹೇಳುವುದಕ್ಕೆ ಕುಮಾರಸ್ವಾಮಿ ಯಾರು. ಎಲ್ಲ ಸಮಾಜವನ್ನೂ ಸಮಾನವಾಗಿ ನೋಡುತ್ತಿರುವ ಪಕ್ಷ ನಮ್ಮದು. ನಮ್ಮ ಬಗ್ಗೆ ಅಪಪ್ರಚಾರ ಮಾಡುವುದು ಸರಿಯಲ್ಲ. ಇಂತಹ ಗಿಮಿಕ್ ರಾಜಕಾರಣ ಮಾಡುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮುಖಂಡ ಹೆಚ್.ಜಿ.ಗಿರಿಧರ್ ಇದ್ದರು.

ನರೇಗಾ ಯೋಜನೆಯ ಅನುಷ್ಠಾನದಲ್ಲಿ ಅಕ್ರಮ ಕಂಡಲ್ಲಿ ದೂರು ಸಲ್ಲಿಸಲು ಅವಕಾಶ

ಮೈಸೂರು, ಫೆ.9– ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜರುಗುತ್ತಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಗಳ ಅನುಷ್ಠಾನದಲ್ಲಿ (MGNREGA) ಅಕ್ರಮ ಹಾಗೂ ಅವ್ಯವಹಾರಗಳು ನಡೆದಿದ್ದಲ್ಲಿ, ನಡೆಯುತ್ತಿದ್ದಲ್ಲಿ ಈ ಸಂಬಂಧ ಸಾರ್ವಜನಿಕರು, ದೂರು ಅಥವಾ ಅಹವಾಲುಗಳನ್ನು ಖುದ್ದು ಅಥವಾ ಪತ್ರ ಮುಖೇನಾ, ಇಲ್ಲವೆ ದೂರವಾಣಿ ಮುಖಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಚೇರಿ ಆವರಣದಲ್ಲಿರುವ ಒಂಬುಡ್ಸ್‌ಮನ್ (ತನಿಖಾಧಿಕಾರಿ) ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂ. 08212526324, ಮೊಬೈಲ್ ನಂ: 7204656939 ನ್ನು ಸಂಪರ್ಕಿಸಬಹುದು ಎಂದು ತನಿಖಾಧಿಕಾರಿ ಡಾ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯಕ್ಷರಂಗಾಯಣ ಹಾಗೂ ಪರಶುರಾಮ ನಾಟಕದ ನಿರ್ದೇಶಕ ಜೀವನರಾಂ ಸುಳ್ಯ ಅವರನ್ನು ಸಂಚಲನ ತಂಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾಮಂದಿರದಲ್ಲಿ ಸನ್ಮಾನಿಸಲಾಯಿತು. ಪ್ರಗತಿಪರ ಚಿಂತಕ ಕಾಳೇಗೌಡ ನಾಗವಾರ, ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಸಂಚಲನದ ದೀಪಕ್ ಮೈಸೂರು ಮತ್ತಿತರರು ಇದ್ದಾರೆ.



ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅವರ ಹುಟ್ಟುಹಬ್ಬವನ್ನು ನಾರಾಯಣಶಾಸ್ತ್ರಿ ರಸ್ತೆಯ ಮಹದೇಶ್ವರ ದೇವಸ್ಥಾನದ ಆವರಣದಲ್ಲಿರುವ ಶ್ರೀ ವಾಲ್ಮೀಕಿ ಮಹರ್ಷಿ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ಈ ವೇಳೆ ಪಾಲಿಕೆ ಸದಸ್ಯ ವಿ.ಲೋಕೇಶ್ ಪಿಯಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮಾಜಿ ಪಾಲಿಕೆ ಸದಸ್ಯ ಜಾಕೀರ್ ಪಾಷಾ, ಸುಲೋಚನಾ ಆರಾಧ್ಯ, ಹಿಂದುಳಿದ ವರ್ಗಗಳ ನಗರಾಧ್ಯಕ್ಷ ಶಿವಮಲ್ಲು, ಅಹಿಂದ ಶಿವರಾಮು, ಕೆಪಿಸಿಸಿ ವಕ್ತಾರ ಶ್ರೀನಿವಾಸ್, ಸಾಹಿತ್ಯ ಪರಿಷತ್ ಚಂದ್ರಶೇಖರ್, ಲಾರಿ ಸ್ವಾಮಿ, ಸತೀಶ್, ನಾಗೇಶ್ ನಾಯಕ, ಪ್ರಶಾಂತ್ ಆರ್ಯ, ಶೇಖರ್ ನಾಯಕ್, ವಿಶ್ವನಾಥ್(ವಿಶ್ವ), ನಾಗರಾಜು ಮತ್ತಿತರರು ಇದ್ದರು.


ನಿಧನ



ಬಿ.ಎನ್.ಚನ್ನಪ್ಪಾಚಾರ್

ಮೈಸೂರು, ಫೆ.9–ಪ್ರಖ್ಯಾತ ಸ್ವರ್ಣಶಿಲ್ಪಿ ಬಿ.ಎನ್. ಚನ್ನಪ್ಪಾಚಾರ್ (87) ಬುಧವಾರ ಮುಂಜಾನೆ ನಿಧನರಾದರು. ಮೃತರಿಗೆ ಪತ್ನಿ ಅಮರಾವತಿ, ಪುತ್ರ ಶ್ರೀನಿವಾಸಚಾರ್, ಪುತ್ರಿಯರಾದ ಅಹಲ್ಯಕುಮಾರಿ ಮತ್ತು ಜಯಶ್ರೀ ಇದ್ದಾರೆ. ಚಿನ್ನ ಮತ್ತು ಬೆಳ್ಳಿ ಕುಸುರಿ ಕಲೆಯಲ್ಲಿ ಹೆಸರುವಾಸಿಯಾಗಿದ್ದ ಚನ್ನಪ್ಪಾಚಾರ್ ಅವರು ಪ್ರತಿಷ್ಠಿತ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದರು. ಮೈಸೂರಿನ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮುಖ್ಯದ್ವಾರಕ್ಕೆ ಬೆಳ್ಳಿ ಕವಚ ನಿರ್ಮಿಸಿದ್ದರು. ಅಲ್ಲದೆ ಬಿಳಿಗಿರಿರಂಗನಬೆಟ್ಟ, ಕೊಲ್ಲೂರು ಮೂಕಾಂಬಿಕೆ, ಕುಕ್ಕೆ ಸುಬ್ರಹ್ಮಣ್ಯ ಸೇರಿದಂತೆ ದಕ್ಷಿಣ ಭಾರತದ ಅನೇಕ ದೇವಾಲಯಗಳಿಗೆ ಪ್ರಭಾವಳಿ, ಕಳಶ, ವಿಗ್ರಹಗಳು, ಮುಖವಾಡಗಳನ್ನು ತಯಾರಿಸಿ ಕೊಟ್ಟ ಕೀರ್ತಿ ಚನ್ನಪ್ಪಚಾರ್ ಅವರಿಗೆ ಸಲ್ಲುತ್ತದೆ. ಮೃತರ ಅಂತ್ಯಕ್ರಿಯೆಯು ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ನಾರಾಯಣ



ಮೈಸೂರು, ಫೆ.9– ಮೈಸೂರು ಮಹಾನಗರ ಪಾಲಿಕೆಯ ನಿವೃತ್ತ ನೌಕರ, ದಟ್ಟಗಳ್ಳಿ ನಿವಾಸಿ ಜಿ.ನಾರಾಯಣ (63) ಗುರುವಾರ ರಾತ್ರಿ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಅಬ್ದುಲ್ ಶಕೂರ್

ಮೈಸೂರು, ಫೆ.9– ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಬನ್ನಿಮಂಟಪ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಅಬ್ದುಲ್ ಶಕೂರ್(65) ಅವರು ಬನ್ನಿಮಂಟಪ ಖಯೂಮ್ ಕಾಲೋನಿಯ ಸ್ವಗೃಹದಲ್ಲಿ ಗುರುವಾರ ನಿಧನರಾದರು.

ಮೃತರು ಇಬ್ಬರು ಪತ್ನಿಯರು, ಇಬ್ಬರು ಪುತ್ರರು, ನಾಲ್ವರು ಸಹೋದರರು, ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ(ಫೆ.10) ಬೆಳಗ್ಗೆ 10ಕ್ಕೆ ಹನುಮಂತನಗರ ಟಿಪ್ಪು ಮಸೀದಿಯಲ್ಲಿ ನಮಾಜ್–ಎ–ಜನಾಜ ನೆರವೇರಿದ ನಂತರ ಟಿಪ್ಪು ಸರ್ಕಲ್ ಬಳಿಯ ಮುಸ್ಲಿಮರ ರುದ್ರಭೂಮಿ ಗೇಟ್ ನಂ.2 ರಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಕ್ಬಾಲ್, ಯುವ ಕಾಂಗ್ರೆಸ್ ಮಾಜಿ ಶೌಕತ್ ಅಲಿ ಸಂತಾಪ ಸೂಚಿಸಿದ್ದಾರೆ.

ಅಪರಿಚಿತ ಮಹಿಳೆ ಶವ ಪತ್ತೆ

ಮೈಸೂರು, ಫೆ.9– ಶ್ರೀರಂಗಪಟ್ಟಣದ ರೈಲು ನಿಲ್ದಾಣದ ಬಳಿ ಸುಮಾರು 50ರಿಂದ 55 ವರ್ಷದ ಮಹಿಳೆ ಶವ ಪತ್ತೆಯಾಗಿದೆ. ಈ ಸಂಬಂಧ ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ : 0821–2516579 ಅನ್ನು ಸಂಪರ್ಕಿಸಿ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಸಂಕಷ್ಟದ ಕಾಲದಲ್ಲಿ ಜೀವಸತ್ವ ನೀಡುವ ಗೆಡ್ಡೆಗೆಣಸು!



ಮೈಸೂರು, ಫೆ.9(ಎಂಕೆ)– ನೈಸರ್ಗಿಕ ವಿಕೋಪ, ಬರಗಾಲದಲ್ಲಿ ಜೀವ ಉಳಿಸುವ ಸಂಜೀವಿನಿಗಳಾದ 'ಗೆಡ್ಡೆ ಗೆಣಸು'ಗಳು ಎಲ್ಲ ಬೆಳೆಗಳು ವಿಫಲವಾದಾಗ ರೈತನ ಕೈಹಿಡಿದು ಆದಾಯ ತರುವ ಮೂಲಗಳಾಗಿವೆ.

ಗೆಡ್ಡೆ ಗೆಣಸು ವೈವಿಧ್ಯಕ್ಕೆ ಹೆಸರುವಾಸಿಯಾದ ಕರ್ನಾಟಕ ರಾಜ್ಯದಲ್ಲಿ ಕುಣಬಿ, ಸಿದಿ, ಜೇನು ಕುರುಬ, ಬೆಟ್ಟ ಕುರುಬ, ಸೋಲಿಗ ಮತ್ತು ಇರುಳಿಗ ಸಮುದಾಯಗಳು ಗೆಡ್ಡೆ ಗೆಣಸನ್ನು ಇವತ್ತಿಗೂ ಆಹಾರವಾಗಿ ಬಳಸುತ್ತಿದ್ದಾರೆ. ನೈಸರ್ಗಿಕ ವಿಕೋಪ ಮತ್ತು ಬರಗಾಲದಲ್ಲಿ ಗೆಡ್ಡೆ ಗೆಣಸು ಜೀವ ಉಳಿಸುವ ಸಂಜೀವಿನಿಯಂತೆ ಕೆಲಸ ಮಾಡುವುದಲ್ಲದೆ ವಾತಾವರಣದ ವೈಪರಿತ್ಯವಿದ್ದಾಗ, ಎಲ್ಲ ಬೆಳೆಗಳು ವಿಫಲವಾದಾಗ ಗೆಡ್ಡೆ ಗೆಣಸುಗಳು ರೈತನ ಕೈಹಿಡಿಯುವ ಮೂಲಕ ಆದಾಯ ತರುತ್ತವೆ. ಒಣಭೂಮಿಯ ಸಂಗಾತಿಗಳೆಂದು ಕರೆಯುವ ಡಯೋಸ್ಕೋರಿಯಾ ಕುಟುಂಬದ ಬಳ್ಳಿ ಆಲೂಗೆಡ್ಡೆ, ಹುತ್ತರಿ ಗೆಣಸು, ಪರ್ಪಲ್ ಯಾಮ್, ಕೆಸು ಗಿಡ, ಶುಂಠಿ, ಹರಿಷಿಣ. ಆರಾರೂಟ್, ಮಾಕಳಿ ಬೇರು, ಕ್ಯಾರೆಟ್, ಬೀಟ್‌ರೂಟ್, ಸಿಹಿ ಗೆಣಸು, ಮರ ಗೆಣಸು, ಕತ್ತಾಳೆ ಗೆಡ್ಡೆ, ಗೊಟ್ಟಿ ಗೆಡ್ಡೆ, ಮಾವಿನ ಶುಂಠಿ, ಕೂವೆ ಗೆಡ್ಡೆ, ಉತ್ತರಿ ಗೆಡ್ಡೆ, ಬಿಳಿ ಸಿಹಿ ಗೆಣಸು, ಬಳ್ಳಿ ಬಟಾಟೆ, ಕಪ್ಪು ಅರಿಷಿಣ, ಕಪ್ಪು ಶುಂಠಿ, ಕಾಡು ಗೆಣಸು, ಮುಳ್ಳು ಗೆಣಸು, ಸುವರ್ಣ ಗೆಡ್ಡೆ ಸೇರಿದಂತೆ ಹತ್ತು–ಹಲವು ಬಗೆ ಬಗೆಯ ಗೆಡ್ಡೆ ಗೆಣಸಿನಿಂದ ತಯಾರಿಸಿದ ತಿಂಡಿ–ತಿನಿಸುಗಳನ್ನು ಸವಿಯುವುದು ವಿಶೇಷ ಅನುಭವವೇ ಆಗಿದೆ. ಗೆಡ್ಡೆ ಗೆಣಸುಗಳು ಆಯುರ್ವೇದ ಮತ್ತು ಜನಪದ ವೈದ್ಯದಲ್ಲಿ ಮೂಲಿಕೆಯಾಗಿ ಬಳಕೆಯಾಗಿವೆ. ಪಿಷ್ಟ, ನಾರು ಮತ್ತು ಪೋಷಕಾಂಶಗಳಿಂದ ಸಮೃದ್ಧವಾದ ಗೆಡ್ಡೆ ಗೆಣಸು ನಮ್ಮ ಅನ್ನದ ಬಟ್ಟಲು ತುಂಬುವುದರ ಜೊತೆಗೆ, ಆರೋಗ್ಯವನ್ನೂ ವೃದ್ಧಿಸುತ್ತದೆ. ದೇಹಕ್ಕೆ ರೋಗ ನಿರೋಧಕ ಶಕ್ತಿ ತುಂಬಬಲ್ಲ ನಿಸರ್ಗದ ಕೊಡುಗೆಯಾಗಿವೆ. ವಿಷಮುಕ್ತವಾದ ಗೆಡ್ಡೆ ಗೆಣಸು ಪೋಷಕಾಂಶದ ಕಣಜ. ವಿಸರ್ಜನಾಕ್ರಿಯೆಗೆ, ಚರ್ಮದ ಮೈಕಾಂತಿ ವೃದ್ಧಿಸಲು ಸಹಕಾರಿ.

ಪುಷ್ಟಿದಾಯಕ–ಶಕ್ತಿದಾಯಕ: ಆದಿವಾಸಿಗಳ ಪಾರಂಪರಿಕ ಆಹಾರವಾದ ಗೆಡ್ಡೆ–ಗೆಣಸುಗಳು. ಮಣ್ಣಿನ ಕಸುವನ್ನು ಪಡೆದ ಪುಷ್ಟಿದಾಯಕ ಹಾಗೂ ಶಕ್ತಿದಾಯಕ ಆಹಾರ. ಅಕ್ಕಿ, ರಾಗಿ, ಜೋಳ ಮತ್ತು ಗೋಧಿಗಿಂತಲೂ ಹೆಚ್ಚು ಪೌಷ್ಟಿದಾಯಕ. ಗೆಡ್ಡೆ ಗೆಣಸುಗಳನ್ನು ಸುಲಭವಾಗಿ ಜಮೀನಿನ ಅಂಚಿನಲ್ಲಿ ಇಲ್ಲವೇ ಬೆಳೆಯ ಸಾಲಿನ ನಡುವೆ ಬೆಳೆದುಕೊಳ್ಳಬಹುದು. ಮನೆ ಹಿತ್ತಲು ಮತ್ತು ತಾರಸಿ ತೋಟದಲ್ಲೂ ಬೆಳೆಸಬಹುದಾಗಿದೆ.

ಈಗ ರೈತನ ಅಂತಿಮ ಆದಾಯದ ಮೂಲಗಳು

ಎರಡು ದಿನಗಳ ಗೆಡ್ಡೆ ಗೆಣಸು ಮೇಳ...

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಫೆ.11 ಮತ್ತು 12 ರಂದು ಸಹಜ ಸಮೃದ್ಧ ಕೃಷಿಕರ ಬಳಗ ಹಾಗೂ ಯೂಸಿಂಗ್ ಡೈವರ್ಸಿಟಿ ವತಿಯಿಂದ 'ಗೆಡ್ಡೆ ಗೆಣಸು' ಮೇಳ ನಡೆಯಲಿದ್ದು, ಮೇಳವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಲಿದ್ದಾರೆ. ಕೆಎಸ್‌ಓಯು ಉಪ ಕುಲಪತಿ ಪ್ರೊ.ಶರಣಪ್ಪ ವೈಜನಾಥ್ ಹಲಸೆ, ಬರಹಗಾರ್ತಿ ರತ್ನಾ ರಾಜಯ್ಯ ಭಾಗವಹಿಸಲಿದ್ದಾರೆ. 250 ಬಗೆಯ ಗೆಡ್ಡೆ ಗೆಣಸಿನ ತಳಿಗಳನ್ನು ಉಳಿಸಿರುವ ಕೇರಳದ ವಯನಾಡಿನ ಎನ್.ಎಂ. ಶಾಜಿ ಅವರು ದಕ್ಷಿಣ ಅಮೇರಿಕಾದ ವಿಶೇಷ ಗೆಣಸು ಯೋಕೋನ್ ಬೀನ್ಸ್ ಅನ್ನು ಪ್ರದರ್ಶನದಲ್ಲಿಡಲಿದ್ದಾರೆ. ಹಾಗೆಯೇ ಗೆಡ್ಡೆ ಗೆಣಸಿನ ಅಡುಗೆ ಸ್ಪರ್ಧೆಯೂ ನಡೆಯಲಿದೆ.

ಮೈಸೂರು ಜೈಲ್ ಮೇಲೆ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ದಾಳಿ

ಗಾಂಜಾ, ಮಾರಕಾಸ್ತ್ರ, ನಗದು, ಮೊಬೈಲ್‌ಗಳು ಜಪ್ತಿ

ಮೈಸೂರು, ಫೆ.9(ಆರ್‌ಕೆ)– ಮೈಸೂರಿನ ಕೇಂದ್ರ ಕಾರಾಗೃಹದ ಮೇಲೆ ಬುಧವಾರ ದಿಢೀರ್ ದಾಳಿ ನಡೆಸಿದ ಪೊಲೀಸರು, ಕೈದಿಗಳ ಬಳಿ ಇದ್ದ 20 ಗ್ರಾಂ ಗಾಂಜಾ, ಚಾಕು, ಸ್ಟೀಲ್ ಸ್ಪೂನ್‌ಗಳಿಂದ ಮಾಡಿದ ಆಯುಧಗಳು, 15,000 ರೂ. ನಗದು ಹಾಗೂ 5 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ದೂರುಗಳ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನೇತೃತ್ವದ ತಂಡ ಜೈಲಿನ ಮೇಲೆ ದಾಳಿ ನಡೆಸಿತು. ಕೆಲ ಜೈಲುವಾಸಿಗಳ ಬಳಿ ಮಾರಕಾಸ್ತ್ರ, ಮೊಬೈಲ್, ಗಾಂಜಾ ಹಾಗೂ ನಗದು ಪತ್ತೆಯಾಗಿದ್ದು, ಈ ಬಗ್ಗೆ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತೃತೀಯಲಿಂಗಿಗಳ ವಿರುದ್ಧ ಕಾರ್ಯಾಚರಣೆ: ಮೈಸೂರಿನ ಪ್ರಮುಖ ವೃತ್ತ, ಸಿಗ್ನಲ್ ಲೈಟ್ ಜಂಕ್ಷನ್‌ಗಳಲ್ಲಿ ಭಿಕ್ಷೆ ಬೇಡುವ ನೆಪದಲ್ಲಿ ಸಾರ್ವಜನಿಕರಿಂದ ಬಲವಂತವಾಗಿ ಹಣ ವಸೂಲಿ ಮಾಡುತ್ತಿದ್ದ ತೃತೀಯಲಿಂಗಿಗಳ ವಿರುದ್ಧ ಕ್ರಮ ಕೈಗೊಂಡು, 22 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಅದೇ ರೀತಿ ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆ ಮಾಡುತ್ತಿದ್ದ 8 ಮಂದಿಯನ್ನು ಗಾಯತ್ರಿಪುರಂನ ನಿರಾಶ್ರಿತರ ಕೇಂದ್ರಕ್ಕೆ ಒಪ್ಪಿಸಿ ಪುನರ್ವಸತಿ ಕಲ್ಪಿಸಲಾಗಿದೆ. ಬಸ್ ನಿಲ್ದಾಣ, ಫುಟ್‌ಪಾತ್ ಸರ್ಕಲ್, ರೈಲ್ವೆ ಸ್ಟೇಷನ್, ಸರ್ಕಾರಿ ಕಚೇರಿಗಳು, ಪ್ರವಾಸಿ ತಾಣಗಳ ಬಳಿ ಭಿಕ್ಷಾಟನೆ ಮಾಡುತ್ತಿದ್ದವರನ್ನು ರಕ್ಷಿಸಲಾಗಿದ್ದು, ಮಕ್ಕಳನ್ನು ಬಾಲ ಮಂದಿರದಲ್ಲಿರಿಸಲಾಗಿದೆ. ಜೈಲು ದಾಳಿ ಸೇರಿದಂತೆ ಎಲ್ಲಾ ಕಾರ್ಯಾಚರಣೆಗಳಲ್ಲಿ ಡಿಸಿಪಿಗಳಾದ ಎಂ.ಮುತ್ತುರಾಜ್, ಜಾಹ್ನವಿ, ಎಸಿಪಿಗಳಾದ ಸಂದೇಶ್ ಕುಮಾರ್, ಶಾಂತಮಲ್ಲಪ್ಪ, ಎಸ್‌ಇ ಗಂಗಾಧರಸ್ವಾಮಿ, ಅಶ್ವಥ್ ನಾರಾಯಣ, ಗಜೇಂದ್ರ ಪ್ರಸಾದ್ ಸೇರಿದಂತೆ ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಸಬ್ ಇನ್ಸ್‌ಪೆಕ್ಟರ್‌ಗಳು, ಶ್ವಾನದಳ, ಸಿಸಿಬಿ ಪೊಲೀಸರು ಪಾಲ್ಗೊಂಡಿದ್ದರು.

ಅಪಾರ್ಟ್‌ಮೆಂಟ್ ನಿರ್ಮಾಣ ಒಪ್ಪಂದ ಕರಾರು ಉಲ್ಲಂಘನೆ ಆರೋಪ

ಡೆವಲಪರ್ ಜಯರಾಂ ಪಾಠಕ್, ಶ್ರೀಹರಿ ಪಾಠಕ್ ವಿರುದ್ಧ ಪ್ರಕರಣ ದಾಖಲು

ಮೈಸೂರು, ಫೆ.9–ಖಾಲಿ ನಿವೇಶನದಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ 7 ಫ್ಲಾಟ್‌ಗಳನ್ನು ನೀಡುವುದಾಗಿ ಒಪ್ಪಂದ ಮಾಡಿಕೊಂಡು ಜಮೀನು ಮಾಲೀಕರಿಗೆ ವಂಚಿಸಿರುವ ಬಗ್ಗೆ ಮೈಸೂರಿನ ಡೆವಲಪರ್‌ಗಳಾದ ಜಯರಾಂ ಪಾಠಕ್ ಮತ್ತು ಶ್ರೀಹರಿ ಪಾಠಕ್ ವಿರುದ್ಧ ಪ್ರಕರಣ ದಾಖಲಾಗಿದೆ. ಮೈಸೂರಿನ ಎನ್.ಆರ್. ಮೊಹಲ್ಲಾ ನಿವಾಸಿಗಳಾದ ಶಾಹಿದ್ ಅಹಮದ್ ಖಾನ್, ಅವರ ಪತ್ನಿ ಡಾ. ರೇಷ್ಮಾ ಉಸ್ಮಾನ್ ಮತ್ತು ಶ್ರೀಮತಿ ಇಂದ್ರಾ ತಿಮ್ಮಯ್ಯ ವಂಚನೆಗೊಳಗಾದವರು.

ವಿವರ: ಶಾಹಿದ್ ಅಹಮದ್ ಮತ್ತಿತರರು ಹಿನಕಲ್ ಸರ್ವೆ ನಂ.200/3ಡಿ ಪೈಕಿ 5 ಗುಂಟೆ ಅನ್ಯಕ್ರಾಂತವಾಗಿರುವ ಭೂಮಿಯನ್ನು ಖರೀದಿಸಿದ್ದರು. ಇವರನ್ನು ಸಂಪರ್ಕಿಸಿದ ಪಾಠಕ್, ಇವರ ಭೂಮಿಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಒಟ್ಟು 16 ಫ್ಲಾಟ್‌ಗಳ ಪೈಕಿ 7 ಫ್ಲಾಟ್‌ಗಳನ್ನು ಭೂ ಮಾಲೀಕರಿಗೆ ನೀಡುವುದಾಗಿಯೂ, 9 ಫ್ಲಾಟ್‌ಗಳನ್ನು ಡೆವಲಪರ್‌ಗಳು ಇಟ್ಟುಕೊಳ್ಳುವುದಾಗಿಯೂ ಒಪ್ಪಂದ ಮಾಡಿಕೊಂಡಿದ್ದಾರೆ.

ಒಪ್ಪಂದದ ಕರಡನ್ನು ಶಾಹಿದ್ ಅಹಮದ್ ಮತ್ತಿತರರಿಗೆ ಪಾಠಕ್ ತೋರಿಸಿದ್ದಾರೆ. ಆದರೆ ನೋಂದಣಿ ಮಾಡುವ ಸಂದರ್ಭದಲ್ಲಿ ಭೂ ಮಾಲೀಕರ ಗಮನಕ್ಕೆ ಬಾರದೇ ಎಲ್ಲಾ ಫ್ಲಾಟ್‌ಗಳನ್ನು ಮಾರಾಟ ಮಾಡುವ ಹಕ್ಕು ಇಬ್ಬರೂ ಪಾಠಕ್‌ಗಳಿಗಿರುವಂತೆ ನಮೂದಿಸಲಾಗಿದೆ. ಕರಡು ಪ್ರತಿಯನ್ನು ನೋಡಿ ಅದೇ ರೀತಿ ನೋಂದಣಿ ಪತ್ರವೂ ಎಂದು ನಂಬಿ ತಾವು ನೋಂದಣಿ ವೇಳೆ ಸಹಿ ಮಾಡಿರುವುದಾಗಿ ಶಾಹಿದ್ ಅಹಮದ್ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಅಪಾರ್ಟ್‌ಮೆಂಟ್ ನಿರ್ಮಾಣ ಕಾಮಗಾರಿ 18 ತಿಂಗಳಲ್ಲಿ ಮುಗಿಸುವುದಾಗಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಅದನ್ನು ಮತ್ತೆ 6 ತಿಂಗಳು ಕಾಲಾವಕಾಶ ವಿಸ್ತರಿಸಿ ಮರು ಒಪ್ಪಂದವನ್ನು ಮಾಡಿಕೊಂಡಿದ್ದರು. ಆಗಲೂ ಕಾಮಗಾರಿ ಮುಗಿಯದ ಕಾರಣ ಭೂ ಮಾಲೀಕರು ಮತ್ತು ಪಾಠಕ್ ನಡುವೆ 2013ರ ಅಕ್ಟೋಬರ್ 28ರಂದು ಮತ್ತೊಂದು ಒಪ್ಪಂದ ಕರಾರು ಮಾಡಿಕೊಳ್ಳಲಾಗಿದೆ ಎಂದು ದೂರಿನಲ್ಲಿ ವಿವರಿಸಲಾಗಿದೆ.


ವಿನಾ ಕಾರಣ ಕಾಮಗಾರಿ ಪೂರ್ಣಗೊಳಿಸುವುದನ್ನು ವಿಳಂಬ ಮಾಡುತ್ತಿದ್ದರಿಂದ ಸಂಶಯಪಟ್ಟ ಶಾಹಿದ್ ಅಹಮದ್ ಮತ್ತಿತರರು ದಾಖಲಾತಿಗಳನ್ನು ಪರಿಶೀಲಿಸಿದಾಗ ಭೂ ಮಾಲೀಕರಿಗೆ ಸೇರಿದ 7 ಫ್ಲಾಟ್‌ಗಳನ್ನು ಜಯರಾಂ ಪಾಠಕ್ ಮತ್ತು ಶ್ರೀಹರಿ ಪಾಠಕ್ ಕೋಟ್ಯಾಂತರ ರೂ.ಗಳಿಗೆ ಮಾರಾಟ ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಫೆ.9– ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ 2022–23ನೇ ಸಾಲಿಗೆ ಭಾರತೀಯ ಸೇನೆ, ಭದ್ರತಾ ಪಡೆ, ಪೊಲೀಸ್ ಸೇವೆ ಸೇರಿದಂತೆ ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರಲು ಬಯಸುವ ಪರಿಶಿಷ್ಟ ಜಾತಿ, ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ಉಚಿತ ವಸತಿಯುತ ವ್ಯಕ್ತಿ ಮಾರ್ಗದರ್ಶನ ಹಾಗೂ ತರಬೇತಿ ನೀಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಆನ್–ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಫೆ.15 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್ www.sw.kar.nic.in ಅನ್ನು ಸಂಪರ್ಕಿಸಲು ಸಮಾಜ ಕಲ್ಯಾಣ ಇಲಾಖೆಯ ಅಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ. ಬೋರೇಗೌಡ ಚಿಕ್ಕಮರಳಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ :** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ– ಕೃಪಾ ನಾಡಿಗ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರ ನಾರೇಯಣ–ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್. ರಘು, 4.00 ಮಹಿಳಾರಂಗ–ಸಖಿಪದ, 4.30ವೃತ್ತಿ ಮಾರ್ಗದರ್ಶನ–ಸೈಕಲಿಂಗ್ ಕ್ರೀಡೆಯಲ್ಲಿರುವ ಅವಕಾಶಗಳು ಕುರಿತು ಲೋಕೇಶ್ ನರಸಿಂಹಾಚಾರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ –ಕಿಸಾನ್ ವಾಣಿ–ಮಳೇ ಆಶ್ರಿತ ಕೃಷಿಯಲ್ಲಿನ ಅನುಭವ ಕುರಿತು ಮಹೇಶ್ ಅವರೊಂದಿಗೆ ಸಂದರ್ಶನ, 9.00 ಕನ್ನಡ ಭಾರತಿ, 9.15 ಜನಪದ ಸಂಗೀತ

ಇಂದಿನ ಪಂಚಾಂಗ

10.2.2023 ಶುಕ್ರವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಫೆಬ್ರವರಿ ತಿಂಗಳ ಕಾರ್ಯಕ್ರಮಗಳು, ಸಂಜೆ 6 ರಿಂದ ವಿದ್ವಾನ್ ಶ್ರೀನಿಧಿ ಶೀರೂರು ಅವರಿಂದ ವೇಣುವಾದನ, ವಿದುಷಿ ಸುವ್ಯಕ್ತ ಸಿಂಹ, ವಿದ್ವಾನ್ ಎಂ.ಎಸ್. ಕೌಸ್ತುಭ, ವಿದ್ವಾನ್ ವಿ.ಜಿ. ನಾಗರಾಜ ಅವರಿಂದ ಗಾಯನ, ವಿದ್ವಾನ್ ಅಮೋಘ್–ಪಿಟೀಲು, ವಿದ್ವಾನ್ ಶುಭಾಂಗ್–ಮೃದಂಗ, ಸ್ಥಳ: ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು, ಸೊಂಟ, ಭುಜ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್, ಬೆಂಗಳೂರು :** ಮೈಸೂರು ವಿಭಾಗ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್ ಸಂಸ್ಥಾಪಕ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ, ಮುಖ್ಯ ಅತಿಥಿಗಳು : ಶಾಸಕ ಎಸ್.ಎ. ರಾಮದಾಸ್, ವಿಶ್ವ ವಿಪ್ರತ್ರಯೀ ಪರಿಷತ್ ಅಧ್ಯಕ್ಷ ಎಸ್. ರಘುನಾಥ್, ಮೈಸೂರು ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್, ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್, ಮೈಸೂರು ವಿಭಾಗ ಸಂಚಾಲಕ ರಮಾಕಾಂತ ಶೆಣೈ, ಸ್ಥಳ: ಶ್ರೀರಾಮ ಮಂದಿರ ಸಭಾ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30ಕ್ಕೆ.

■ **ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ಫಿಜಿಯೋಥೆರಪಿ ಕಾಲೇಜು** : ವಾರ್ಷಿಕ ಎನ್‌ಎಸ್‌ಎಸ್ ವಿಶೇಷ ಶಿಬಿರ, ಬೆಳಗ್ಗೆ 10 ರಿಂದ ಉಚಿತ ಫಿಜಿಯೋಥೆರಪಿ ತಪಾಸಣೆ ಮತ್ತು ವೈದ್ಯಕೀಯ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ವೈದ್ಯಕೀಯ ಕಾಲೇಜು.

■ **ಅಕ್ಯೂಪಂಚರ್ ಅಸೋಸಿಯೇಷನ್ ಮತ್ತು ಓರಿಯೋಲಸ್ ಯೋಗಾಸಂಸ್ಥೆ :** ಉಚಿತ ಅಕ್ಯೂಪಂಚರ್ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ, ಸ್ಥಳ: ಅಕ್ಯೂಪಂಚರ್ ಅಸೋಸಿಯೇಷನ್, ಬೆಳಗ್ಗೆ 11 ರಿಂದ.

■ **ಶ್ರೀ ವಿನಾಯಕ ಕಲಾ ಬಳಗ ಟ್ರಸ್ಟ್ :** ಶ್ರೀ ಕೃಷ್ಣ ಸಂಧಾನ ಪೌರಾಣಿಕ ನಾಟಕ ಪ್ರದರ್ಶನ, ಸ್ಥಳ: ಸಿ.ವಿ. ರಂಗಚಾರ್ಲು ಸ್ಮಾರಕ ಭವನ, ಮಧ್ಯಾಹ್ನ 2 ರಿಂದ.

■ **ಯುವ ಚಿಂತನ ಫೌಂಡೇಷನ್, ಬೆಂಗಳೂರು :** ಇಕೊ ಸ್ಟೆಮ್ ವರ್ಷದ ಶಿಕ್ಷಕ, ಶಿಕ್ಷಕಿ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಲಕ್ಷ್ಮಣ ಅಯ್ಯಪ್ಪ ಕುಲಗೋಡ್, ಉಪಸ್ಥಿತರು : ಕಾವಾ ಅನ್ವಯಿಕ ಕಲಾ ವಿಭಾಗದ ಮುಖ್ಯಸ್ಥ ಬಿಂದುರಾಯ ಬಿರಾದಾರ್, ವನ್ಯಜೀವಿ ಛಾಯಾಚಿತ್ರ ಕಲಾವಿದ ಶಾಂತಪ್ಪ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30ಕ್ಕೆ.

■ **ಭೂಷಣ್ ಪ್ರದರ್ಶಕ ಕಲೆಗಳು ಮತ್ತು ದೃಶ್ಯ ಪ್ರಸ್ತುತಿ ಅಕಾಡೆಮಿ :** ಅಂತರರಾಷ್ಟ್ರೀಯ ಖ್ಯಾತಿಯ ನೃತ್ಯ ದಂಪತಿಗಳಾದ ಬದರಿ ದಿವ್ಯ ಭೂಷಣ್ ಮತ್ತು ಶ್ರೀಮತಿ ಅಂಜನ್ ಭೂಷಣ್ ಅವರ ಪುತ್ರಿ ಚಿನ್ಮಯಿ ಆಚಾರ್ಯಳ ಕಿಂಕಿಣಿ ಪೂಜಾ ನೃತ್ಯೋತ್ಸವ, ಉಪಸ್ಥಿತರು : ಶ್ರೀ ಭಾನುಪ್ರತಾಪ್ ಶರ್ಮಾ ಗುರೂಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ವಿದುಷಿ ತುಳಸಿ ರಾಮಚಂದ್ರ, ವಿದ್ವಾನ್ ಕೆ. ಗುರುಪ್ರಸಾದ್, ವಿಶ್ವ ವಿಕಾಸ ಟ್ರಸ್ಟ್ ಅಧ್ಯಕ್ಷ ಮಂಟೇಲಿಂಗಾಚಾರ್, ಸ್ಥಳ: ರಮಾ ಗೋವಿಂದ ಸಭಾಂಗಣ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಮಹಾಶಿವರಾತ್ರಿ ಪ್ರಯುಕ್ತ ರಾಮಕೃಷ್ಣನಗರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ, ಪ್ರತಿದಿನ ಸಂಜೆ 6.30 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 7 ರಿಂದ ಬಿ.ಕೆ. ಯೋಗೇಶ್ವರಿ ಅವರಿಂದ ರಾಜಯೋಗಧ್ಯಾನದ ಮೂಲಕ ಅಷ್ಟಶಕ್ತಿಗಳ ಕುರಿತು ಉಪನ್ಯಾಸ, ಸ್ಥಳ: ಖಾಲಿ ನಿವೇಶನ, ಸುಮಿತ್ರ ಸ್ಟೀಲ್ ಎದುರು, ಚದುರಂಗ ರಸ್ತೆ, ರಾಮಕೃಷ್ಣನಗರ, ಐ ಬ್ಲಾಕ್.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಕುರುಬರ ಹುಂಡಿ, ಜ್ಯೋತಿಗೌಡನಪುರ, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆಯಲ್ಲಿ ವಾಸವಾಗಿರುವ ಕೆ.ಎಂ.ಮಂಜು ಅವರಿಗೆ ಸೇರಿದ ಖಾತಾ ಜಂಜರ್ ನಂ.109, ಸ್ವತ್ತಿನ ಸಂಖ್ಯೆ 101/1, ನಿವೇಶನ ಸಂಖ್ಯೆ 13ಕ್ಕೆ ಸೇರಿದ ದಿನಾಂಕ: 12-03-2012 ರ ಕ್ರಯಪತ್ರ ದಾಸ್ತವೇಜು ಸಂಖ್ಯೆ MYN-1-28805-2011-12, CD.No.MYND313, ಹಾಗೂ ದಿನಾಂಕ: 29-10-2014 ಮೈಸೂರು ಮಹಾ ನಗರಪಾಲಿಕೆ ನೀಡಿದ ಖಾತಾ ನಂ.9, ಪಿ.ಆರ್.ಕೆ.ಟಿ 10/2014-15, ಕಳೆದು ಹೋಗಿರುತ್ತದೆ ಇದರ ಸಂಬಂಧ ದಿನಾಂಕ: 07-02-2023 ರಂದು ಪೋಲಿಸ್ ಇಲಾಖೆಗೆ ದೂರನ್ನು PO0883230600112 ರಂತೆ ದೂರು ದಾಖಲಿಸಿರುತ್ತಾರೆ. ಸದರಿ ದಿನಾಂಕ: 12-03-2012 ರ ಕ್ರಯಪತ್ರವು ಯಾರಿಗಾದರು ದೊರಕಿದ್ದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ / ವ್ಯಕ್ತಿಗಳು ಸದರಿ ಕ್ರಯ ಪತ್ರವನ್ನು ದುರುಪಯೋಗ ಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೆ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

Sd/- Lohith.N., B.A.L., LL.B.,
Advocate, Sri Sai Law Associates
No.2967/2, 14th Main, 2nd Cross,
Saraswathipuram, Mysuru - 570 009
E-mail: lohiadv@gmail.com, Cell: 9611113323
ದಿನಾಂಕ: 09-02-2023, ಸ್ಥಳ: ಮೈಸೂರು

7ನೇ ವರ್ಷದ ಸವಿನೆನಪು



ಶ್ರೀ ರಂಗೋಲೆ ಲಿಂಗಯ್ಯ (ಪಡುವರಹಳ್ಳಿ) ನರಸಮ್ಮ
ಮನೆ ನಂ. 24, 11ನೇ ಕ್ರಾಸ್, ಮಾದೇಗೌಡ ಸರ್ಕಲ್, ಹೆಬ್ಬಾಳ್ 1ನೇ ಹಂತ, ಮೈಸೂರು. ತಾವು ಇಂದಿಗೆ ನಮ್ಮನ್ನಗಲಿ 7 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿ ನಾವಿದ್ದೇವೆ.
ಇಂತಿ ನಿಮ್ಮ ನರಸಿಂಹ, ಚಿಕ್ಕಣ್ಣ, ರಾಮು, ಲೇಟ್ ರಾಜು ಹಾಗೂ ಕುಟುಂಬವರ್ಗದವರು.

ಎರಡನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ **ಶ್ರೀಮತಿ ಜಯಮ್ಮ** ನಿಮ್ಮ ನೆನಪಿನಲ್ಲಿರುವ
ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ. ರಸ್ತೆ, ಮೈಸೂರು

ಸಂಖ್ಯೆ: ಮೈನಪ್ರಾ/ವಿ.ತ-1/2022-23 ದಿನಾಂಕ: 06-02-2023

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಮೈಸೂರು) ವತಿಯಿಂದ ನಂ. 1/6, 3ನೇ ಕ್ರಾಸ್, ಕುರುಬಾರಹಳ್ಳಿ, ಮೈಸೂರು-11 ರ ನಿವಾಸಿಯಾದ ಶ್ರೀ ಎಂ. ಹನುಮಂತಯ್ಯ ರವರ ಮಗನಾದ ಶ್ರೀ ಹೆಚ್. ಪಾಂಡುರಂಗ ನಾಯಕ್ ರವರಿಗೆ ನಾಚನಹಳ್ಳಿ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ-212, ಅಳತೆ **30x40** ಅಡಿಗಳ ನಿವೇಶನವು ದಿನಾಂಕ: 31-03-1986 ರಂದು ಮಂಜೂರಾಗಿದ್ದು, ನಂತರ ದಿನಾಂಕ: 18-07-1994 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ನಂತರ ಮೂಲ ಮಂಜೂರಾತಿದಾರರಾದ ಶ್ರೀ ಹೆಚ್. ಪಾಂಡುರಂಗ ನಾಯಕ್ ರವರು ಶ್ರೀ ಆರ್. ಖಂಡೋಜಿರಾವ್, ನಂ. 226, ಬನ್ನಿಮಂಟಪ ಬಡಾವಣೆ, ಮಂಡಿಮೊಹಲ್ಲಾ, ಮೈಸೂರು ರವರಿಗೆ ನಿವೇಶನದ ಕೆಲಸ ಕಾರ್ಯಗಳು ಮತ್ತು ಇತರೆ ಪತ್ರಗಳ ವ್ಯವಹಾರಗಳನ್ನು ನಿರ್ವಹಿಸಲು ಮಾತ್ರ ನೊಂದಾಯಿತ ಜಿ.ಪಿ.ಎ. ನೀಡಿದ್ದು, ಈ ಜಿ.ಪಿ.ಎ. ಪತ್ರವು ಉಪನೊಂದಣಾಧಿಕಾರಿಗಳು, ಮೈಸೂರು ದಕ್ಷಿಣ ಇವರ ಕಛೇರಿಯಲ್ಲಿ 4ನೇ ಪುಸ್ತಕದ 270ನೇ ಸಂಪುಟದಲ್ಲಿ 96ನೇ ಪುಟದಲ್ಲಿ 1275ನೇ ನಂಬರಾಗಿ ದಿನಾಂಕ: 30-10-1996 ರಂದು ನೊಂದಾಯಿಸಲಾಗಿರುತ್ತದೆ.

ನಂತರ ಜಿ.ಪಿ.ಎ. ದಾರರಾದ ಶ್ರೀ ಶ್ರೀ ಆರ್. ಖಂಡೋಜಿರಾವ್ ರವರು ಶ್ರೀಮತಿ ಸುಶೀಲಮ್ಮ, ನಂ. 40, 11ನೇ ಮೇನ್, ಜೆ.ಪಿ. ನಗರ 'ಡಿ' ಬ್ಲಾಕ್, ಖಿಲ್ಲೆ ಮೊಹಲ್ಲಾ, ಮೈಸೂರು ರವರಿಗೆ ನೊಂದಾಯಿತ ಶುದ್ಧಕ್ರಯ ಮಾಡಿದ್ದು, ಈ ಶುದ್ಧಕ್ರಯ ಪತ್ರವು ಮೈಸೂರು ದಕ್ಷಿಣ ಇವರ ಕಛೇರಿಯಲ್ಲಿ 1ನೇ ಪುಸ್ತಕದ 4817ನೇ ಸಂಪುಟದಲ್ಲಿ 6-8ನೇ ಪುಟದಲ್ಲಿ 2946ನೇ ನಂಬರಾಗಿ ದಿನಾಂಕ: 16-08-1997 ರಂದು ನೊಂದಾಯಿಸಲಾಗಿರುತ್ತದೆ. ನೊಂದಾಯಿತ ಶುದ್ಧಕ್ರಯ ಪತ್ರದ ಆಧಾರದ ಮೇಲೆ ಶ್ರೀಮತಿ ಸುಶೀಲಮ್ಮ ರವರು ಮೇಲ್ಕಂಡ ನಿವೇಶನಕ್ಕೆ ಕ್ರಯ ವರ್ಗಾವಣೆ / ಕ್ರಯಪತ್ರವನ್ನು ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೈಸೂರು ನಗರ, ನಾಚನಹಳ್ಳಿ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ-212, ಅಳತೆ **30x40** ಅಡಿಗಳ ನಿವೇಶನವನ್ನು ಶ್ರೀಮತಿ ಸುಶೀಲಮ್ಮ, ನಂ. 40, 11ನೇ ಮೇನ್, ಜೆ.ಪಿ. ನಗರ 'ಡಿ' ಬ್ಲಾಕ್, ಮೈಸೂರು ರವರ ಹೆಸರಿಗೆ ನಿವೇಶನ ವರ್ಗಾವಣೆ ಮಾಡಿ ಕ್ರಯಪತ್ರ ನೀಡಲು ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ/ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಅರ್ಜಿದಾರರ ಮನವಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಹಿ/- ವಿಶೇಷ ತಹಶೀಲ್ದಾರ್, ವಲಯ ಕಛೇರಿ-1, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಗೆ, ಶ್ರೀಮತಿ ಡಿ. ಪದ್ಮ, ನಂ. 760/ಎ, 4ನೇ ಮೇನ್, 24ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು



STAR OF MYSORE
SPECIAL ISSUE
Star of Mysore is completing **45** years of service on **16th February 2023** and entering **46th** year of publication. As in the past, this year too we will be publishing a Special Issue.
We request our advertisers and patrons to release their advertisements before **12th February** to facilitate printing as per schedule.
HEAD OFFICE
0821-2496520 (5-LINES)
0821-2496522 / 23
Email : ad@starofmysore.com
Maria G. Fernandes
Advt. Manager: 94485-25060
Joy Anthony Dove
Sr. Executive-Ad Sales
89516-68960
Prema
Sr. Executive Advertising
98805-49879
K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud : 99016-02226
Hassan : 94484-01175
Bengaluru : 98440-46761

ದೂ:08221-226309 ಇ-ಮೇಲ್: apmcnanjanagud@rediffmail.com,

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು

ಹುಲ್ಲಹಳ್ಳಿ ರಸ್ತೆ ನಂಜನಗೂಡು-571301

ಸಂ.ಕೃಉಮಾಸ(ನಂ)/450/2022-23 ದಿನಾಂಕ: 07.02.2023

ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಈ ಕೆಳಕಂಡ ಸಣ್ಣ ಅಂಗಡಿ ಮಳಿಗೆಗಳನ್ನು (ಜೇಷ್ಠತಾ ಆಧಾರದ ಮೇಲೆ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ರನ್ವಯ ಲೀವ್‌ಅಂಡ್ ಲೈಸನ್ಸ್ ಆಧಾರದ ಮೇಲೆ ಹಾಗೂ 33 ತಿಂಗಳುಗಳ ನಂತರ ಶೇ 5ರಷ್ಟನ್ನು ಹೆಚ್ಚಿಸುವ ಹಾಗೂ ಗರಿಷ್ಠ 55 ತಿಂಗಳ ಅವಧಿಗೆ ಅರ್ಹ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ವಿವರ	ನೋಂದಣಿ ಶುಲ್ಕ (ತೆರಿಗೆ ಪ್ರತ್ಯೇಕ)	ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ	ಮುಂಗಡ ಠೇವಣಿ ರೂ.
01	ನಂಜನಗೂಡು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 8 ಸಂಖ್ಯೆ ಸಣ್ಣ ಅಂಗಡಿ ಮಳಿಗೆ ಗಳಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ 01,03,05,06,08	500-00	2167-00	5000-00
02	ನಂಜನಗೂಡು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 03 ಸಂಖ್ಯೆ ಸಣ್ಣಂಗಡಿ ಮಳಿಗೆಗಳಲ್ಲಿ ಬಾಕಿಯಿರುವ ಮಳಿಗೆ ಸಂಖ್ಯೆ 03	500-00	3350-00	6700-00

ಷರತ್ತು ಹಾಗೂ ನಿಭಂಧನೆಗಳು: 1) ದಿ: 24.02.2023 ಒಳಗಾಗಿ ರೂ.500-00 ಗಳನ್ನು ಕಛೇರಿಯಲ್ಲಿ ಪಾವತಿಸಿ ಅರ್ಜಿ ಸಲ್ಲಿಸಿ ನೋಂದಾವಣೆ ಮಾಡಿಕೊಳ್ಳತಕ್ಕದ್ದು. 2) ನೋಂದಾವಣೆ ಪಡೆದ ಅರ್ಜಿದಾರರು ನಿಗಧಿತ ಅರ್ಜಿ ನಮೂನೆಯೊಂದಿಗೆ ಮುಂಗಡ ಪಾವತಿಸಲು ಕೊನೆಯ ದಿ: 02.03.2023ರ ಸಂಜೆ 04.00ಗಂಟೆಯವರೆಗೆ 3) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು ಇವರ ಹೆಸರಿನಲ್ಲಿ ಮುಂಗಡ ಠೇವಣಿಯ ಡಿ.ಡಿಯನ್ನು ನಂಜನಗೂಡಿನಲ್ಲಿ ನಗದಾಗುವಂತೆ ಖರೀದಿಸಿ ಸಲ್ಲಿಸುವುದು. 5) ಈ ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟಿರುತ್ತದೆ. 6) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ರಂತೆ ಮಳಿಗೆ ಸಂಖ್ಯೆ 05ನ್ನು ಮಹಿಳೆಯರಿಗೆ ಹಾಗೂ 06 ನ್ನು ಪರಿಶಿಷ್ಠ ಪಂಗಡದವರಿಗೆ ಮಳಿಗೆ ಸಂಖ್ಯೆ 08ನ್ನು ಎಫ್.ಪಿ.ಓ ಗೆ ಮೀಸಲಿರಿಸಲಾಗಿದೆ. 5) ಹೆಚ್ಚಿನ ಷರತ್ತು ಹಾಗೂ ನಿಭಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- (ಮಹೇಶ.ಬಿ), ಕಾರ್ಯದರ್ಶಿ, ಕೃ.ಉ.ಮಾ.ಸ., ನಂಜನಗೂಡು
ಸಹಿ/- (ಎಂ.ಶಿವಮೂರ್ತಿ), ಆಡಳಿತಾಧಿಕಾರಿ, ಕೃ.ಉ.ಮಾ.ಸ., ನಂಜನಗೂಡು

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ -571107

ಈ-ಮೇಲ್ :itstaff_ulb_periyapatna@yahoo.com Phone(O): 08223-273036

ಸಂ:ಪಿಪುಸ/ತಾಂತ್ರಿಕ/ಜೆಇ.2/ಟೆಂಡರ್-17/2022-23 ದಿನಾಂಕ: 04.02.2023

ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ 2022-23ನೇ ಸಾಲಿನ ಪುರಸಭಾ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಟೆಂಡರ್‌ಗಳನ್ನು ನಿಗಧಿತ ಇ.ಎಂ.ಡಿ. (ಮುಖ್ಯಾಧಿಕಾರಿಗಳ ಹೆಸರಿಗೆ ಡಿ.ಡಿ.)ಯನ್ನು ಲಕೋಟೆಯಲ್ಲಿಟ್ಟು ಸೀಲ್ ಮಾಡಿ ಸೂಚಿತ ದಿನಾಂಕದೊಳಗೆ ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ ಇವರಿಗೆ ತಲುಪಿಸತಕ್ಕದ್ದು.

ಟೆಂಡರ್ ಸಲ್ಲಿಸುವ ವಿವರ: 1) ಟೆಂಡರ್ ಫಾರಂಗಳಿಗೆ ಕೋರಿಕೆ ಅರ್ಜಿ ಸಲ್ಲಿಸಲು ಮತ್ತು ಟೆಂಡರ್ ಫಾರಂ ಪಡೆಯಲು ಕೊನೆಯ ದಿ: 22.02.2023ರ ಸಾಯಂಕಾಲ 03.30 ಗಂಟೆವರೆಗೆ. 2) ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ಕಛೇರಿಗೆ ಸಲ್ಲಿಸುವ ಕೊನೆಯ ದಿ: 24.02.2023ರ ಸಾಯಂಕಾಲ 04.00 ಗಂಟೆವರೆಗೆ. 3) ಟೆಂಡರ್ ತೆರೆಯುವ ದಿ: 24.02.2023 ರ ಸಾಯಂಕಾಲ 05.00 ಗಂಟೆ ಅಥವಾ ಸೂಚಿಸಿದ ದಿನದಂದು

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ
1	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯ ಲಿಂಗಾಯಿತ ಸ್ಮಶಾನಕ್ಕೆ ಮತ್ತು ವಾರ್ಡ್ ನಂ.10ರ ಕೃಷ್ಣಾಪುರದಲ್ಲಿರುವ ಮಾಸ್ಟರ್ ಮಹದೇವ ಮನೆಯ ಹಿಂಭಾಗದಿಂದ ಕಮಾಕ್ಷಿ ಮನೆಯವರೆಗೆ ಹೊಸದಾಗಿ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಸುವ ಕಾಮಗಾರಿ.	2,50,000/-	6,250/-	300/- (+ ಜಿಎಸ್‌ಟಿ)	4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು
2	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳಿಗೆ ನಾಮಫಲಕವನ್ನು ಮಾಡಿಸಿ ಅಳವಡಿಸುವ ಕಾಮಗಾರಿ.	4,50,000/-	11,250/-	500/- (+ ಜಿಎಸ್‌ಟಿ)	4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು
3	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ ಪ್ರಮುಖ ವೃತ್ತಗಳಿಗೆ ನಾಮಫಲಕವನ್ನು ಮಾಡಿಸಿ ಅಳವಡಿಸುವ ಕಾಮಗಾರಿ.	4,50,000/-	11,250/-	500/- (+ ಜಿಎಸ್‌ಟಿ)	4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/- (ಶ್ರೀ. ಕೆ. ಮಹೇಶ್), ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/- (ಶ್ರೀಮತಿ ಆಶಾ ಪಿ.ಕೆ.), ಉಪಾಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/- (ಶ್ರೀ ಪಿ.ಸಿ. ಕೃಷ್ಣ), ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/- (ಶ್ರೀ ಮಹೇಂದ್ರ ಬಿ), ಮುಖ್ಯಾಧಿಕಾರಿ, ಪುರಸಭೆ, ಪಿರಿಯಾಪಟ್ಟಣ

DIPR/DDMYS/KSMCA/988/2022-23



ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಒಂದೇ ಸಲ ನಾಲ್ಕು ಹಲ್ಲು ಹೇಗೆ ಹೋಯ್ತು?
ಆತ : ನನ್ನ ಹೆಂಡತಿ ಚಕ್ಕುಲಿ ಮಾಡಿದ್ಲು
ಡಾಕ್ಟರ್ : ಬೇಡ ಅನ್ನಬೇಕಾಗಿತ್ತು.
ಆತ : ತಿಂದಿದ್ದಕ್ಕೆ ಒಂದು ಹೋಯ್ತು.
ಬೇಡ ಅಂದಿದ್ದಕ್ಕೆ ಮೂರು ಹೋಯ್ತು!

ಮೈಸೂರು ಮಿತ್ರ

ಶುಕ್ರವಾರ, 10 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಆಸೆ ಎಂಬುದು ಮನುಷ್ಯನಿಗೆ ಒಂದು ವರ.
ವಂಚಿಸಲಾರದಂತಹ ಆಸೆಯೇ ವಿವೇಕ – ಜಾನ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತುಪ್ಪ ತಿಂದ ಮಾತಿಗಷ್ಟು ತಪ್ಪು ಮಾತು ಬಂತು.

ನಿಮ್ಮ ಪತ್ರಗಳು

ಮೈಸೂರು ರೈಲ್ವೆ ನಿಲ್ದಾಣದಲ್ಲಿ ನೂಕು–ನುಗ್ಗಲು ಪರಿಸ್ಥಿತಿ





ಮಾನ್ಯರೆ,

ಮೈಸೂರು ರೈಲ್ವೆ ನಿಲ್ದಾಣದಿಂದ ರಾತ್ರಿ 9 ಗಂಟೆಗೆ ಹೊರಡುವ ಕಾವೇರಿ ಎಕ್ಸ್‌ಪ್ರೆಸ್ ರೈಲು ಹೊರಡುವ ಸಂದರ್ಭದಲ್ಲಿ ಉಂಟಾಗುವಂತಹ ನೂಕು–ನುಗ್ಗಲು ಪರಿಸ್ಥಿತಿಯನ್ನು ರೈಲ್ವೆ ಅಧಿಕಾರಿಗಳ ಗಮನಕ್ಕೆ ತರಲು ಬಯಸುತ್ತೇನೆ.

ಕಾವೇರಿ ಎಕ್ಸ್‌ಪ್ರೆಸ್ ರೈಲು ಪ್ಲಾಟ್‌ಫಾರ್ಮ್–5ರಿಂದ ಹೊರಡುತ್ತದೆ. ಈ ಪ್ಲಾಟ್‌ಫಾರ್ಮ್‌ಗೆ ಹೋಗುವ ವೇಳೆ ಬ್ರಿಡ್ಜ್ ಮೇಲೆ ಪ್ರತೀ ದಿನವೂ ನೂಕು–ನುಗ್ಗಲು, ಕಾಲ್ತುಳಿತದಂತಹ ಪರಿಸ್ಥಿತಿ ಇದ್ದೇ ಇರುತ್ತದೆ. ಕಾರಣ, ವಿಶ್ವಮಾನವ ಎಕ್ಸ್‌ಪ್ರೆಸ್ ರೈಲು ರಾತ್ರಿ 8.40ಕ್ಕೆ ಮೈಸೂರಿಗೆ ಬರುವುದರಿಂದ ಅದರಿಂದ ಇಳಿಯುವ ಮತ್ತು ಹತ್ತುವ ಪ್ರಯಾಣಿಕರಿಂದಾಗಿ ನೂಕು–ನುಗ್ಗಲು ಉಂಟಾಗುತ್ತಿದೆ. ಕಾವೇರಿ ಎಕ್ಸ್‌ಪ್ರೆಸ್ ರಾತ್ರಿ 9 ಗಂಟೆಗೆ ಹೊರಡುವುದರಿಂದ ಆ ರೈಲಿಗೆ ಪ್ರಯಾಣಿಕರು ಆತುರಾತುರದಲ್ಲಿ ಹತ್ತಲು ಮುಂದಾಗುತ್ತಾರೆ. ಇದು ನೂಕು–ನುಗ್ಗಲಿನಂತಹ ಪರಿಸ್ಥಿತಿಗೆ ಮತ್ತೊಂದು ಕಾರಣವಾಗಿದೆ. ಇದೊಂದು ಗಂಭೀರ ಪರಿಸ್ಥಿತಿ. ಚಿಕ್ಕ ಮಕ್ಕಳು, ಮಹಿಳೆಯರು ಮತ್ತು ವೃದ್ಧರಾದಿ ಈ ನೂಕು–ನುಗ್ಗಲಿಗೆ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದನ್ನು ನಾನು ನೋಡಿದ್ದೇನೆ. ಪ್ರತಿ ಬಾರಿ ನಮ್ಮನ್ನು ದೇವರೇ ಕಾಪಾಡುತ್ತಾ ಬಂದಿದ್ದಾನೆ. ಇದರ ಬಗ್ಗೆ ಯಾವುದೇ ಹಿರಿಯ ರೈಲ್ವೇ ಅಧಿಕಾರಿಗಳು ಗಮನಹರಿಸಿ ಸೂಕ್ತ ಕ್ರಮಕೈಗೊಳ್ಳದಿರುವುದು ನಮಗೆ ತೀವ್ರ ಬೇಸರ ತಂದಿದೆ. ಓರ್ವ ರೈಲ್ವೇ ಕಾನ್‌ಸ್ಟೇಬಲ್ ಏನೂ ಮಾಡದೆ ಸುಮ್ಮನೆ ನಿಂತಿದ್ದನ್ನು ಗಮನಿಸಿದ್ದೇನೆ. ನೂಕು–ನುಗ್ಗಲಿನಿಂದ ದೊಡ್ಡ ದುರಂತ ಸಂಭವಿಸುವ ಸಾಧ್ಯತೆಯೂ ಇದೆ.

ಇದಕ್ಕೆ ಸರಳ ಪರಿಹಾರವೆಂದರೆ ಬ್ರಿಡ್ಜ್ ಮೇಲೆ ಏಕಮುಖ ಸಂಚಾರ ಮಾಡುವುದು ಇಲ್ಲವೇ **ಈ ರೈಲುಗಳ ಪ್ಲಾಟ್‌ಫಾರ್ಮ್ ಬದಲಿಸುವುದು.**

ಸಾರ್ವಜನಿಕರು ಇದನ್ನು ರೈಲ್ವೇ ಅಧಿಕಾರಿಗಳ ಗಮನಕ್ಕೆ ತರಬೇಕಾಗಿದೆ. ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳು ಆದಷ್ಟು ಬೇಗ ಈ ಸಮಸ್ಯೆಯನ್ನು ನಿವಾರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಂದು ನಾನು ಭಾವಿಸುತ್ತೇನೆ.

–ಗಣೇಶ್ ಅನಂತಸ್ವಾಮಿ, ಮೈಸೂರು. 29.1.2023

ತೆರೆದ ಮ್ಯಾನ್‌ಹೋಲ್ ಸರಿಪಡಿಸಿ



ಮಾನ್ಯರೆ,

ಮೈಸೂರು ಶ್ರೀರಾಂಪುರ ಲಿಂಗಾಂಬುಧಿ ಪಾಳ್ಯದಲ್ಲಿರುವ ಅರಿವು ವಿದ್ಯಾಸಂಸ್ಥೆಯ ಎದುರು ಮ್ಯಾನ್‌ಹೋಲ್ ತೆರೆದು ಅಪಾಯಕ್ಕೆ ಆಹ್ವಾನ ನೀಡುವಂತಿದೆ. ಇದರಿಂದ ಶಾಲೆ ಮಕ್ಕಳು, ವಾಹನ ಚಾಲಕರು ಹಾಗೂ ಪಾಳ್ಯದ ಜನರಿಗೆ ತಿರುಗಾಡಲು ತುಂಬಾ ತೊಂದೆಯಾಗುತ್ತಿದೆ. ರಾತ್ರಿ ಸಮಯದಲ್ಲಿ ಓಡಾಡಲು ಬಹಳ ಕಷ್ಟವಾಗುತ್ತದೆ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು ಅಪಾಯ ಸಂಭವಿಸುವ ಮುನ್ನ ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ಈ ಮೂಲಕ ಮನವಿ.

– ಪಾಳ್ಯ ನಿವಾಸಿಗಳು, ಮೈಸೂರು.

ಕನ್ನಡ ಶಾಲೆಗಳನ್ನು ಮುಚ್ಚಬೇಡಿ

ಮಾನ್ಯರೆ,


ತರಗತಿಗಳಲ್ಲಿ ಮಕ್ಕಳ ದಾಖಲಾತಿ ಕೊರತೆಯಿಂದ ಬೀಳುವ ಅನಾವಶ್ಯಕ ಹೊರೆಯಿಂದ ತಪ್ಪಿಸಿಕೊಳ್ಳಲು 5124 ಕನ್ನಡ ಶಾಲೆಗಳನ್ನು ಮುಚ್ಚಲು ಉನ್ನತ ಅಧ್ಯಯನ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿರುವ ಸಂಗತಿ ಆತಂಕಕಾರಿ ಎನಿಸಿದೆ. ಒಂದೆಡೆ ಕಳವಳದ ಜತೆಗೆ ಕನ್ನಡ ಕುರಿತ ನಮ್ಮ ಕಾಳಜಿ ಕಡಿಮೆಯಾಗುತ್ತಿರುವುದಕ್ಕೆ ಬೇಸರವಿದೆ.

ಇದಕ್ಕೆ ಪ್ರಮುಖ ಕಾರಣ ಜನರಲ್ಲಿ ಅತಿಯಾದ ಅನ್ಯಭಾಷಾ ವ್ಯಾಮೋಹ, ಕನ್ನಡ ಶಾಲೆ ಮತ್ತು ಮಾಧ್ಯಮದಲ್ಲಿ ಕಲಿತರೆ ಉದ್ಯೋಗ ಲಭಿಸುವುದಿಲ್ಲ ಎಂಬ ಭಾವನೆಯೇ ಎನ್ನಬಹುದು. ಈ ರೀತಿಯ ದೃಷ್ಟಿಕೋನ ನಮ್ಮ ಪೋಷಕರಲ್ಲಿ ಬದಲಾಗದ ಹೊರತು ಈ ಮುಚ್ಚುವ ಪ್ರಕ್ರಿಯೆ ನಿಲ್ಲುವುದಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಒಂದೆರಡು ಪ್ರಮುಖ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು.

ಸರ್ಕಾರಿ ನೌಕರ ಸರ್ಕಾರೀ ಶಾಲೆಗೆ ತನ್ನ ಮಕ್ಕಳನ್ನು ಸೇರಿಸಬೇಕು. ಇಂತಹ ಮಂದಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ, ಉಳಿದದ್ದು ಆನಂತರ ಎಂಬ ನೀತಿ ತಕ್ಷಣವೇ ಜಾರಿಯಾಗಬೇಕು. ಈ ಬಗ್ಗೆ ಕಠಿಣ ಕಾನೂನು ಕಾರ್ಯರೂಪಕ್ಕೆ ಬರಬೇಕು.

ಒಬ್ಬ ಸ್ವಾಭಿಮಾನಿ ಪ್ರಾಮಾಣಿಕ ಕನ್ನಡದವನಾಗಿ ನನ್ನ ಬಹುದೊಡ್ಡ ಮನವಿ ಇದೆಂದರೆ ತಪ್ಪಾಗಲಾರದು. ಕನ್ನಡ ನನ್ನ ಅಸ್ಮಿತೆ, ಇದರಲ್ಲಿ ಬದುಕು ಬದುಕೇ ಅಲ್ಲ. ಪೋಷಕರಲ್ಲೂ ಈ ಮನೋಭಾವ ತನ್ನಂತೇ ತಾನೇ ಹೋಗಲಾಡಿಸಬೇಕು. ಈ ಬಗೆಯಲ್ಲಿ ಕನ್ನಡದ ಸರ್ಕಾರೀ ಶಾಲೆಗಳನ್ನು ಅಧ್ಯಯನಕ್ಕೆ ಗುಣಮಟ್ಟವಾಗುವ ರೀತಿಯಲ್ಲಿ ಎಲ್ಲಾ ರೀತಿಯ ಮೌಲ್ಯವರ್ಧಿತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲು ಮುಂದಾಗಬೇಕು. ಹೀಗಾದಾಗ ಮಾತ್ರ ಜನರು ಇತ್ತ ಮುಖ ಮಾಡಬಹುದಲ್ಲವೇ. ಈ ಬಗ್ಗೆ ಶಿಕ್ಷಣ ತಜ್ಞರು, ಕನ್ನಡ ಪ್ರಾಧಿಕಾರದವರು, ಕನ್ನಡಪರ, ಕನ್ನಡ ಸಂಸ್ಥೆಗಳ ಹೋರಾಟಗಾರರು, ಶಿಕ್ಷಣ ಮಂತ್ರಿಗಳು ಮುಖ್ಯಮಂತ್ರಿಗಳು ಒಂದು ತುರ್ತು ಸಭೆ ಸೇರಿ ಈ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ನನ್ನಂತಹ ಕನ್ನಡಿಗರ ಬಲವಾದ ಮನವಿ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ ಪಿರಿಯಾಪಟ್ಟಣ ತಾ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಇಟ್ಟು ಹೋಗುವುದಕ್ಕಿಂತ, ಕೊಟ್ಟು ಹೋಗುವುದೇ ಲೇಸು...!

ನಾವು ನಮ್ಮ ಜೀವನ ಸುಭದ್ರವಾಗಿರಬೇಕೆಂದು ಹಲವು ಯೋಜನೆಗಳನ್ನು ಹಾಕಿಕೊಂಡಿರುತ್ತೇವೆ. ನಮ್ಮ ನಮ್ಮ ಭವಿಷ್ಯದ ಕಾಳಜಿಯಿಂದ ಹಲವರು ಗಳಿಸಿದ್ದರಲ್ಲಿ ದೊಡ್ಡಪಾಲನ್ನು ಉಳಿತಾಯ ಮಾಡಲು ಇಚ್ಛಿಸುತ್ತಾರೆ. ಒಂದಷ್ಟು ಜನರಿಗೆ ನಾಳಿನ ಕಾಳಜಿಯೇ ಇಲ್ಲ. ಇಂದು ಬಂದಿದ್ದು ಇಂದಿಗೆ ಎಂದು ಅಡ್ಡಾದಿಡ್ಡಿ ಖರ್ಚು ಮಾಡಿ ಬಿಡುತ್ತಾರೆ. ಇಂತಹವರ ಜೀವನ ಬೀಸುವ ಗಾಳಿಗೆ ತೂರಿ ಹೋಗುವ ಒಣಗಿದ ಎಲೆಯಂತೆ. ಅದು ಗುರಿಯಿಲ್ಲದೆ ಸಾಗುತ್ತದೆ. ಕೊನೆಗೆ ಹೊರಬರಲಾಗದ ಜಾಗದಲ್ಲಿ ಸಿಲುಕಿ ತನ್ನ ಅಸ್ತಿತ್ವ ಕಳೆದುಕೊಂಡು ಬಿಡುತ್ತದೆ. ಜೀವನ ಎಂದರೆ 'ಎಂಜಾಯ್ ಮಾಡುವುದು' ಎಂಬುದು ಇಂತಹವರ ವಾದ.



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹರೆಕಳ ಹಾಜಬ್ಬ.

ಅದರೆ ಈ ಎಂಜಾಯ್ ಎಂಬುದು ಏನು, ಅದು ತಿಂದು–ತಿರುಗುವುದೇ ಎಂಬ ಪ್ರಶ್ನೆಗೆ ಅವರಲ್ಲಿ ನಿಖರ ಉತ್ತರವಿರುವುದಿಲ್ಲ. 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎಂಬ ಮಾತು ಇವರಿಗೆ ವೇದವಾಕ್ಯ. ಆದರೆ ಈ ಮಾತಿನ ಅರ್ಥ ತುಪ್ಪ ತಿನ್ನಲು ಸಾಲ ಮಾಡಿದರೆ ತಪ್ಪಲ್ಲ ಎಂಬ ವಾದ. ಆದರೆ ನಮ್ಮ ದೇಹದ ಉಪಯುಕ್ತತೆಗೆ ತುಪ್ಪ ಅಗತ್ಯ ಹಾಗೂ ಅನಿವಾರ್ಯ. ದೇಹದ ಆರೋಗ್ಯ ಮುಖ್ಯ, ಆದ್ದರಿಂದ ಅದಕ್ಕಾಗಿ ಸ್ವಲ್ಪ ಸಾಲ ಮಾಡಿಯಾದರೂ ದೇಹದ ಆರೋಗ್ಯ ಕಾಪಾಡಿಕೊಳ್ಳಿ ಎಂಬುದನ್ನು ಇವರು, ತುಪ್ಪ ತಿನ್ನುವುದು ಎಂದರೆ ಬೇಕಾದ ಹಾಗಿರುವುದು ಎಂಬ ಅರ್ಥದಲ್ಲಿ ಸಾಲ ಮಾಡಿಯಾದರೂ ತಿನ್ನು ಎಂದಿರುವುದರಿಂದ ಸಾಲ ಮಾಡುವುದು ತಪ್ಪಲ್ಲ ಎಂಬ ವಾದವನ್ನು ಮುಂದಿಡಬಹುದು. ಆದರೆ ಹಾಗೆ ಜೀವನ ಪೂರ್ತಿ ಇರಲಾಗುವುದಿಲ್ಲ. ಸಾಲ ಕೊಟ್ಟವರು ಸಾಲ ವಾಪಸ್ಸು ಪಡೆಯದೇ ಬಿಡುವುದಿಲ್ಲ. ಆಗ ಮತ್ತೊಂದು ಕಡೆ ಸಾಲ ಮಾಡಿ ಈ ಸಾಲ ತೀರಿಸುವುದು ಎಂಬುದು ಅವರ ಐಡಿಯಾ. ಆದರೆ ಜೀವನ ಅಷ್ಟು ಸರಳವಲ್ಲ. ಅದಕ್ಕೆ ಒಂದು ಸೂತ್ರ ಬೇಕು. ಸಕ್ಕರೆ ಖಾಯಿಲೆ ಇರುವವರು ಸಿಹಿ ತಿನ್ನಬಾರದು ಎಂದಾಗ, ತಿಂದು ಮತ್ತೊಂದು ಮಾತ್ರೆ ತೆಗೆದುಕೊಂಡರಾಯಿತು, ಆ ಮಾತ್ರೆ ಹೆಚ್ಚಿನ ಸಕ್ಕರೆ ಪ್ರಮಾಣವನ್ನು ನಿಯಂತ್ರಿಸುತ್ತದೆ ಎಂದು ಹೇಳಿದಂತಾಗುತ್ತದೆ.

ನಮ್ಮ ಸ್ನೇಹಿತರೊಬ್ಬರಿಗೆ ಹೀಗೆ ಸಕ್ಕರೆ ಖಾಯಿಲೆ ಬಂತು. ಅವರಿಗೆ ಸಿಹಿ ಬಹಳ ಇಷ್ಟ. ಆದರೆ ಸಕ್ಕರೆ ಖಾಯಿಲೆ ಇದೆ ಎಂದು ಗೊತ್ತಾದಾಗ ಮನೆಯವರು ನಿಯಂತ್ರಣ ಹೇರಿದರು. ಸಿಹಿ ಪದಾರ್ಥ ಯಾವುದನ್ನೂ ಅವರಿಗೆ ಕೊಡುತ್ತಿರಲಿಲ್ಲ. ಇವರಿಗೆ ಸಿಹಿ ತಿನ್ನಲೇ ಬೇಕು. ಅದಕ್ಕಾಗಿ ಅವರು ಮಾಡಿದ ಉಪಾಯ(?) ಹೋಟೇಲ್‌ಗೆ ಹೋಗಿ ಸಿಹಿ ತಿನ್ನುವುದು. ಮನೆಗೆ ಬಂದು ವೈದ್ಯರು ಹೇಳಿದ್ದ ಮಾತ್ರೆಯನ್ನು ಒಟ್ಟಿಗೆ ಎರಡನ್ನು ತೆಗೆದುಕೊಳ್ಳುವುದು. ಪರೀಕ್ಷೆ ಮಾಡಿಸಲು ಹೋಗುವ ಹಿಂದಿನ ದಿನ ಮೂರು ಮಾತ್ರೆ ಸೇವಿಸುವುದು. ಮರುದಿನ ಪರೀಕ್ಷೆಯಲ್ಲಿ ಸಕ್ಕರೆ ಖಾಯಿಲೆ ಹೆಚ್ಚಿಲ್ಲ ಎಂಬ ವರದಿ ಪಡೆಯುವುದು. ಇದು ಅವರು ತಮಗೆ ಹಾಗೂ ಮನೆಯವರಿಗೆ ಮಾಡಿಕೊಂಡ ಮೋಸ. ಕೊನೆಗೆ ಅವರು ಆ ಖಾಯಿಲೆಗೇ ಬಲಿಯಾದರು ಅನ್ನಿ. ಇದು ಸಾಲ ಮಾಡಿ ತುಪ್ಪ ತಿನ್ನು ಎನ್ನುವುದರ ಫಲಿತ. ಇದರ ಅಂತ್ಯ ಮಾತ್ರ ಭೀಕರವಾಗಿಯೇ ಇರುತ್ತದೆ.

ಇನ್ನು ಮೊದಲನೆಯ ಗುಂಪು, ಅವರಿಗೆ ಇಂದಿಗಿಂತ ನಾಳೆಯ ಬಗ್ಗೆಯ ಕಾಳಜಿ. ಇಂದು ಸ್ವಲ್ಪ ಕಡಿಮೆ ತಿಂದರೂ ಸರಿಯೇ, ನಾಳೆ ತಿನ್ನಲು ಏನೂ ಇಲ್ಲ ಎಂಬಂತಾಗಬಾರದು ಎಂಬುದು ಅವರ ಕಾಳಜಿ. ಇದು ಇಷ್ಟಕ್ಕೇ ನಿಂತರೆ ಸರಿ. ನಾಳಿನ ಯೋಚನೆ ಮಾಡುವುದು, ಅದಕ್ಕಾಗಿ ಹಣ ಉಳಿಸುವುದು ಸರಿಯಾದ ವಿಚಾರವೇ. ಅದನ್ನು ವಿವೇಚನೆ ಎಂದೂ ಹೇಳಬಹುದು. ಎರಡು ದಿನಕ್ಕಾಗುವಷ್ಟು ದುಡ್ಡಿದೆ ಎಂದರೆ ಅದನ್ನು ಒಂದೇ ದಿನಕ್ಕೆ ಖರ್ಚು ಮಾಡುವುದಕ್ಕಿಂತ ವಿವೇಚನೆಯಿಂದ ಎರಡೂ ದಿನಕ್ಕೆ ವಿನಿಯೋಗಿಸಿಕೊಳ್ಳುವುದು ಬುದ್ಧಿವಂತಿಕೆಯೇ. ಆದರೆ ಮರುದಿನ ಮತ್ತೆ ಎರಡು ದಿನಕ್ಕೆ ಆಗುವಷ್ಟು ಹಣ ಸಿಕ್ಕಾಗ ಆ ದಿನವಾದರೂ ಸಂತೃಪ್ತಿಯಿಂದ ಇದ್ದುಬಿಡಬೇಕು ಎಂಬುದೂ ವಿವೇಚನೆ ಎನಿಸಿಕೊಳ್ಳುತ್ತದೆ.

ನಮಗೆ ನಮ್ಮ ಜೀವನ ಯಾತ್ರೆ ಯಾವಾಗ ಮುಕ್ತಾಯವಾಗುತ್ತದೆ ಎಂದು ತಿಳಿದಿಲ್ಲ. ಇದು ಯಾರಿಗೂ ತಿಳಿಯದ ನಿಗೂಢತನ. ಇದು ಒಂದು ರೀತಿ ಒಳ್ಳೆಯದೇ. ನಮ್ಮ ಸಾವು ಹೀಗೇ ಎಂದು ಗೊತ್ತಾದರೆ ಒಂದು ರೀತಿ ಅರಾಜಕತೆಯ ವಾತಾವರಣ ಸೃಷ್ಟಿಯಾಗಿ ಬಿಡಬಹುದು. ಹಾಗಾಗಿ ಇದು ಗೌಪ್ಯವಾಗಿದ್ದಷ್ಟೂ ನಮ್ಮ ಜೀವನ ಶಿಸ್ತುಬದ್ಧವಾಗಿರುತ್ತದೆ. ಇದಕ್ಕೆ ಈ ಉಳಿತಾಯದ ಮನೋಭಾವ ಪೂರಕವಾಗಿರುತ್ತದೆ. ಆದರೆ ಎಷ್ಟು ಉಳಿಸಬೇಕು ಎಂಬುದೂ ವಿವೇಚನೆಯೇ. ಕೊನೆಗೆ ತಾನೂ ಅನುಭವಿಸದೇ ಯಾರೋ ಅನ್ಯರಿಗೆ ಆಸ್ತಿಪಾಸ್ತಿ ಬಿಟ್ಟುಹೋಗುವುದು ವಿವೇಚನೆ ಎನ್ನಿಸುವುದಿಲ್ಲ.

ಜೀವನವನ್ನು ಹೇಗೆ ನಡೆಸಬೇಕು ಎಂಬ ಬಗ್ಗೆ ಒಂದು ಕಥೆಯನ್ನು ಉದಾಹರಿಸಬಹುದು. ಬಹುತೇಕ ಭರ್ತಿಯಾಗಿದ್ದ ಒಂದು ಬಸ್ಸು, ಆ ಬಸ್ಸಿಗೆ ಒಬ್ಬ ವೃದ್ಧೆ ಹತ್ತಿದಳು. ಅವಳ ಬಳಿ ನಾಲ್ಕಾರು ಬ್ಯಾಗುಗಳು ಇದ್ದವು. ಆ ವೃದ್ಧೆ ಹೇಗೋ ಮಾಡಿ ಒಂದು ಸೀಟಿನ ಹತ್ತಿರ ಬಂದು ನಿಂತಳು. ಆ ಸೀಟಿನಲ್ಲಿ ಒಬ್ಬ ಯುವಕ ಕುಳಿತಿದ್ದ. ಈ ವೃದ್ಧೆಯ ಬ್ಯಾಗುಗಳು ಅವನಿಗೆ ತಾಗುತ್ತಾ, ತಾಗುತ್ತಾ ಅವನಿಗೆ ಕುಳಿತುಕೊಳ್ಳಲು ಕಷ್ಟವೇ ಆಗುತ್ತಿತ್ತು. ಆದರೆ ಯುವಕ ಯಾವ ಪ್ರತಿಕ್ರಿಯೆಯನ್ನೂ ತೋರದೇ ಅನುಸರಿಸಿಕೊಂಡೇ ಕುಳಿತಿದ್ದ. ಅವನ ಮತ್ತೊಂದು ಪಕ್ಕದಲ್ಲಿದ್ದ ವ್ಯಕ್ತಿ ನೀವೇಕೆ ಏನು ಮಾತನಾಡುತ್ತಿಲ್ಲ. ಆ ವೃದ್ಧೆಗೆ ಬ್ಯಾಗುಗಳನ್ನು ಕೆಳಗೆ ಇಡಲು ಏಕೆ ಹೇಳುತ್ತಿಲ್ಲ ಎಂದು ಪ್ರಶ್ನಿಸಿದನು. ಆಗ ಆ ಯುವಕ ಹೇಳಿದ 'ಇಷ್ಟು ಚಿಕ್ಕ ವಿಷಯಕ್ಕೆ ನಾನೇಕೆ ಪ್ರಾಧಾನ್ಯತೆ ಕೊಡಬೇಕು. ಆಕೆಯ ಜೊತೆಗೆ ಏಕೆ ಜಗಳವಾಡಬೇಕು. ಹಾಗೆ ಜಗಳ ಮಾಡಿದರೆ ಆನಂತರ ಕೋಪ, ಆಮೇಲೆ ದ್ವೇಷ ಹೆಚ್ಚುತ್ತದೆ, ಕೊನೆಗೆ ತಾಳ್ಮೆಯೂ ಕಳೆದುಹೋಗುತ್ತದೆ. ನಾನು ಮುಂದಿನ ನಿಲ್ದಾಣದಲ್ಲಿ ಇಳಿಯುವವನು. ನಾವು ಒಟ್ಟಿಗೆ ಹೋಗುವ ಈ ಪ್ರಯಾಣ ಇನ್ನು ಸ್ವಲ್ಪ ದೂರ ಅಷ್ಟೇ! ಅಷ್ಟರವರೆಗೂ ಶಾಂತಿ ಕಾಯ್ದುಕೊಳ್ಳುವುದು ಹಿತವಲ್ಲವೇ?' ಇದು ಒಂದು ರೀತಿ ಜೀವನ ಪಯಣದ ಸೂತ್ರದಂತೆ ಕಂಡುಬರುತ್ತದೆ. ನಮ್ಮೊಟ್ಟಿಗಿನ ಪಯಣ ಇನ್ನು ಸ್ವಲ್ಪ ದೂರ ಮಾತ್ರ ಎಂಬುದು ನಮಗೆಲ್ಲರಿಗೂ ಅರ್ಥವಾಗಬೇಕು. ಅಷ್ಟರಲ್ಲಿ ಯಾರು ಯಾರೋ ಜೊತೆಗೆ ಬರುತ್ತಾರೆ, ಕೂರುತ್ತಾರೆ, ಹರಟುತ್ತಾರೆ, ನಗಿಸುತ್ತಾರೆ, ಪಾಠ ಕಲಿಸುತ್ತಾರೆ, ನೋವು ಕೊಡುತ್ತಾರೆ. ಅವರೆಲ್ಲಾ ಬರುವುದು, ಇರುವುದು ಸ್ವಲ್ಪ ದೂರ, ಸ್ವಲ್ಪ ಕಾಲ ಮಾತ್ರ. ಆನಂತರ ನಾನು ನನ್ನ ಸ್ಟಾಪಿನಲ್ಲಿ, ಅವರು ಅವರ ಸ್ಟಾಪಿನಲ್ಲಿ ಇಳಿದು ಹೋಗುತ್ತಾರೆ. ಅದಕ್ಕಾಗಿ ಅವರೊಡನೆ ಜಗಳವಾಡುವುದಕ್ಕಿಂತ ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡರೆ, ನಮ್ಮ ಹಾದಿ ನಮಗೆ ಎಂಬಂತೆ, ಯಾವುದೇ ವ್ಯಾಕುಲವಿಲ್ಲ. ಇಂತಹ ಜೀವನ ಸೂತ್ರವನ್ನು ಅಳವಡಿಸಿಕೊಳ್ಳಬೇಕು. ನಮ್ಮೊಡನೆ ಬರುವ ತಾಯಿ–ತಂದೆ, ಹೆಂಡತಿ–ಮಕ್ಕಳು ಎಲ್ಲರೂ ಸ್ವಲ್ಪ ದೂರದವರೆಗೆ ಮಾತ್ರ, ಅವರೆಲ್ಲಾ ಶಾಶ್ವತವಾಗಿ ನಮ್ಮೊಡನಿರುವುದಿಲ್ಲ. ಅವರೊಡನೆ ಏಕೆ ಮುನಿಸು. ಅಡ್ಜಸ್ಟ್ ಮಾಡಿಕೊಂಡರಾಯಿತು. ಇದರಲ್ಲಿ ಧಾರಾಳತನಕ್ಕಿಂತ ನೆಮ್ಮದಿ ಮುಖ್ಯವಾಗಿರುತ್ತದೆ. ನಮಗೆ ನಮ್ಮ ಜೀವನ ಮುಖ್ಯ. ಹಾಗೆಂದು ಎಲ್ಲರನ್ನೂ ದೂರ ಮಾಡಬೇಕು, ಯಾವುದಕ್ಕೂ ಅಂಟಿಕೊಳ್ಳಬಾರದು ಎಂಬ ನೀತಿಯಲ್ಲ. ಯಾರೊಡನೆ ಹೇಗಿದ್ದರೆ ನೆಮ್ಮದಿ ಸಿಗುವುದೋ ಹಾಗೆ ಇದ್ದಾಗ ನೆಮ್ಮದಿ ಸಿಗುತ್ತದೆ, ಜೀವನ ಸಂತೋಷವಾಗಿರುತ್ತದೆ. ಜೀವನವನ್ನು ಸುಂದರವಾಗಿಸಿಕೊಳ್ಳುವುದು ನಮಗೆ ತಿಳಿದಿರಬೇಕು. ಅದು ಜೀವನದ ಸುಗಂಧವೂ ಹೌದು. ಸುಗಂಧ ಕಾಣುವುದಿಲ್ಲ, ಆದರೆ ಹಿತಕಾರಿಯಾಗಿರುತ್ತದೆ. ಆಕೃತಿ ಕಾಣುತ್ತದೆ, ಆದರೆ ಅದು ಮೋಹಕವಾಗಿರುವುದಿಲ್ಲ ಎಂಬಂತೆ ನಮ್ಮ ಜೀವನ ಸುಗಂಧಭರಿತವಾಗಿರಬೇಕು. ಹತ್ತಿರ ಬಂದವರಿಗೆ ಹೆಚ್ಚು ದೂರವಿದ್ದವರಿಗೆ ಸ್ವಲ್ಪ ಕಡಿಮೆ ಯಾದರೂ ಸುಗಂಧ ಸಿಗುವಂತಹ ಜೀವನವಾಗಬೇಕು.

ಇಲ್ಲಿ ನಾನು ಹೇಳಹೊರಟಿರುವುದು ನಮ್ಮ ಸಂಪಾದನೆಯನ್ನು ಹೇಗೆ ವಿನಿಯೋಗಿಸಬೇಕು ಎಂಬ ಬಗ್ಗೆ. ಇಲ್ಲಿ ಬರುವ ಪ್ರಶ್ನೆ ಎಂದರೆ ಇಟ್ಟು ಹೋಗಬೇಕೋ ಅಥವಾ ಕೊಟ್ಟು ಹೋಗಬೇಕೋ ಎಂಬುದಾಗಿದೆ. ಇಡುವುದು ಸರಿಯಾದ ವಿಧಾನವಾದರೂ, ಕೊಡದೆ ಇಡುವುದು ಕೊನೆಗೆ ನಮ್ಮದಾಗಿರುವುದಿಲ್ಲ. ಇತ್ತೀಚೆಗೆ ತಮಿಳುನಾಡಿನ ಫುಟ್‌ಪಾತಿನಲ್ಲಿ ಭಿಕ್ಷೆ ಬೇಡುತ್ತಿದ್ದವನೊಬ್ಬ ಮೃತಪಟ್ಟ. ಆತ ಭಿಕ್ಷೆ ಬೇಡುವಾಗ ಹಾಸಿಕೊಂಡು ಕೂತಿದ್ದಂತಹ ಗೋಣಿಚೀಲ ಕೊಡವಿದಾಗ ಲಕ್ಷಾಂತರ ರೂಪಾಯಿ ಇದ್ದದ್ದು ಕಂಡುಬಂದಿತು. ಅವನು ದಿನ ನಿತ್ಯ ಭಿಕ್ಷೆ ಬೇಡುತ್ತಾ, ಅವರಿವರಿಂದ ದೊರೆತ ಹಳಸಲು ತಿಂಡಿ ಪದಾರ್ಥಗಳನ್ನು ತಿನ್ನುತ್ತಾ ಜೀವನ ಸಾಗಿಸಿದ. ಆದರೆ ಭಿಕ್ಷೆ ಬೇಡಿ ಬಂದಂತಹ ಹಣವನ್ನು ತಾನು ಕೂತಿದ್ದ ಗೋಣಿಚೀಲದಡಿ ಸಂಗ್ರಹಿಸಿದ್ದ. ಆದರೆ ಅವನು ಸತ್ತ ನಂತರ ಆ ಹಣ ಪರರ ಪಾಲಾಯಿತೇ ವಿನಃ ಅವನ ಹೆಸರು ಹೇಳಬಹುದಾದವರಿಗೇ ಲಭ್ಯವಾಗಲಿಲ್ಲ.

ಇದಕ್ಕೆ ಬದಲಾಗಿ ನಾವು ಕಾಣುವ 2020 ರ ಕರ್ನಾಟಕದ ಪದ್ಮಶ್ರೀ ಪುರಸ್ಕೃತ ಹರೆಕಳ ಹಾಜಬ್ಬನವರ ಬದುಕು. ತನ್ನ ಗ್ರಾಮದಲ್ಲಿ ಕಿತ್ತಳೆ ಹಣ್ಣು ಮಾರುತ್ತಾ, ಅದರಿಂದ ಬಂದ ಹಣ ಹಾಗೂ ಕೆಲವರಿಂದ ಪಡೆದ ದಾನದ ಮೊಬಲಗಿಂದ, ಅವರು ತನ್ನ 1.33 ಎಕರೆ ಜಮೀನನ್ನು ಸರ್ಕಾರಕ್ಕೆ ನೀಡಿ, ಅಲ್ಲಿ ಶಾಲೆ ಕಟ್ಟಲು ನೆರವಾದರು. ಅವರು ಬಡತನದಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಆ ಶಾಲೆಯನ್ನು ಕಂಡಾಗ ಸಂತೋಷ, ಅಲ್ಲಿನ ಮಕ್ಕಳು ಅವರಿಗೆ ತಮ್ಮ ಮಕ್ಕಳಂತೆ ಕಂಡುಬರುತ್ತಾರೆ. ಅವರನ್ನು ಪದ್ಮಶ್ರೀ ಪ್ರಶಸ್ತಿ ಹುಡುಕಿಕೊಂಡು ಬಂದಿತು. ಇವೆರಡೂ ಇತ್ತೀಚೆಗೆ ನಾವು ಕಂಡ ಘಟನೆಗಳೇ. ಇವರಲ್ಲಿ ಯಾರ ಬದುಕನ್ನು ಅನುಕರಣೀಯ ಎಂದು ಭಾವಿಸುತ್ತೇವೆ!

ನನಗೆ ಪರಿಚಿತರೊಬ್ಬರು ಇದ್ದಾರೆ. ಅವರಿಗೆ ಸಂತೋಷ ಸಿಗುವುದು ಎಂದರೆ ಒಂದಷ್ಟು ಸ್ನೇಹಿತರನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವುದು. ಯಾರೂ ನಯಾಪೈಸೆ ಖರ್ಚು ಮಾಡುವಂತಿಲ್ಲ. ಎಲ್ಲವನ್ನೂ ಅವರೇ ಭರಿಸುತ್ತಾರೆ. ಹಾಗೆಂದು ಅವರು ಮಹಾ ಶ್ರೀಮಂತರು ಎಂದೇನಲ್ಲ. ಅವರನ್ನು ಈ ಬಗ್ಗೆ ಕೇಳಿದರೆ, ಇದರಿಂದ ನನಗೆ ಸಂತೋಷ ಸಿಗುತ್ತದೆ. ಅದಕ್ಕಾಗಿ ನನ್ನ ಸಂಪಾದನೆಯನ್ನು ಹೀಗೆ ವಿನಿಯೋಗಿಸುತ್ತೇನೆ ಎನ್ನುತ್ತಾರೆ. ಇದನ್ನು ತಪ್ಪು ಎನ್ನಲಾಗುವುದಿಲ್ಲ. ಆದರೆ ಇವರನ್ನು ಕಂಡ ಒಬ್ಬ ಹಿರಿಯರು, ಹೀಗೆ ಜನರಿಗೆ ಖರ್ಚು ಮಾಡುವುದಕ್ಕಿಂತ ಯಾವುದಾದರೂ ಸಂಸ್ಥೆಗೆ ಖರ್ಚು ಮಾಡುವುದು ಸೂಕ್ತವಲ್ಲವೇ ಎಂದು ಸಲಹೆ ನೀಡಿದರು. ನಿಜ, ನಮ್ಮ ಹಣ ನಾವೇ ಬಳಸಲಾಗುವುದಿಲ್ಲ. ಅದು ಬೇರೆಯವರಿಗೂ ವಿನಿಯೋಗವಾಗಬೇಕು. ನಮ್ಮ ನಂತರವೂ ಅದು ಒಂದು ಶಾಶ್ವತ ಕಾರ್ಯಕ್ಕಾಗಿ ವಿನಿಯೋಗವಾದರೆ ಅದು ಸಾರ್ಥಕ ಎನಿಸಿಕೊಳ್ಳುತ್ತದೆ.

ನಮ್ಮ ಅನೇಕ ರಾಜಕಾರಣಿಗಳು ಹೀಗೆ ಹಣ ಮಾಡುವ ಧಾವಂತದಲ್ಲಿ ಲೆಕ್ಕ ತೋರಿಸಲು ಕಷ್ಟವಾಗುತ್ತದೆ ಎಂದು ಯಾರು ಯಾರದೋ ಹೆಸರಿನಲ್ಲಿ (ಬೇನಾಮಿ) ಆಸ್ತಿ ಖರೀದಿಸುತ್ತಾರೆ. ಅವರ ಹೆಸರಿನಲ್ಲಿ ಹಣ ಸಂಗ್ರಹಿಸಿಡುತ್ತಾರೆ. ಆದರೆ ಅವರು ದಿಢೀರನೇ ಸಾವನ್ನಪ್ಪಿದರೆ, ಆ ಹಣ ಹಾಗೂ ಆಸ್ತಿ ಆ ಅಪರಿಚಿತರದ್ದೇ ಆಗಿಬಿಡುತ್ತದೆ. ಅದಕ್ಕೆ ಯಾವ ಲೆಕ್ಕವೂ ಇರುವುದಿಲ್ಲ. ಸಾಲದ್ದಕ್ಕೆ ಅವರು ತಾವು ಹೀಗೆ ಆಸ್ತಿ, ಹಣ ಇಟ್ಟಿರುವುದರ ಬಗ್ಗೆ ಯಾರಿಗೂ ಹೇಳಿರುವುದೂ ಇಲ್ಲ. ಅವರಿಗೆ ಮುಂದೆ ಈ ಹಣ ತನಗೇ ದೊರಕುತ್ತದೆ, ಆಗ ನೆಮ್ಮದಿಯಾಗಿರಬಹುದು ಎಂಬ ಭಾವನೆ. ಆದರೆ ಅವರ ನಿಧನದ ಬಳಿಕ ಆ ಹಣ ಅವರ ಕುಟುಂಬಕ್ಕೂ ದೊರಕುವುದಿಲ್ಲ. ಇದಕ್ಕೆ ಬದಲಾಗಿ ಅವರು ಆ ಹಣವನ್ನು ತನ್ನೂರಿನ ಅಭಿವೃದ್ಧಿಗೆ, ಜನಹಿತಕ್ಕಾಗಿ ಬಳಸಿದ್ದರೆ, ಅವರ ನಿಧನದ ನಂತರವೂ ಜನ ಅವರ ಸ್ಮರಿಸುತ್ತಾರೆ. ಅದಕ್ಕೇ ಹೇಳುವುದು 'ಇಟ್ಟು ಹೋಗುವುದಕ್ಕಿಂತ, ಕೊಟ್ಟು ಹೋಗುವುದು ಲೇಸು' ಎಂದು.


ಮೈಸೂರಿನ 101 ವರ್ಷದ ಮಾಜಿ ಯೋಧರ ಭೇಟಿಯ ಅವಿಸ್ಮರಣೀಯ ಕ್ಷಣ

ಮೈಸೂರು ಸಂಸ್ಥಾನದ ಮೈಸೂರು 'ಲ್ಯಾನ್ಸರ್ ಪಡೆ'ಯಲಿದ್ದ ವೀರರಾಜ್ ಅರಸ್ ಭೇಟಿ ಮಾಡಿದ ರೋಹಿತ್ ದಾಗರ್

ಮೈಸೂರು, ಫೆ.9(ಬಿಎಸ್/ಪಿಎಂ)– ರಾಜಸ್ಥಾನದ ಜೈಪುರದ 61ನೇ ಅಶ್ವದಳದ ರೆಜಿಮೆಂಟ್‌ನ 101 ವರ್ಷ ವಯೋಮಾನದ ಶತಾಯುಷಿ ಮೈಸೂರಿನಲ್ಲಿದ್ದಾರೆ. ಈ ರೆಜಿಮೆಂಟ್‌ನ ಏಕೈಕ ಮಾಜಿ ಯೋಧ ಇವರು. ಬುಧವಾರ ಸಂಜೆ ಅರಮನೆ ನಗರಿ ಮೈಸೂರಿನಲ್ಲಿ ಇವರು ಅವಿಸ್ಮರಣೀಯ ಸಂದರ್ಶನಕ್ಕೆ ಸಾಕ್ಷಿಯಾದರು.

ಎಂ.ಕೆ.ವೀರರಾಜ್ ಅರಸ್ ಆ ಮಾಜಿ ಯೋಧರು. ಇವರು ಮೈಸೂರಿನ ಕುವೆಂಪುನಗರದ ಎಲ್‌ಐಜಿ–99, ಸಿಐಟಿಬಿ ಹೌಸ್‌ನಲ್ಲಿ ವಾಸವಿದ್ದು, ಇವರ ನಿವಾಸಕ್ಕೆ ರಾಜಸ್ಥಾನದ ಜೈಪುರದ 61ನೇ ಕ್ಯಾವಲ್ರಿ ರೆಜಿಮೆಂಟ್‌ನ ಸ್ಥಾನಿಕ ಕಮಾಂಡೆಂಟ್ ಕರ್ನಲ್ ರೋಹಿತ್ ದಾಗರ್ ಭೇಟಿ ನೀಡಿ, ವೀರರಾಜ್ ಅರಸರ ಅನುಭವಗಳನ್ನು ದಾಖಲಿಸಿಕೊಂಡು, ವಿಶೇಷ ಸಂದರ್ಶನ ನಡೆಸಿದರು. ಕರ್ನಲ್ ರೋಹಿತ್ ದಾಗರ್ ಅವರನ್ನು ತಮ್ಮ ಮನೆಗೆ ಸ್ವಾಗತಿಸಲು ವೀರರಾಜ್ ಅರಸ್ ಉತ್ಸುಕರಾಗಿದ್ದರು. ಬ್ರಿಗೇಡಿಯರ್ ಅರುಪೇಂದು ಗುಪ್ತಾ (ಗ್ರೆನೇಡಿಯರ್ಸ್ ರೆಜಿಮೆಂಟ್‌ನಲ್ಲಿದ್ದವರು, ಈಗ ಭೋಪಾಲ್ ಸೆಲೆಕ್ಷನ್ ಸೆಂಟರ್‌ನಲ್ಲಿದ್ದಾರೆ) ಅವರಿಂದ ವೀರರಾಜ್ ಅರಸ್ ಬಗ್ಗೆ ಕರ್ನಲ್ ದಾಗರ್ ಕೇಳಿ ತಿಳಿದಿದ್ದರು. ಮುಂಬರುವ ಏಷ್ಯನ್ ಕ್ರೀಡಾಕೂಟದ ಆಯ್ಕೆಗಳ ಮೇಲ್ವಿಚಾರಣೆಗಾಗಿ ಬೆಂಗಳೂರಿಗೆ ಭೇಟಿ ನೀಡಿದ್ದ ಅವರು, ಇದೇ ಸಂದರ್ಭದಲ್ಲಿ ಮೈಸೂರಿಗೆ ಭೇಟಿ ನೀಡಿ, ವೀರರಾಜ್ ಅರಸ್ ಅವರ ಸಂದರ್ಶನ ನಡೆಸಿ, ಅಂದಿನ ಅಶ್ವದಳದ ಬಗ್ಗೆ ಮಾಹಿತಿ ದಾಖಲಿಸಿಕೊಂಡರು.

ಈ ವೇಳೆ ವೀರರಾಜ್ ಅರಸ್ ಅವರಿಗೆ ಕರ್ನಲ್ ದಾಗರ್ ಅವರು ಪುಟ್ಟ ಕುದುರೆಯ ವಿಗ್ರಹವನ್ನು ನೆನಪಿನ ಕಾಣಿಕೆಯಾಗಿ ನೀಡಿದರು. ವೀರರಾಜ್ ಅರಸ್ ಅವರು 1940ರಿಂದ 1962ರವರೆಗೆ 22 ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ 61ನೇ ಅಶ್ವಸೈನ್ಯದಿಂದ ದಫೇದಾರ್ ಆಗಿ ನಿವೃತ್ತರಾದವರು.



ಮೈಸೂರಿನಲ್ಲಿ ಬುಧವಾರ ಮಾಜಿ ಯೋಧ ವೀರರಾಜ್ ಅರಸ್ ಅವರಿಗೆ ಕರ್ನಲ್ ರೋಹಿತ್ ದಾಗರ್ ಕುದುರೆಯ ವಿಗ್ರಹವನ್ನು ನೆನೆಪಿನ ಕಾಣಿಕೆಯಾಗಿ ನೀಡಿ ಅಭಿನಂದಿಸಿದರು.

ಹಾಗಾಗಿ ಅವರಿಗೆ ನೀಡಿದ ಕುದುರೆ ವಿಗ್ರಹವು ಅಶ್ವದಳದ ಘಟಕವನ್ನು ಬಿಂಬಿಸುತ್ತದೆ. ಈ ಇಬ್ಬರ ನಡುವಿನ ಮಾತುಕತೆಯಲ್ಲಿ ಅಶ್ವದಳದ ಹಳೆಯ ಮತ್ತು ಹೊಸ ಅನುಭವಗಳ ವಿನಿಮಯದೊಂದಿಗೆ ನೆನಪುಗಳ ತೋರಣ ಅನಾವರಣಗೊಂಡಿತು.

ಮಾಜಿ ಮತ್ತು ಹಾಲಿ ಸೇನಾನಿಗಳ ನಡುವಿನ ಸಂವಾದವು ನೆರೆದಿದ್ದ ವೀರರಾಜ್ ಅರಸ್ ಅವರ ಕುಟುಂಬ ಸದಸ್ಯರಲ್ಲಿ ಕೌತುಕದ ವೀಕ್ಷಣೆಗೆ ವೇದಿಕೆಯಾಯಿತು. ವೀರರಾಜ್ ಅರಸ್ ಅವರ ಪತ್ನಿ 91 ವರ್ಷದ ಬಿ.ನಾಗರತ್ನ, ಹಿರಿಯ ಪುತ್ರ ನಾಗರಾಜ್ ಮತ್ತು ಇವರ ಪತ್ನಿ ಪುಷ್ಪಾ, ವೀರರಾಜ್ ಪುತ್ರಿಯರಾದ ಎಂ.ವಿ.ವಸಂತ ಮತ್ತು ಎಂ.ವಿ.ಶ್ರೀಮತಿ, ಅಳಿಯಂದಿರಾದ ಎಲ್.ಎನ್.ಶ್ರೀಧರ್, ಶ್ರೀಕಂಠರಾಜೇ ಅರಸ್ ಮಾತ್ರವಲ್ಲದೆ ಅವರ ಸಂಬಂಧಿ ಕರ್ನಲ್(ನಿವೃತ್ತ) ಭಾನುಪ್ರಕಾಶ್ ಅವರು ಕುತೂಹಲದಿಂದ ನೋಡುತ್ತಿದ್ದರು.

ವೀರರಾಜ್ ಅರಸ್ ಗಂಟೆ ಕಾಲ ತಮ್ಮ ವೃತ್ತಿ ಜೀವನದ ಹಳೇ ನೆನಪಿಗೆ ಜಾರಿದರು. ತಮ್ಮ ಎಲ್ಲಾ ಅನುಭವಗಳನ್ನು ಅವರು ಅನಾವರಣ ಮಾಡುತ್ತಿದ್ದರೆ ಕರ್ನಲ್ ದಾಗರ್ ಮಂತ್ರ ಮುಗ್ಧರಾಗಿ ಆಲಿಸುತ್ತಿದ್ದರು. ಅಲ್ಲದೆ, ಎಲ್ಲವನ್ನೂ ಕರ್ನಲ್ ದಾಗರ್ ದಾಖಲಿಸಿಕೊಳ್ಳುತ್ತಿದ್ದರು. ಇದನ್ನು ಕಂಡ ವೀರರಾಜ್ ಅರಸ್ ಕಣ್ಣುಗಳಲ್ಲಿ ಮಿಂಚಿನ ಹೊಳಪಿತ್ತು. ಇದೇ ವೇಳೆ ವೀರರಾಜ್ ಅರಸ್, ಅಂದಿನ 61ನೇ ಅಶ್ವದಳದ ಕಮಾಂಡೆಂಟ್ ಕರ್ನಲ್ ಭೋಪಾಲ್ ಸಿಂಗ್ ಅವರ ಹೆಸರು ನೆನೆಸಿಕೊಂಡರು. ಅಲ್ಲದೆ, ಮೈಸೂರು ಲ್ಯಾನ್ಸರ್ ಅನ್ನು (ಇತರೆ ಲ್ಯಾನ್ಸರ್‌ಗಳೊಂದಿಗೆ ಜೋಧ್‌ಪುರ, ಪಟಿಯಾಲ, ಜಾಮ್‌ನಗರ ಮತ್ತು ಗ್ವಾಲಿಯರ್) ಜೈಪುರಕ್ಕೆ ವಿಲೀನಗೊಳಿಸಿ 61ನೇ ಅಶ್ವಸೈನ್ಯವನ್ನಾಗಿ ಸೃಜಿಸಲಾದ ದಿನಗಳನ್ನು ನೆನಪಿಸಿಕೊಂಡರು.

ಅಲ್ಲದೆ, ಅಭ್ಯಾಸದ ಅವಧಿಯಲ್ಲಿ ಜಂಪಿಂಗ್, ಟೆಂಟ್ ಪೆಗ್ಗಿಂಗ್ ಸೇರಿದಂತೆ ಸವಾರಿ ಮಾಡಿದ ಕುದುರೆಗಳನ್ನು ನೆನಪು ಮಾಡಿಕೊಂಡರು. ಜೊತೆಗೆ ಅವರು ತರಬೇತಿ ನೀಡಿದ ಹಲವರ ಹೆಸರುಗಳನ್ನು ಪ್ರಸ್ತಾಪಿಸಿದರು (ಮೈಸೂರು ಲ್ಯಾನ್ಸರ್ ಪಡೆ ಎಂದರೆ ಅಂದಿನ ಮೈಸೂರು ಸಂಸ್ಥಾನದಲ್ಲಿದ್ದ ಅಶ್ವದಳವಾಗಿದ್ದು, ಈ ಪಡೆಯಲ್ಲಿಯೂ ವೀರರಾಜ್ ಅರಸ್ ಇದ್ದರು).

ವೀರರಾಜ್ ಅರಸ್ ಅಂದು ತಮ್ಮ ನೆಚ್ಚಿನ 'ಗೌರಿ' ಎಂಬ ಕುದುರೆಯನ್ನು ಹೊಂದಿದ್ದರು. ಅಲ್ಲದೆ, ಅದರ ನೆನಪಿಗಾಗಿ ಒಂದು ಸ್ಮರಣಿಕೆಯನ್ನು ಇಟ್ಟುಕೊಂಡಿದ್ದು, ಆ ಸ್ಮರಣಿಕೆಯು ಆ ಕುದುರೆಯ ಬಾಲದ (ಗೌರಿ) ಕೂದಲಿನ ಗುಂಪನ್ನು ಒಳಗೊಂಡಿದೆ. ಕರ್ನಲ್ ದಾಗರ್ ಅವರು ಮತ್ತೊಂದು ಕುದುರೆ 'ಪೃಥ್ವಿರಾಜ್' ಹೆಸರನ್ನು ಉಲ್ಲೇಖಿಸುತ್ತಿದ್ದಂತೆ ಅಂದಿನ ಭಾರತದ ಪ್ರಧಾನಿ ನೆಹರು ಕೂಡ ಕುದುರೆಯ ಚಟುವಟಿಕೆ ಕಂಡು ಪುಳಕಗೊಂಡಿದ್ದ ಕ್ಷಣಗಳನ್ನು ವೀರರಾಜ್ ಅರಸ್ ನೆನಪಿಸಿಕೊಂಡರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ದಾಗರ್ ಅವರು, 'ಇದೊಂದು ಅಪರೂಪದ ಕ್ಷಣ. ನಾನು ವೀರರಾಜ್ ಅರಸ್ ಅವರ ಬಗ್ಗೆ ತಿಳಿದ ನಂತರ ಅವರನ್ನು ಭೇಟಿಯಾಗಲು ನಿರ್ಧರಿಸಿದ್ದೆ. ಅಂತೆಯೇ ಅವರ ಭೇಟಿ ನನ್ನಲ್ಲಿ ಹೊಸ ಉತ್ಸಾಹ ತುಂಬಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಇದೇ ವೇಳೆ ಮಾತನಾಡಿದ ವೀರರಾಜ್ ಅರಸ್, 'ಈ ಕ್ಷಣದಲ್ಲಿ ನಾನು ನಿಜವಾಗಿಯೂ ವಿನಮ್ರನಾಗಿದ್ದೇನೆ' ಎಂದು ಹೆಮ್ಮೆಯ ಸೂಚಕವಾದ ತಮ್ಮ ಕೋಟಿನಲ್ಲಿ ಸಿಕ್ಕಿಸಿದ್ದ ಮೂರು ಪದಕಗಳನ್ನು ಪ್ರದರ್ಶಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೇಟೆಯಾಡಿದ ಪ್ರಾಣಿಗಳ ಬರೀ ತಲೆ ಭಕ್ಷಿಸುವ ವಿಚಿತ್ರಕಾರಿ ಚಿರತೆ!

● ಅರಣ್ಯಾಧಿಕಾರಿಗಳೇ ಅಚ್ಚರಿ ಪಡುವ ಸಂಗತಿ ● ಸಾಮಾಜಿಕ ಜಾಲತಾಣಗಳಲ್ಲಿ ಚಿರತೆ 'ವದಂತಿ' ಹಾವಳಿ

ಮೈಸೂರು, ಫೆ.9(ಎಂಟಿವೈ)– ತಿ.ನರಸೀಪುರ ತಾಲೂಕಿನಲ್ಲಿ ಜನರ ಬಲಿ ಪಡೆದಿದ್ದು ವಿಚಿತ್ರ ವರ್ತನೆಯ ಚಿರತೆಯಾಗಿದ್ದರೆ, ಮೈಸೂರು ನಗರದಲ್ಲಿ ಜಾನುವಾರುಗಳನ್ನು ಬಲಿ ಪಡೆದಿದ್ದು ಬೀದಿನಾಯಿಗಳು ಎಂದು ಡಿಸಿಎಫ್ ಡಾ.ಕೆ.ಎನ್.ಬಸವರಾಜು ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಅರಣ್ಯ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಿ.ನರಸೀಪುರದಲ್ಲಿ ಬಾಲಕ ರೋಹಿತ್ ಮೇಲೆ ದಾಳಿ ನಡೆಸಿ, ತಲೆ ಹೊತ್ತೊಯ್ದಿದ್ದ ಪ್ರಕರಣದಲ್ಲಿ ಮೊದಲು ನಮಗೆ ಇದು ಚಿರತೆಯ ದಾಳಿಯೇ ಎಂಬುದರ ಬಗ್ಗೆ ಅನುಮಾನ ಮೂಡಿತ್ತು. ಏಕೆಂದರೆ ಚಿರತೆ ಯಾವುದೇ ಪ್ರಾಣಿ ಬೇಟೆಯಾಡಿದರೂ ಹೊಟ್ಟೆ, ಪಕ್ಕೆ ಹಾಗೂ ತೊಡೆಯ ಭಾಗವನ್ನಷ್ಟೇ ಭಕ್ಷಿಸುತ್ತದೆಯೇ ಹೊರತು ತಲೆಯ ಭಾಗ ತಿಂದಿರುವ ನಿದರ್ಶನ ಇರಲಿಲ್ಲ. ಆದರೆ, ಬಾಲಕನ ಮೃತದೇಹ ಪತ್ತೆಯಾದ ಸ್ಥಳದಲ್ಲಿ ಇಡಲಾಗಿದ್ದ ಕ್ಯಾಮರಾ ಟ್ರಾಪ್‌ನಲ್ಲಿ ಚಿರತೆ ಓಡಾಡಿರುವ ದೃಶ್ಯ ಸೆರೆಯಾಗಿತ್ತು. ಸೆರೆ ಸಿಕ್ಕ ನಂತರ ಹಾಗೂ ಸೆರೆ ಸಿಗುವ ಮುನ್ನ ಕ್ಯಾಮರಾ ಟ್ರಾಪ್‌ನಲ್ಲಿ ಸೆರೆಯಾದ ದೃಶ್ಯದಲ್ಲಿರುವ ಚಿರತೆ ಒಂದೇ ಆಗಿರುವುದು ದೃಢಪಟ್ಟಿದೆ ಎಂದರು.

ಈ ಚಿರತೆ ಇತರೆ ಚಿರತೆಗಿಂತ ವಿಚಿತ್ರವಾಗಿ ವರ್ತಿಸಿದೆ. ಸಾಮಾನ್ಯವಾಗಿ ಚಿರತೆ ಒಮ್ಮೆ ಬೇಟೆಯಾಡಿದರೆ, ಮತ್ತೆ 3–4 ದಿನದ ನಂತರವಷ್ಟೇ ಬೇಟೆಗಿಳಿಯುತ್ತದೆ. ಆದರೆ, ತಿ.ನರಸೀಪುರದ ಚಿರತೆ ನಾಯಿ, ಕುರಿ, ಮೇಕೆ, ಕರುವಿನ ಮೇಲೆ ದಾಳಿ ನಡೆಸಿ ಹತ್ಯೆಗೈಯ್ದ ಮೇಲೆ ಸಾಮಾನ್ಯವಾಗಿ ಚಿರತೆ ಭಕ್ಷಿಸುವಂತೆ ಹೊಟ್ಟೆ, ಪಕ್ಕೆ, ತೊಡೆ ಭಾಗಗಳನ್ನು ಭಕ್ಷಿಸದೆ ತಾನು ಹತ್ಯೆಗೈಯ್ದ ಪ್ರಾಣಿಯ ತಲೆ ಭಾಗದಲ್ಲಿ ಸ್ವಲ್ಪ ಮಾತ್ರ ತಿಂದು ಮರು ದಿನ ಮತ್ತೊಂದು ಬೇಟೆಯಾಡುತ್ತಿತ್ತು. ಕೂಂಬಿಂಗ್ ಕಾರ್ಯಾಚರಣೆ ವೇಳೆ ಚಿರತೆ ಓಡಾಡಿದ್ದ ಸ್ಥಳದಲ್ಲೆಲ್ಲಾ ಚಿರತೆ ದಾಳಿಗೆ ಬಲಿಯಾಗಿದ್ದ ಪ್ರಾಣಿಗಳ ಕಳೇಬರ ಪತ್ತೆಯಾಗುತ್ತಿತ್ತು. ಎಲ್ಲಾ ಕಳೇಬರಗಳಲ್ಲೂ ತಲೆ ಭಾಗದ ಮಾಂಸವನ್ನು ಮಾತ್ರ ಚಿರತೆ ತಿಂದಿರುವುದು ಕಂಡು ಬಂದಿತ್ತು. ಇದರಿಂದ ಈ ಚಿರತೆಯ ವರ್ತನೆ ಅಚ್ಚರಿ ಮೂಡಿಸಿದೆ ಎಂದರು.



ಎಫ್‌ಎಸ್‌ಎಲ್ ವರದಿಗಾಗಿ ಕಾಯುತ್ತಿದ್ದೇವೆ: ಚಿರತೆ ದಾಳಿಯಿಂದ ಮೃತಪಟ್ಟ ಬಾಲಕನ ಸಾವಿನ ವಿಚಾರದಲ್ಲಿ ಎಫ್‌ಎಸ್‌ಎಲ್‌ಗೆ ಪರೀಕ್ಷೆಗೆ ಸ್ಯಾಂಪಲ್ ಕಳುಹಿಸಲಾಗಿತ್ತು. ಅದರ ವರದಿಗಾಗಿ ಕಾಯುತ್ತಿದ್ದೇವೆ. ಮೇಲ್ನೋಟಕ್ಕೆ ಚಿರತೆ ದಾಳಿಯಿಂದ ಮೃತಪಟ್ಟಿದ್ದಾನೆ ಎಂದು ಈಗಾಗಲೇ ನಿರ್ಧರಿಸಲಾಗಿದೆ. ವೃದ್ಧೆ ಹಾಗೂ ಯುವತಿಯ ಪ್ರಕರಣದಲ್ಲಿ ಚಿರತೆ ಮಾಂಸ ಸೇವಿಸಿರಲಿಲ್ಲ. ದಾಳಿ ನಡೆಸಿ ಹತ್ಯೆಗೈಯ್ದಿತ್ತು. ಜನರ ಕೂಗಾಟದಿಂದ ಮೃತದೇಹವನ್ನು ಬಿಟ್ಟು ಹೋಗಿತ್ತು. ಹಾಗಾಗಿ ಮೊದಲು ಸಿಕ್ಕಿದ್ದ ಚಿರತೆಯ ಮಲದಲ್ಲಿ ಮನುಷ್ಯರ ಮಾಂಸ ಸೇವಿಸಿದ್ದ ಕುರುಹು ಪತ್ತೆಯಾಗಿರಲಿಲ್ಲ ಎಂದು ತಿಳಿಸಿದರು.

ಬೀದಿನಾಯಿಗಳ ದಾಳಿಗೆ ಸಾವು: ಕಳೆದ ಹದಿನೈದು ದಿನಗಳಿಂದ ಚಿರತೆ ಹಾವಳಿ ತಡೆಗೆ ಹಲವು ಕ್ರಮ ಕೈಗೊಂಡಿದ್ದರೂ, ಮೈಸೂರು ನಗರ ಸೇರಿದಂತೆ ವಿವಿಧೆಡೆ ಚಿರತೆ ದಾಳಿ ಬಗ್ಗೆ ನಾನಾ ವದಂತಿ ಹರಿದಾಡುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ತಪ್ಪು ಮಾಹಿತಿ ಜನರಲ್ಲಿ ಭಯವನ್ನುಂಟು ಮಾಡುತ್ತವೆ. ಮೈಸೂರಿನ ಜೆ.ಸಿ.ನಗರ, ರಾಮಕೃಷ್ಣನಗರ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರಿ ನಗರದಲ್ಲಿ ಬೀದಿನಾಯಿಗಳ ದಾಳಿಯಿಂದ ಮೃತಪಟ್ಟ ಹಸು ಹಾಗೂ ಕರುವಿನ ಪ್ರಕರಣದಲ್ಲಿ ಚಿರತೆ ದಾಳಿ ಎಂದು ತಪ್ಪಾಗಿ ಸಂದೇಶ ರವಾನೆಯಾಗಿತ್ತು. ಇಂದು ಬೆಳಗ್ಗೆ ಬೋಗಾದಿ ಎರಡನೇ ಹಂತದಲ್ಲಿ ಆಯುಷ್ ಬಡಾವಣೆಯಲ್ಲೂ ಬೀದಿನಾಯಿ ದಾಳಿ ನಡೆಸಿ 8 ಮೇಕೆಯನ್ನು ಕೊಂದಿದ್ದು, ಅದಕ್ಕೂ ಚಿರತೆ ದಾಳಿ ಎಂದು ಹಣೆಪಟ್ಟಿ ಕಟ್ಟಲಾಗಿತ್ತು. ಪರಿಶೀಲಿಸಿದ ಬಳಿಕ ಬೀದಿ ನಾಯಿಗಳ ದಾಳಿಯಿಂದ ಅವು ಸಾವನ್ನಪ್ಪಿವೆ ಎಂದು ದೃಢಪಟ್ಟಿದೆ ಎಂದರು.

ಮೈಸೂರು ಭಾಗದಲ್ಲಿ ಚಿರತೆಗಳ ಸಂಖ್ಯೆ ಬಗ್ಗೆ ನಿಖರವಾದ ಮಾಹಿತಿ ಇಲ್ಲದ ಕಾರಣ ಬೇಸ್‌ಲೈನ್ ಸರ್ವೆ ಮೂಲಕ ಮಾಹಿತಿ ಪಡೆಯಲು ಮುಂದಿನ ದಿನಗಳಲ್ಲಿ ಸರ್ವೆ ನಡೆಸಲಾಗುತ್ತದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸುದ್ದಿಗೋಷ್ಠಿಯಲ್ಲಿ ಎಸಿಎಫ್ ಲಕ್ಷ್ಮೀಕಾಂತ್, ಆರ್‌ಎಫ್‌ಒ ಸುರೇಂದ್ರ ಇದ್ದರು.

ಚಿರತೆಯ ಬೇಟೆ

ಚಿರತೆ ಮನುಷ್ಯರ ಮೇಲೆ ದಾಳಿ ಮಾಡುವುದಿಲ್ಲ. ಜನರನ್ನು ಕಂಡರೆ ಅಂಜಿಕೆ. ಅದಕ್ಕೆ ಕೆಲವೊಮ್ಮೆ ಭಯದಿಂದ ಓಡಿ ಹೋಗುತ್ತವೆ. ಆದರೆ, ನರಸೀಪುರದ ಪ್ರಕರಣ ಮಾತ್ರ ವಿಭಿನ್ನವಾಗಿತ್ತು. ಸಾಮಾನ್ಯವಾಗಿ ಚಿರತೆ ನವಿಲು, ನಾಯಿ, ಮೊಲ, ಕರು ಹಾಗೂ ಸಣ್ಣ ಪ್ರಾಣಿಗಳ ಮೇಲೆ ದಾಳಿ ಮಾಡುತ್ತದೆಯೇ ಹೊರತು ದೊಡ್ಡ ಹಸುಗಳ ಮೇಲೆ ದಾಳಿ ಮಾಡುವುದಿಲ್ಲ. ಒಮ್ಮೆ ದಾಳಿ ಮಾಡುವ ಚಿರತೆಯು ಮಾಂಸವನ್ನು ತಿನ್ನಲು ಅದನ್ನು ಬೇರೆಡೆಗೆ ತೆಗೆದುಕೊಂಡು ಹೋಗುತ್ತದೆ. ಬೇಟೆಯಾಡಿದ ಸ್ಥಳದಲ್ಲೇ ಕಳೇಬರ ಬಿಡಲ್ಲ. ಆದರೆ ಈ ಚಿರತೆ ವಿಷಯದಲ್ಲಿ ಸರಪಳಿಯಲ್ಲಿ ವ್ಯತ್ಯಾಸವಾಗುತ್ತಿರುವುದರಿಂದ ಈ ರೀತಿ ಆಹಾರ ಪದ್ಧತಿ ಬದಲಾಗಿರಬಹುದು. ಹಾಗಾಗಿ ಈಗ ಚಿರತೆಗಳು ಬೀದಿ ನಾಯಿಗಳನ್ನೇ ಗುರಿಯಾಗಿಸಿ ದಾಳಿ ಮಾಡಲು ಮುಂದಾಗಿವೆ ಎಂದು ತಿಳಿಸಿದರು.

ಡಿಜಿಟಲ್ ವ್ಯವಹಾರ ನಡೆಸುವ ಬೀದಿಬದಿ ವ್ಯಾಪಾರಿಗಳಿಗೆ ಕ್ಯಾಶ್‌ಬ್ಯಾಕ್ ಸೌಲಭ್ಯ

ಎಸ್‌ಬಿಐ ಡಿಜಿಎಂ ರಾಜೇಶ್ ಕುಮಾರ್ ಸಲಹೆ



ಮೈಸೂರು, ಫೆ.9(ಎಂಕೆ)– ಬೀದಿಬದಿ ವ್ಯಾಪಾರಿಗಳು ಡಿಜಿಟಲ್ ವ್ಯವಹಾರ ನಡೆಸಿ, ಕ್ಯಾಶ್‌ಬ್ಯಾಕ್ ಸೌಲಭ್ಯ ಪಡೆದುಕೊಳ್ಳಿ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಡಿಜಿಎಂ ರಾಜೇಶ್ ಕುಮಾರ್ ಚೌದರಿ ಸಲಹೆ ನೀಡಿದರು.

ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಎಸ್‌ಬಿಐ ಸೆಂಟ್ರಲ್ ಶಾಖೆ ಆವರಣದಲ್ಲಿ ಪ್ರಧಾನ ಮಂತ್ರಿ ಆತ್ಮ ನಿರ್ಭರ ನಿಧಿ(ಪಿಎಂ ಸ್ವ–ನಿಧಿ) ಯೋಜನೆ ಅಂಗವಾಗಿ ಮೈಸೂರು ಮಹಾನಗರಪಾಲಿಕೆ ವತಿಯಿಂದ 'ನಾನು ಡಿಜಿಟಲ್ 4.0' ಶೀರ್ಷಿಕೆಯೊಂದಿಗೆ ಆಯೋಜಿಸಿದ್ದ ಡಿಜಿಟಲ್ ವಹಿವಾಟು ಅಭಿಯಾನ ಮತ್ತು ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಎಸ್‌ಬಿಐನಿಂದ 5,209 ಮಂದಿಗೆ ಸಾಲ ಮಂಜೂರಾಗಿದ್ದು, 4,477 ಮಂದಿ ಈಗಾಗಲೇ ಸಾಲ ಪಡೆದುಕೊಂಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 6,977 ಮಂದಿ ಬೀದಿ ಬದಿ ವ್ಯಾಪಾರಿಗಳು ಎಸ್‌ಬಿಐನಿಂದ ಸಾಲ ಪಡೆದುಕೊಂಡಿದ್ದಾರೆ ಎಂದರು.

ಸಾಲ ಪಡೆದ ಬೀದಿಬದಿ ವ್ಯಾಪಾರಿಗಳು ಆನ್‌ಲೈನ್ ವಹಿವಾಟು ನಡೆಸುವುದು ವ್ಯವಹಾರದ ದೃಷ್ಟಿಯಿಂದ ಅನುಕೂಲಕರವಾಗಿದೆ. ಸಾಲ ಪಡೆದ ವ್ಯಾಪಾರಿಗಳು ಡಿಜಿಟಲ್ ಮೂಲಕ ಸಾಲ ಮರುಪಾವತಿ ಮಾಡಿದರೆ, 1,200 ಕ್ಯಾಶ್‌ಬ್ಯಾಕ್ ನೀಡಲಾಗುವುದು. ಮೊದಲ ಬಾರಿ 10 ಸಾವಿರ ರೂ., ನಂತರ 20 ಸಾವಿರ ರೂ. ಸಾಲ ನೀಡಲಾಗುವುದು. ಎರಡು ಬಾರಿ ಯಶಸ್ವಿಯಾಗಿ ಸಾಲ ಮರುಪಾವತಿ ಮಾಡಿದರೆ ಮೂರನೇ ಬಾರಿ 50 ಸಾವಿರ ಸಾಲ ನೀಡಲಾಗುವುದು. ಸಾಲ ಪಡೆದು ವ್ಯಾಪಾರ ನಡೆಸುವ ಮೂಲಕ ಆರ್ಥಿಕವಾಗಿ ಸಬಲರಾಗುವಂತೆ ಕಿವಿಮಾತು ಹೇಳಿದರು.

ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪ ಮಾತನಾಡಿ, ನಗರದ ಪ್ರಮುಖ ಬ್ಯಾಂಕ್‌ಗಳ ಆವರಣದಲ್ಲಿ ಫೆ.16ರವರೆಗೆ ತರಬೇತಿ ಕಾರ್ಯಕ್ರಮ ನಡೆಯಲಿದ್ದು, ಪಿಎಂ ಸ್ವ–ನಿಧಿ ಯೋಜನೆಯಡಿ ಸಾಲ ಪಡೆದ ಬೀದಿಬದಿ ವ್ಯಾಪಾರಿಗಳು ತರಬೇತಿ ಪಡೆದುಕೊಳ್ಳುವಂತೆ ತಿಳಿಸಿದರು. ಇದೇ ವೇಳೆ 74 ಮಂದಿ ಬೀದಿಬದಿ ವ್ಯಾಪಾರಿಗಳಿಗೆ ಕ್ಯೂಆರ್ ಕೋಡ್ ಮತ್ತು ಇಪಿಐ ಜನರೇಟ್ ಮಾಡಿಕೊಡಲಾಯಿತು. ಹಾಗೆಯೇ ನಜರ್‌ಬಾದ್‌ನಲ್ಲಿರುವ ಕೆನರಾ ಬ್ಯಾಂಕ್ ಆವರಣದಲ್ಲಿಯೂ ಬೀದಿಬದಿ ವ್ಯಾಪಾರಿಗಳಿಗೆ ಡಿಜಿಟಲ್ ವಹಿವಾಟಿನ ತರಬೇತಿ ನೀಡಲಾಯಿತು. ಎಸ್‌ಬಿಐ ಪ್ರಾದೇಶಿಕ ಮ್ಯಾನೇಜರ್‌ಗಳಾದ ಆರ್.ಪಿ.ಸಿಂಗ್, ವೆಂಕಟೇಶಲು, ಲೀಡ್ ಬ್ಯಾಂಕ್‌ನ ವಿದ್ಯಾ, ಅಭಿಯಾನ ಸಂಯೋಜಕ ಜೆ.ಎಸ್.ಬೈರಲಿಂಗಯ್ಯ, ರಮೇಶ್ ಮತ್ತಿತರರಿದ್ದರು.

ಬಡವರಿಗೆ ಸೂರು ಕಲ್ಪಿಸುವಲ್ಲಿ ಬಿಜೆಪಿ ಸರ್ಕಾರ ಮಹತ್ವದ ಹೆಜ್ಜೆ

● ವಸತಿ ಸಚಿವ ಸೋಮಣ್ಣ ಸಮರ್ಥನೆ ● ಕೊಳಚೆ ಪ್ರದೇಶದ ಸಾವಿರಾರು ನಿವಾಸಿಗಳಿಗೆ ನಿವೇಶನ



ಮೈಸೂರು, ಫೆ.9(ಎಂಕೆ)– ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದ ಬಡವರ ಅನುಕೂಲಕ್ಕೆ ಅನುಗುಣವಾಗಿ ಹಕ್ಕುಪತ್ರ ವಿತರಣೆ ಮಾಡುವ ಮೂಲಕ ರಾಜ್ಯ ಬಿಜೆಪಿ ಸರ್ಕಾರ ಬಡವರಿಗೆ ಸೂರು ನೀಡುವ ಕಾರ್ಯದಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ನಗರದ ಸರ್ಕಾರಿ ಅತಿಥಿಗೃಹದಲ್ಲಿ ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 1700ಕ್ಕೂ ಹೆಚ್ಚು ಕೊಳಚೆ ಪ್ರದೇಶದ ಸುಮಾರು 7,800 ಎಕರೆ ಪ್ರದೇಶ ಗುರ್ತಿಸಿ, ಮೊದಲಿಂದಲೂ ಅದೇ ಸ್ಥಳದಲ್ಲಿ ವಾಸವಿದ್ದ ಎಸ್‌ಸಿ–ಎಸ್‌ಟಿ ಸಮುದಾಯದವರಿಗೆ 1 ಸಾವಿರ ರೂ. ಹಾಗೂ ಇತರೆ ಸಮುದಾಯದವರಿಗೆ 2 ಸಾವಿರ ರೂ. ಹಣ ಕಟ್ಟಿಸಿಕೊಂಡು ಅವರ ಹೆಸರಿನಲ್ಲೇ ಕ್ರಯಪತ್ರ ಮಾಡಿಕೊಡುವ ಮಹತ್ವದ ಕಾರ್ಯವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ 5 ಲಕ್ಷ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಮಾರ್ಚ್ ತಿಂಗಳ ಅಂತ್ಯಕ್ಕೆ ಒಟ್ಟು 7 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗುವುದು. ನಗರ ಪ್ರದೇಶಗಳಲ್ಲಿ ಆಯಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ 65 ಸಾವಿರ ಮನೆ ನಿರ್ಮಾಣ ಮಾಡುತ್ತಿದ್ದು, ಅವುಗಳಲ್ಲಿ ಸುಮಾರು 35 ಸಾವಿರ ಮನೆಗಳ ನಿರ್ಮಾಣ ಮುಗಿಯುವ ಹಂತದಲ್ಲಿದೆ ಎಂದು ಮಾಹಿತಿ ನೀಡಿದರು.

ಸ್ಲಂ ಬೋರ್ಡ್‌ನಿಂದ 1.53 ಲಕ್ಷ ಮನೆಗಳ ನಿರ್ಮಾಣ ಆರಂಭಿಸಿದ್ದು, ಈಗಾಗಲೇ 35 ಸಾವಿರ ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ 35 ಸಾವಿರ ಮನೆಗಳನ್ನು ಹಂಚಿಕೆ ಮಾಡಲಾಗುವುದು. ಬೆಂಗಳೂರು ನಗರದಲ್ಲಿ 52 ಸಾವಿರ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಮೊನ್ನೆಯಷ್ಟೇ 5 ಸಾವಿರ ಮನೆಗಳ ಹಂಚಿಕೆಯಾಗಿದೆ. ಇದೇ ತಿಂಗಳಲ್ಲಿ 5 ಸಾವಿರ ಮನೆಗಳು ಹಾಗೂ ಮುಂದಿನ ಕೆಲ ತಿಂಗಳುಗಳಲ್ಲಿ 15–20 ಸಾವಿರ ಮನೆಗಳ ಹಂಚಿಕೆ ಮಾಡಲಾಗುವುದು. 2015–16ರಲ್ಲಿ ಆದಂತಹ ತೀರ್ಮಾನಗಳು, ತೀರ್ಮಾನಗಳಾಗಿಯೇ ಇದ್ದವೇ ಹೊರತು ಕಾರ್ಯರೂಪಕ್ಕೆ ಬಂದಿರಲಿಲ್ಲ. ವಸತಿ ಮಂತ್ರಿಯಾಗಿ ಆರೇಳು ವರ್ಷ ಕೆಲಸ ಮಾಡಿದ್ದೇವೆ. ಈ ಅವಧಿಯಲ್ಲಿಯೇ ಅತೀ ಹೆಚ್ಚಿನ ಮನೆಗಳನ್ನು ಹಂಚಿಕೆ ಮಾಡಿದ್ದೇವೆ ಎಂದು ತಿಳಿಸಿದರು.

ನಾನಾ ಸಮಸ್ಯೆಗಳ ನಿವಾರಣೆ: ನಗರ ಪ್ರದೇಶಗಳಲ್ಲಿ ಮನೆಕಟ್ಟಿಕೊಳ್ಳಲು ನೀಡುತ್ತಿದ್ದ 87 ಸಾವಿರ ಸಹಾಯಧನವನ್ನು 3.50 ಲಕ್ಷಕ್ಕೆ ಹೆಚ್ಚಳ(ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ) ಮಾಡಿದ್ದೇವೆ. ಇತರೆ ಸಮುದಾಯಗಳಿಗೆ 2.70 ಲಕ್ಷ ರೂ. ಸಹಾಯಧನ ನೀಡುತ್ತಿದ್ದೇವೆ. ಅಡಮಾನ ರದ್ದಾಗಿದೆ. ಅಸಂಘಟಿತ ಕಾರ್ಮಿಕರಿಗೆ 2 ಲಕ್ಷ ರೂ.ವರೆಗಿನ ಸಾಲವನ್ನು ಬಡ್ಡಿ ರಹಿತವಾಗಿ ನೀಡಲಾಗುತ್ತಿದೆ. ಒಟ್ಟಾರೆಯಾಗಿ ಬಡವರಿಗೆ ಅನುಕೂಲವಾಗುವಂತೆ ಎಲ್ಲಾ ಬಗೆಯ ಯೋಜನೆಗಳನ್ನು ರೂಪಿಸಿ ಕೆಲಸ ಮಾಡುತ್ತಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಡಬಲ್ ಎಂಜಿನ್ ಸರ್ಕಾರ: ನಮ್ಮದು ಡಬಲ್ ಎಂಜಿನ್ ಸರ್ಕಾರ. ಕೇಂದ್ರ ಸರ್ಕಾರದಿಂದ ನೀಡುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಸೂರಿಲ್ಲದವರಿಗೆ ಸೂರು ನೀಡುತ್ತಿದ್ದೇವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯಸರ್ಕಾರ ಎಲ್ಲಾ ವರ್ಗದ ಜನರ ಅನುಕೂಲತೆಗಳನ್ನು ಪೂರೈಸುವಲ್ಲಿ ಸಕ್ರಿಯವಾಗಿದೆ ಎಂದರು.

ಭಾರತೀಯ ವಾಯುಪಡೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ.ವಿನಯ್ ವಿಟ್ಟಲ್ ರೋಚಕ ಅನುಭವ ಅನಾವರಣ



ಮೈಸೂರು, ಫೆ.9(ಜಿಎ)– ಭಾರತೀಯ ವಾಯುಪಡೆಯಲ್ಲಿ ಕಾರ್ಯನಿರ್ವಹಿಸಲು ತಾಳ್ಮೆ, ಸ್ವಂತ ನಿರ್ಧಾರ ಹಾಗೂ ಎಂತಹದೇ ಪರಿಸ್ಥಿತಿಯನ್ನು ನಿರ್ವಹಿಸುವ ಸಾಮರ್ಥ್ಯ ಇರಬೇಕು ಎಂದು ಭಾರತೀಯ ವಾಯುಪಡೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ. ವಿನಯ್ ವಿಟ್ಟಲ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಐಎಎಫ್‌ನಲ್ಲಿ ನನ್ನ ಅದ್ಭುತ ಪ್ರಯಾಣ' ಕುರಿತು ಕ್ಯಾಪ್ಟನ್ ಡಾ. ವಿನಯ್ ವಿಟ್ಟಲ್ ಐಎಎಫ್‌ನಲ್ಲಿ ತಮ್ಮ ಅಧಿಕಾರಾವಧಿಯ ವಿವಿಧ ಕಾರ್ಯಾಚರಣೆಗಳ ಬಗ್ಗೆ ವಿವರಿಸಿದರು.


ನಾನು ಚಿಕ್ಕವನಾಗಿದ್ದಾಗ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಯುದ್ಧವಿಮಾನಗಳನ್ನು ಕಂಡು ಪೈಲಟ್ ಆಗಬೇಕು, ಫೈಟರ್ ಜೆಟ್‌ಗಳನ್ನು ಹಾರಿಸಬೇಕು ಮತ್ತು ದೇಶಕ್ಕೆ ಸೇವೆ ಸಲ್ಲಿಸಬೇಕು ಎಂಬುದು ಕನಸಾಗಿತ್ತು. ಉತ್ಸಾಹ, ಮನಸ್ಸಿನ ಏಕಾಗ್ರತೆಯಿಂದ ಕನಸು ನನಸಾಯಿತು. ಆದರೆ, ಅದು ಅಷ್ಟು ಸುಲಭ ದಾರಿಯಾಗಿರಲಿಲ್ಲ. ಪೈಲಟ್‌ಗಳ ತರಬೇತಿ ಉನ್ನತ ಗುಣಮಟ್ಟದ್ದಾಗಿದ್ದು, ಅದು ಬಹಳಷ್ಟು ಒತ್ತಡ, ಆತಂಕವನ್ನು ಸೃಷ್ಟಿಸಿತು. ಆದರೆ, ನಾನು ಛಲ ಬಿಡದೆ ತರಬೇತಿ ಮುಗಿಸಿದೆ ಎಂದು ಪೈಲಟ್‌ಗಳ ತರಬೇತಿಯ ಸಾಹಸವನ್ನು ತೆರೆದಿಟ್ಟರು.

ಕಾರ್ಯಕ್ರಮದಲ್ಲಿ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಕಾರ್ಯದರ್ಶಿ ಎಚ್.ಎಸ್.ಸುರೇಶ್ ಬಾಬು, ಜಂಟಿ ಕಾರ್ಯದರ್ಶಿ ಡಾ.ಆರ್.ದೀಪ ಹಾಗೂ ಬಿ.ವಿ. ರವೀಂದ್ರನಾಥ್ ಮತ್ತಿತರರಿದ್ದರು.

2011ರಿಂದ 16 ಲಕ್ಷ ಮಂದಿ ಭಾರತೀಯ ಪೌರತ್ವಕ್ಕೆ ಗುಡ್ ಬೈ!

ನವದೆಹಲಿ, ಫೆ.9– 2011ರಿಂದ 16 ಲಕ್ಷ ಮಂದಿ ಭಾರತೀಯರು ತಮ್ಮ ಪೌರತ್ವವನ್ನು ತ್ಯಜಿಸಿದ್ದಾರೆ. ಈ ಪೈಕಿ ಕಳೆದ ವರ್ಷ ಒಂದರಲ್ಲೇ 2,25,620 ಮಂದಿ ಪೌರತ್ವ ಬಿಟ್ಟುಕೊಟ್ಟಿದ್ದಾರೆ ಎಂದು ಸರ್ಕಾರ ರಾಜ್ಯಸಭೆಯಲ್ಲಿ ಅಂಕಿ–ಅಂಶ ಪ್ರಕಟಿಸಿದೆ. ವಿದೇಶಾಂಗ ಸಚಿವ ಎಸ್.ಜೈಶಂಕರ್ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಈ ಅಂಕಿ–ಅಂಶಗಳನ್ನು ಪ್ರಕಟಿಸಿದ್ದಾರೆ. 2015ರಲ್ಲಿ 1,31,489 ಮಂದಿ, 2016ರಲ್ಲಿ 1,41,603 ಮಂದಿ, 2017ರಲ್ಲಿ 1,33,049 ಮಂದಿ ಪೌರತ್ವ ತ್ಯಜಿಸಿದ್ದರೆ, 2018ರಲ್ಲಿ ಈ ಸಂಖ್ಯೆ 1,34,561ರಷ್ಟಿತ್ತು ಹಾಗೂ 1,44,017 ಮಂದಿ 2019ರಲ್ಲಿ ಪೌರತ್ವ ತ್ಯಜಿಸಿದ್ದಾರೆ. 2020ರಲ್ಲಿ 85,256 ಹಾಗೂ 2021ರಲ್ಲಿ 1,63,370 ಮಂದಿ ಪೌರತ್ವವನ್ನು ಬಿಟ್ಟುಕೊಟ್ಟಿದ್ದಾರೆ ಎಂದು ಸರ್ಕಾರ ತಿಳಿಸಿದೆ. ಸಚಿವರು ನೀಡಿರುವ ಮಾಹಿತಿಯ ಪ್ರಕಾರ, 2022 ರಲ್ಲಿ 2.25,620 ಮಂದಿ ಪೌರತ್ವ ತ್ಯಜಿಸಿದ್ದಾರೆ.

ನಿಧನ



ಇವರು ದಿ: 09.02.2023 ರಂದು ದೈವಾಧೀನರಾಗಿದ್ದು, ಮೃತರ ಅಂತ್ಯಕ್ರಿಯೆಯನ್ನು ದಿ: 10.02.2023 ರಂದು ಕಾವೇರಿ ಶಾಲೆಯ ಪಕ್ಕದ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ಮಧ್ಯಾಹ್ನ : 12.30 ಗಂಟೆಗೆ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗ

ಶ್ರೀ ಜಿ. ನಾರಾಯಣ
ಮೈಸೂರು ಮಹಾನಗರ ಪಾಲಿಕೆಯ ನಿವೃತ್ತ ನೌಕರರು

11ನೇ ವರ್ಷದ ಸವಿನೆನಪು



ಕೆ.ಆರ್.ಜಯಲಕ್ಷ್ಮಿ
ದುಃಖತಪ್ತರು: ಮಗನಾದ ಪ್ರಕಾಶ್.ಬಿ.ಜಿ, ಸೊಸೆ ಹಾಗೂ ಮೊಮ್ಮಕ್ಕಳು, ಮೈಸೂರು.

ಶೇ.50ರಷ್ಟು ದಂಡ ರಿಯಾಯಿತಿಗೆ ನಾಳೆ ಕಡೇ ದಿನ

ಪೊಲೀಸ್ ಠಾಣೆಗಳಲ್ಲಿ ನೂಕು–ನುಗ್ಗಲು



ಮೈಸೂರು, ಫೆ.9(ಆರ್‌ಕೆ)–ವಾಹನ ಸಂಚಾರ ನಿಯಮ ಉಲ್ಲಂಘನೆ ದಂಡದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಿರುವುದರಿಂದ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಸಲು ಜನ ಈಗ ಮುಗಿ ಬೀಳುತ್ತಿದ್ದಾರೆ.

ಸರ್ಕಾರದ ಆದೇಶದಂತೆ ಬಾಕಿ ಇರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡವನ್ನು ಫೆಬ್ರವರಿ 11ರೊಳಗೆ ಪಾವತಿಸಿದಲ್ಲಿ ಶೇ.50ರಷ್ಟು ರಿಯಾಯಿತಿ ನೀಡುವುದಾಗಿ ಮೈಸೂರು ನಗರ ಪೊಲೀಸ್ ಘಟಕವು ಘೋಷಿಸುತ್ತಿದ್ದಂತೆಯೇ, ಸಂಚಾರ ನಿಯಮ ಉಲ್ಲಂಘನೆ ಮಾಡಿರುವ ವಾಹನ ಮಾಲೀಕರು ದಂಡ ಪಾವತಿಸಲು ಮುಗಿ ಬೀಳುತ್ತಿದ್ದು, ಎಲ್ಲಾ ಸಂಚಾರ ಠಾಣೆಗಳಲ್ಲಿ ಸಾಲುಗಟ್ಟಿ ನಿಂತು ಶೇ.50ರಷ್ಟು ರಿಯಾಯಿತಿ ದರದಲ್ಲಿ ದಂಡದ ಹಣ ಪಾವತಿಸುತ್ತಿರುವುದು ಕಂಡು ಬಂದಿದೆ.

ಮೈಸೂರಿನ ಕೆ.ಆರ್., ಕುವೆಂಪುನಗರ, ವಿವಿ ಪುರಂ, ದೇವರಾಜ, ಎನ್.ಆರ್., ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆಗಳಲ್ಲಿ ಸ್ವಯಂ ಪ್ರೇರಣೆಯಿಂದ ದಂಡದ ಹಣ ಪಾವತಿಸುತ್ತಿದ್ದಾರೆ. ವಾಹನದ ನೋಂದಣಿ ಸಂಖ್ಯೆ ಹೇಳುತ್ತಿದ್ದಂತೆಯೇ ಆ ವಾಹನದ ಮೇಲೆ ಎಷ್ಟು ಪ್ರಕರಣಗಳಿವೆ ಎಂಬುದು ತಿಳಿಯುತ್ತದೆ. ದಂಡದ ಹಣ ಎಷ್ಟು ಬಾಕಿ ಇದೆ ಎಂದು ತಿಳಿಯುತ್ತಿದ್ದಂತೆಯೇ ಅದರಲ್ಲಿ ಶೇ.50ರಷ್ಟನ್ನು ವಾಹನ ಮಾಲೀಕರಿಂದ ಸಂಚಾರ ಠಾಣೆಗಳ ಪೊಲೀಸರು ಕಟ್ಟಿಸಿಕೊಳ್ಳುತ್ತಿದ್ದಾರೆ.

ಮೈಸೂರು ನಗರದ ಸಿಗ್ನಲ್ ಲೈಟ್ ಜಂಕ್ಷನ್, ಪ್ರಮುಖ ರಸ್ತೆ, ಸರ್ಕಲ್‌ಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳಲ್ಲಿ ಸೆರೆಯಾದ ಫೋಟೋಗಳ ಆಧಾರದಲ್ಲಿ ಸೃಜಿಸಿದ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಇ–ಚಲನ್ ನೋಡಿ ಒಟ್ಟು ದಂಡ ಮೊತ್ತದ ಶೇ.50ರಷ್ಟು ಹಣ ಪಾವತಿಸಿಕೊಂಡು ಸಂಚಾರ ಪೊಲೀಸರು ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸುತ್ತಿದ್ದಾರೆ.

ದಂಡ ಪಾವತಿಸಬಯಸುವವರು ಹತ್ತಿರದ ಸಂಚಾರ ಪೊಲೀಸ್ ಠಾಣೆಗೆ ತೆರಳಿ ಚಲನ್ ತೋರಿಸಿ ಶೇ.50ರ ರಿಯಾಯಿತಿ ದರದಲ್ಲಿ ಹಣ ಪಾವತಿಸಿ ತಮ್ಮ ವಾಹನದ ಮೇಲಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳಬಹುದಲ್ಲದೆ, ಪೇಟಿಎಂ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲೂ ದಂಡ ಪಾವತಿಸಬಹುದು. ಶೇ.50ರ ರಿಯಾಯಿತಿ ಅವಧಿಯನ್ನು ವಿಸ್ತರಿಸಿದರೆ ಒಳಿತು ಎಂದು ಕೆಲವು ಪೊಲೀಸರಲ್ಲಿ ಕೇಳಿಕೊಳ್ಳುತ್ತಿದ್ದರು.

ಅದಕ್ಕೆ ಪ್ರತಿಕ್ರಿಯಿಸಿರುವ ನಗರ ಪೊಲೀಸ್ ಆಯುಕ್ತ ಡಾ. ಬಿ.ರಮೇಶ ಅವರು ಸರ್ಕಾರದ ಆದೇಶದಂತೆ ರಿಯಾಯಿತಿ ದರದಲ್ಲಿ ದಂಡ ಪಾವತಿಸಲು ಫೆ11ರ ಗಡುವು ನೀಡಲಾಗಿದೆ. ಮತ್ತೆ ಸರ್ಕಾರದ ಆದೇಶ ಹೊರಡಿಸುವವರೆಗೆ ನಾವು ಅವಧಿ ವಿಸ್ತರಿಸುವುದಿಲ್ಲ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ. ಇ–ಚಲನ್ ಹೊಂದಿ ರುವವರು ತಾವೇ ಸ್ವಯಂ ಪ್ರೇರಣೆಯಿಂದ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಸಬೇಕು. ಸರ್ಕಾರ ನೀಡಿರುವ ಅವಕಾಶ ಬಳಸಿಕೊಂಡು ನಾಗರಿಕರು ತಮ್ಮ ವಾಹನಗಳ ಮೇಲಿನ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಳ್ಳುವಂತೆಯೂ ಅವರು ತಿಳಿಸಿದ್ದಾರೆ.

3.92 ಕೋಟಿ ರೂ. ದಂಡ ಸಂಗ್ರಹ

ಮೈಸೂರು, ಫೆ.9(ಆರ್‌ಕೆ)–ಮೈಸೂರು ನಗರದಾದ್ಯಂತ ಸಂಚಾರ ನಿಯಮ ಉಲ್ಲಂಘನೆಯಾಗಿದ್ದ 25,51,048 ಪ್ರಕರಣಗಳಲ್ಲಿ ಬಾಕಿ ಉಳಿದಿದ್ದ 127.83 ಕೋಟಿ ರೂ. ದಂಡದ ಪೈಕಿ ಶೇ.50ರಷ್ಟು ರಿಯಾಯಿತಿ ನೀಡಿದ ಹಿನ್ನೆಲೆಯಲ್ಲಿ ಇಂದು ಸಂಜೆ 7 ಗಂಟೆವರೆಗೆ 3,92,97,700 ರೂ.ಗಳನ್ನು ವಾಹನಗಳ ಮಾಲೀಕರು ಪಾವತಿಸಿದ್ದಾರೆ.

2019ರಿಂದ 2022ರ ನವೆಂಬರ್ 30ರವರೆಗೆ 30,17,367 ಇ–ಚಲನ್ ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು, 4,66,319 ಪ್ರಕರಣಗಳು ವಿಲೇವಾರಿಯಾಗಿದ್ದವು. ಉಳಿದ 25,51,048 ಪ್ರಕರಣಗಳಲ್ಲಿ 127 ಕೋಟಿ, 82 ಲಕ್ಷದ 93 ಸಾವಿರದ 700 ರೂ. ದಂಡ ಸಂಗ್ರಹ ಬಾಕಿ ಇತ್ತು. ಸರ್ಕಾರವು ಶೇ.50ರಷ್ಟು ರಿಯಾಯಿತಿ ನೀಡಿ ಫೆಬ್ರವರಿ 11ರೊಳಗೆ ಬಾಕಿ ದಂಡ ಪಾವತಿಸಲು ಗಡುವು ನೀಡಿರುವುದರಿಂದ ವಾಹನಗಳ ಆರ್‌ಸಿ ಮಾಲೀಕರು ಮುಂದೆ ಬರುತ್ತಿದ್ದು, ಇಂದು ಸಂಜೆ 7 ಗಂಟೆವರೆಗೆ ಒಟ್ಟು 3,92,97,700 ರೂ. ದಂಡವನ್ನು ಪಾವತಿಸಿದ್ದಾರೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ತಿಳಿಸಿದ್ದಾರೆ.

ಶೇ.50ರ ರಿಯಾಯಿತಿ ಘೋಷಿಸಿರುವುದರಿಂದ ಅವಕಾಶ ಬಳಸಿಕೊಂಡು ಸಂಚಾರ ನಿಯಮ ಉಲ್ಲಂಘನೆ ಪ್ರಕರಣದ ಬಾಕಿ ದಂಡ ಪಾವತಿಸಲು ಮುಂದೆ ಬರುತ್ತಿರುವ ಸಾರ್ವಜನಿಕರು, ಫೆಬ್ರವರಿ 11ರೊಳಗೆ ಹೆಚ್ಚು ಮಂದಿ ದಂಡ ಪಾವತಿಸುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದ್ದಾರೆ.

ದೇವಾಲಯದ ಆಸ್ತಿ ರಕ್ಷಣೆಗೆ ಒತ್ತಾಯಿಸಿ ಪ್ರತಿಭಟನೆ



ಮಂಡ್ಯ, ಫೆ.9– ತಾಲೂಕಿನ ಸಾತನೂರು ಗ್ರಾಮದ ಶ್ರೀಕಂಬದ ನರಸಿಂಹ ಸ್ವಾಮಿ ದೇವಾಲಯದ ಆಸ್ತಿ ರಕ್ಷಿಸಬೇಕು. ಸರ್ವೇ ನಂ.331ರಲ್ಲಿ ಅನಧಿಕೃತವಾಗಿ ವಾಸವಿರುವವರನ್ನು ತೆರವುಗೊಳಿಸುವಂತೆ ಆಗ್ರಹಿಸಿ ಸಾತನೂರು ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಸ್ಥರು ಗುರುವಾರ ಪ್ರತಿಭಟನೆ ನಡೆಸಿದರು.

ಗ್ರಾಮದ ನ್ಯಾಯಬೆಲೆ ಅಂಗಡಿ ಬಳಿ ಜಮಾಯಿಸಿದ ನೂರಾರು ಗ್ರಾಮಸ್ಥರು, ಅಲ್ಲಿಂದ ಮೆರವಣಿಗೆಯಲ್ಲಿ ನಗರದ ಕಾಳಿಕಾಂಬ ದೇವಸ್ಥಾನ ತಲುಪಿ ಪೂಜೆ ಸಲ್ಲಿಸಿ ಜಿಲ್ಲಾಧಿಕಾರಿ ಕಚೇರಿವರೆಗೆ ಕಾಲ್ನಡಿಗೆ, ಎತ್ತಿನಗಾಡಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕಂಬದ ನರಸಿಂಹಸ್ವಾಮಿ ದೇವಸ್ಥಾನ ಪುರಾತನ ದೇವಸ್ಥಾನವಾಗಿದೆ. 12 ವರ್ಷದ ಹಿಂದೆ ಸಮಿತಿ ಮತ್ತು ದೇವರ ಭಕ್ತರ ಸಹಕಾರದೊಂದಿಗೆ ದೇವಸ್ಥಾನ ಜೀರ್ಣೋದ್ಧಾರಗೊಂಡಿದೆ. ಆದರೆ ಈ ಸ್ಥಳದಲ್ಲಿ ಕೆಲವರು ಅನಧಿಕೃತವಾಗಿ ವಾಸಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ದೇವಸ್ಥಾನ 12 ಎಕರೆ 4 ಗುಂಟೆ ವಿಸ್ತೀರ್ಣ ಹೊಂದಿದೆ. ಇಲ್ಲಿ ಪ್ರಾರ್ಥನಾ ಮಂದಿರ, ಅಡುಗೆ ಕೋಣೆ, ಊಟದ ಮನೆ, ವಿಶ್ರಾಂತಿಗಾಗಿ ವಸತಿ ಗೃಹ, ಭಕ್ತರಿಗಾಗಿ 5 ಪ್ರತ್ಯೇಕ ಕೊಠಡಿ ಹಾಗೂ ತಪೋವನದ ಪರಿಸರಕ್ಕೆ ಅಗತ್ಯವಾಗಿರುವ ಹೂ ತೋಟದ ಅಭಿವೃದ್ಧಿ ಮಾಡುವ ಉದ್ದೇಶ ಹೊಂದಲಾಗಿದ್ದು, ಇದರ ಉಸ್ತುವಾರಿಗಾಗಿ ಸ್ವಾಮಿ ಶ್ರದ್ಧಾನಂದರನ್ನು ನೇಮಿಸಲಾಗಿತ್ತು. ಆ ನಂತರ ಅಲ್ಲಿ ಧಾರ್ಮಿಕ ಕಾರ್ಯ ನಡೆಯಲಿಲ್ಲ. ಸ್ವಾಮೀಜಿ ಸಹ ನಿಧನ ಹೊಂದಿದರು. ಹಾಗಾಗಿ ಈ ಜಾಗವನ್ನು ದೇವಸ್ಥಾನದ ಹೆಸರಿಗೆ ಮಾಡಿಕೊಡುವಂತೆ ಉಪವಿಭಾಗಾಧಿಕಾರಿಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಜಮೀನಿನ ಆರ್‌ಟಿಸಿ ದೇವಸ್ಥಾನದ ಹೆಸರಿಗೆ ಬಂದಿದೆ. ಆದರೆ ಶ್ರದ್ಧಾನಂದ ಸ್ವಾಮೀಜಿ ಅವರ ಹೆಂಡತಿ ಮತ್ತು ಮಕ್ಕಳು ಎಂದು ಹೇಳಿಕೊಂಡು ಕೆಲವರು ಅನಧಿಕೃತವಾಗಿ ವಾಸಿಸುತ್ತಿದ್ದಾರೆ. ಆದ್ದರಿಂದ ಫೆ.15ರೊಳಗೆ ಅವರನ್ನು ತೆರವು ಮಾಡಿಸಬೇಕು. ಇಲ್ಲದಿದ್ದಲ್ಲಿ ಮುಂದಾಗುವ ಅನಾಹುತಕ್ಕೆ ಜಿಲ್ಲಾಡಳಿತವೇ ನೇರ ಹೊಣೆ ಎಂದು ಎಚ್ಚರಿಕೆ ನೀಡಿದರು. ಗ್ರಾಮಸ್ಥರಾದ ಎಸ್.ಪಿ.ಮಹೇಶ್, ಸತೀಶ್, ರವಿ, ಬಾಬು, ಲಕ್ಷ್ಮಣ್, ಬಾಲರಾಜು, ನಾಗನರಸಿಂಹ, ವೇಣುಗೋಪಾಲ್, ಡಿ.ಕೃಷ್ಣ, ಅಮ್ಮಣ್ಣಿ ಮಂಜು, ಶಂಕರ್, ರುದ್ರಪ್ಪ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ಮಂದಿ ಇದ್ದರು.

ಪ್ರತಿಭಟನೆಯಲ್ಲಿ ರಾಜಕೀಯ ನಾಯಕರು

ನಗರದಲ್ಲಿ ದೇವಸ್ಥಾನದ ಆಸ್ತಿ ರಕ್ಷಣೆಗೆ ಆಗ್ರಹಿಸಿ ಸಾತನೂರು ಗ್ರಾಮಸ್ಥರು ಗುರುವಾರ ನಡೆಸಿದ ಹೋರಾಟಕ್ಕೆ ವಿವಿಧ ರಾಜಕೀಯ ಪಕ್ಷಗಳ ನಾಯಕರ ದಂಡು ಆಗಮಿಸಿ ಸಾಥ್ ನೀಡಿದರು.

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾದ ಕೀಲಾರ ರಾಧಾಕೃಷ್ಣ, ಗಣಿಗ ರವಿಕುಮಾರ್, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಕೃಷ್ಣ, ಜೆಡಿಎಸ್ ಯುವ ಮುಖಂಡ ಎಚ್.ಎನ್.ಯೋಗೇಶ್, ಸರ್ವೋದಯ ಕರ್ನಾಟಕ ಪಕ್ಷ ಮತ್ತು ರಾಜ್ಯ ರೈತ ಸಂಘದ ಅಭ್ಯರ್ಥಿ ಎಸ್.ಸಿ.ಮಧುಚಂದನ್, ಪ್ರಸನ್ನಗೌಡ, ಬಿಜೆಪಿಯ ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ ಸೇರಿದಂತೆ ಅನೇಕ ಮುಖಂಡರು ಬೆಂಬಲ ವ್ಯಕ್ತಪಡಿಸಿದರು.

ಬಿಜೆಪಿಯಿಂದ ಬ್ರಾಹ್ಮಣ ಸಮುದಾಯಕ್ಕೆ ಅನ್ಯಾಯ

ಶಾಸಕ ರವೀಂದ್ರ ಶ್ರೀಕಂಠಯ್ಯ ಆರೋಪ



ಶ್ರೀರಂಗಪಟ್ಟಣ, ಫೆ.9– ಬ್ರಾಹ್ಮಣ ಸಮುದಾಯ ಉದ್ಧಾರ ಮಾಡುತ್ತೇವೆ ಎಂದು ಬಿಜೆಪಿಯವರು ಬ್ರಾಹ್ಮಣ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಆರೋಪಿಸಿದರು.

ತಾಲೂಕಿನ ಪ್ರವಾಸಿತಾಣ ಬಲಮುರಿ ಕ್ಷೇತ್ರದ ಕಾವೇರಿ ನದಿಗೆ 1 ಕೋಟಿ ರೂ. ವೆಚ್ಚದ ಸೋಪಾನಕಟ್ಟೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಬ್ರಾಹ್ಮಣ ಸಮುದಾಯ ಉದ್ಧಾರ ಮಾಡುತ್ತಿದ್ದೇವೆ ಎಂದು ಬಿಜೆಪಿಯವರು ಬ್ರಾಹ್ಮಣ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಆದರೆ ನಾವು ಇದನ್ನು ಸುಸೂತ್ರವಾಗಿಲ್ಲ ಸಾಮೂಹಿಕವಾಗಿ ಸಾಮಾನ್ಯ ಜನರನ್ನು ಕರೆದೊಯ್ಯುವ ಮನಸ್ಥಿತಿ ಬಿಜೆಪಿಯವರಿಗಿಲ್ಲ, ಕೇವಲ ರಾಜಕೀಯ ಲಾಭಕ್ಕಾಗಿ ಮಾತನಾಡುತ್ತಿದ್ದಾರೆ ಎಂದರು.

ಕೆಆರ್‌ಎಸ್ ಜಲಾಶಯ ಮೈಸೂರು ಮಹಾರಾಜರ ಕೊಡುಗೆ. ಅಣೆಕಟ್ಟೆ ನಿರ್ಮಾಣದಲ್ಲಿ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದ ಸರ್ ಎಂ.ವಿ.ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಜಲಾಶಯದ ಮುಂಭಾಗ ನಿರ್ಮಿಸಲು ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ತೀರ್ಮಾನಿಸಲಾಗಿತ್ತು. ಆದರೆ ಬಿಜೆಪಿ ಸರ್ಕಾರ ಅದಕ್ಕೆ ಅವಕಾಶ ನೀಡದೇ ಅಡ್ಡಗಾಲು ಹಾಕಿದೆ ಎಂದು ಕಿಡಿಕಾರಿದರು.

ಪ್ರಹ್ಲಾದ್ ಜೋಷಿ ರಾಜ್ಯದ ಜನರ, ರೈತರ ಮನಸ್ಥಿತಿ ಅರಿವಿಲ್ಲದೆ ಮಾತನಾಡುತ್ತಿದ್ದಾರೆ. ಜೋಷಿ ಅವರು ಈ ಬಾರಿ ಎಷ್ಟು ಜನರನ್ನು ಗೆಲ್ಲಿಸಿಕೊಳ್ಳುತ್ತಾರೆ ಎಂಬುದು ಬಹಳ ಮುಖ್ಯ. ಅಲ್ಲದೇ ಜೆಡಿಎಸ್ ಅಥವಾ ಕುಮಾರಸ್ವಾಮಿ ಬಗ್ಗೆ ಮಾತನಾಡುವಾಗ ಮುಂದಿನ ಹಿತದೃಷ್ಟಿ ಇಟ್ಟುಕೊಂಡು ಸಭ್ಯವಾಗಿ ಮಾತನಾಡುವುದು ಸೂಕ್ತ ಎಂದು ಸಲಹೆ ನೀಡಿದರು.

ಬೆಳಗೊಳ ಗ್ರಾಮಸ್ಥರು ಬಲಮುರಿ ಕ್ಷೇತ್ರ ಅಭಿವೃದ್ಧಿಗೊಳಿಸುವಂತೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಪವಿತ್ರ ಸ್ಥಳವನ್ನಾಗಿಸಲು ಮುಂದಾಗಿದ್ದು, ಈಗಾಗಲೇ ಪ್ರಖ್ಯಾತಿ ಹೊಂದಿದ್ದ ಈ ಸ್ಥಳವನ್ನು ಪ್ರವಾಸಿ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು. ಈ ವೇಳೆ ಪಿಎಸಿಎಸ್ ಮಾಜಿ ಅಧ್ಯಕ್ಷ ಸ್ವಾಮಿಗೌಡ, ಬಲಮುರಿ ದೇವಾಲಯಗಳ ಅಭಿವೃದ್ಧಿ ಸಮಿತಿ ಅಧ್ಯಕ್ಷ ಸುಧಾಕರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ವಿ.ಲೋಕೇಶ್, ಉಪಾಧ್ಯಕ್ಷ ರವಿ, ಸದಸ್ಯ ಪ್ರಕಾಶ್, ಮಾಜಿ ಗ್ರಾಪಂ ಸದಸ್ಯರಾದ ವಾಸು, ಸಂತೋಷ್ ಗ್ರಾಮದ ಯಜಮಾನರಾದ ಶ್ರೀನಿವಾಸೇಗೌಡ, ಸ್ವಾಮೀಗೌಡ, ಚಿದಂಬರ್, ಕೃಷ್ಣಪ್ಪ ಮಟ್ಟರಾಜು ಇತರರಿದ್ದರು.

ಚಿರತೆ ದಾಳಿ: ಇಬ್ಬರಿಗೆ ಗಾಯ, ಅರಣ್ಯ ಇಲಾಖೆಯಿಂದ ಚಿರತೆ ಸೆರೆ



"8 ವರ್ಷದ ಗಂಡು ಚಿರತೆ ಮೂಡನಹಳ್ಳಿಯ ನಿಂಗೇಗೌಡರ ಮನೆಯಲ್ಲಿ ಸೆರೆಸಿಕ್ಕಿದೆ. ಕಬ್ಬಿನ ಗದ್ದೆಗಳಲ್ಲಿ ಹೆಚ್ಚಾಗಿ ವಾಸಿಸುವ ಚಿರತೆಗಳು ಕಬ್ಬನ್ನು ಕಟಾವು ಮಾಡಿದ ನಂತರ ಆಹಾರ ಅರಸಿ ಗ್ರಾಮಗಳಿಗೆ ತೆರಳುವುದು ಸಹಜ. ರೈತರು ಎಚ್ಚರಿಕೆಯಿಂದ ಇರಬೇಕು. ಚಿರತೆಗಳ ಬಗ್ಗೆ ಮಾಹಿತಿ ದೊರಕಿದಲ್ಲಿ ಅರಣ್ಯ ಇಲಾಖೆಗೆ ವಿಷಯ ತಿಳಿಸಬೇಕು."

- ಹೆಚ್.ಎಸ್.ಗಂಗಾಧರ್, ವಲಯ ಅರಣ್ಯಾಧಿಕಾರಿ, ಕೆ.ಆರ್.ಪೇಟೆ.

ಕೆ.ಆರ್.ಪೇಟೆ, ಫೆ.9– ತೋಟದ ಮನೆಗೆ ನುಗ್ಗಿದ ಚಿರತೆ ಇಬ್ಬರ ಮೇಲೆ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ತಾಲೂಕಿನ ಮೂಡನಹಳ್ಳಿ ಗ್ರಾಮದಲ್ಲಿ ಗುರುವಾರ ಮುಂಜಾನೆ ನಡೆದಿದೆ.

ಗ್ರಾಮದ ನಿವಾಸಿ ನಿಂಗೇಗೌಡ, ಅವರ ಪತ್ನಿ ಗೌರಮ್ಮ ಗಾಯಗೊಂಡವರು. ಆಹಾರ ಅರಸಿ ಚಿರತೆ ಬುಧವಾರ ಮಧ್ಯರಾತ್ರಿ ನಿಂಗೇಗೌಡರ ತೋಟದ ಮನೆಗೆ ನುಗ್ಗಿದೆ. ಈ ವೇಳೆ ನಿಂಗೇಗೌಡ ಹಾಗೂ ಪತ್ನಿ ಗೌರಮ್ಮ ಮನೆಯಲ್ಲೇ ಮಲಗಿದ್ದರು. ಚಿರತೆ ಕೊಟ್ಟಿಗೆಯಲ್ಲಿದ್ದ ಮೇಕೆಗಳ ಮೇಲೆ ದಾಳಿ ನಡೆಸಿದಾಗ ಎಚ್ಚರಗೊಂಡ ನಿಂಗೇಗೌಡ ಹಾಗೂ ಪತ್ನಿ ತೋಟದ ಮನೆಯಿಂದ ಹೊರಬರಲು ಯತ್ನಿಸಿದ್ದು, ಚಿರತೆ ಇಬ್ಬರ ಮೇಲೂ ದಾಳಿ ನಡೆಸಿ ಗಾಯಗೊಳಿಸಿದೆ. ಆದರೂ ಮನೆಯಿಂದ ಓಡಿ ಬಂದ ನಿಂಗೇಗೌಡ ಹಾಗೂ ಅವರ ಪತ್ನಿ ಮನೆ ಚಿಲಕ ಹಾಕಿ ಕೂಡಿ ಚಿರತೆ ಕೂಡಿ ಹಾಕಿದ್ದರು. ಘಟನೆಯಲ್ಲಿ ಚಿರತೆ ನಿಂಗೇಗೌಡರ ಮುಖಕ್ಕೆ, ಗೌರಮ್ಮನವರ ಎರಡೂ ಕೈಗಳನ್ನು ಕಚ್ಚಿ ಗಾಯಗೊಳಿಸಿದೆ. ತಕ್ಷಣ ಅವರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆ ದಾಖಲಿಸಲಾಗಿತ್ತು. ಮನೆಯೊಳಗಿದ್ದ 6 ಮೇಕೆಯಲ್ಲಿ ಒಂದನ್ನು ಚಿರತೆ ಕೊಂದು ಹಾಕಿದೆ. ಗುರುವಾರ ಮುಂಜಾನೆ ಮನೆ ಸುತ್ತಲೂ ಜನ ಸೇರಿಕೊಳ್ಳುತ್ತಿದ್ದಂತೆ ಬಂಧಿಯಾಗಿದ್ದ ಚಿರತೆ ಭಯದಿಂದ ಅಡಗಿ ಕುಳಿತಿತ್ತು. ಗ್ರಾಮಸ್ಥರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆ ಹಿಡಿದರು. ವಲಯ ಅರಣ್ಯಾಧಿಕಾರಿ ಗಂಗಾಧರ್ ಮೈಸೂರಿನ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಭೇಟಿಮಾಡಿ ಯೋಗಕ್ಷೇಮ ವಿಚಾರಿಸಿದರು.

ಡಿಸೆಂಬರ್‌ನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನದ ಯಶಸ್ಸಿಗೆ ಜಿಲ್ಲೆ ಜನತೆ ಸಹಕರಿಸಿ: ಕೇಂದ್ರ ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಮನವಿ



ಚಿನಕುರಳಿ, ಫೆ.9– ಜಿಲ್ಲೆಯಲ್ಲಿ 27 ವರ್ಷಗಳ ಬಳಿಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಿಸೆಂಬರ್‌ನಲ್ಲಿ ನಡೆಸಲು ತೀರ್ಮಾನಿಸಿದ್ದು, ಸಮ್ಮೇಳನದ ಯಶಸ್ಸಿಗೆ ಜಿಲ್ಲೆಯ ಜನತೆ ಸಹಕರಿಸಬೇಕು ಎಂದು ಕೇಂದ್ರ ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಮನವಿ ಮಾಡಿದರು.

ಬನ್ನಂಗಾಡಿಯಲ್ಲಿ ನಡೆದ 9ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಮಾತನಾಡಿದ ಅವರು, 1994ರಲ್ಲಿ ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು ಅಲ್ಲಿಂದೀಚೆಗೆ ಮಂಡ್ಯದಲ್ಲಿ ಸಮ್ಮೇಳನ ನಡೆದಿರಲಿಲ್ಲ. ನಾನು ಅಧ್ಯಕ್ಷ ಸ್ಥಾನದ ಚುನಾವಣೆ ಪ್ರಚಾರಕ್ಕೆ ಬಂದಾಗ ನಾನು ಅಧ್ಯಕ್ಷನಾದರೆ ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವುದಾಗಿ ಭರವಸೆ ನೀಡಿದ್ದೆ. ಅದರಂತೆ ಡಿಸೆಂಬರ್‌ನಲ್ಲಿ ಸಾಹಿತ್ಯ ಸಮ್ಮೇಳನ ನಡೆಸಲಾಗುವುದು. ಹಾವೇರಿ ಸಾಹಿತ್ಯ ಸಮ್ಮೇಳನ ನಡೆಸಿ ದಾಖಲೆ ನಿರ್ಮಿಸಿದ್ದೇನೆ. ಆ ದಾಖಲೆಯನ್ನು ಮಂಡ್ಯದ ಜನತೆ ಮುರಿಯಬೇಕು ಎಂದರು.

1915ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ಕನ್ನಡ ಸಾಹಿತ್ಯ ಪರಿಷತ್ ರಾಜ್ಯದಲ್ಲಿ ಕನ್ನಡ ಸಾಹಿತ್ಯ ಕಟ್ಟಿ ಬೆಳೆಸುವ ಕೆಲಸ ಮಾಡುತ್ತಿದೆ. ನಾನು ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯನವರು ನಡೆದು ಬಂದ ದಾರಿಯಲ್ಲಿಯೇ ಸಾಹಿತ್ಯ ಪರಿಷತ್ ಅನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದೇನೆ ಎಂದು ತಿಳಿಸಿದರು. ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯ ಜಿಲ್ಲೆಗೆ ಕೊಟ್ಟಿದ್ದಕ್ಕೆ ಜಿಲ್ಲೆ ಜನತೆ ಪರವಾಗಿ ಕೇಂದ್ರ ಕಸಾಪ ಅಧ್ಯಕ್ಷ ಮಹೇಶ್ ಜೋಷಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮಹೇಶ್ ಜೋಷಿ ಉತ್ತಮ ಸಂಘಟಕರು. ಅವರು ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ವಾಗಿ ಕೆಲಸ ಮಾಡಿದ್ದಾರೆ ಎಂದ ಅವರು, ಮಂಡ್ಯ ದಲ್ಲಿ ನಡೆಯುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬನ್ನಂಗಾಡಿ ಗ್ರಾಮದ ಮುಖಂಡರು, ಹಿರಿಯರು, ಗ್ರಾಪಂ ಅಧಿಕಾರಿಗಳು, ಸದಸ್ಯರು ಸಹಕಾರ ನೀಡಿದ್ದಾರೆ. ಅದಕ್ಕಾಗಿ ತಾಲೂಕು ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್ ಹಾಗೂ ಪದಾಧಿಕಾರಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಸಮಾರಂಭದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಸಾಹಿತಿ ಚಂದ್ರಶೇಖರಯ್ಯ, ಕಸಾಪ ಜಿಲ್ಲಾಧ್ಯಕ್ಷ ಸಿ.ಕೆ.ರವಿಕುಮಾರ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್, ತಾಲೂಕು ಕಸಾಪ ಅಧ್ಯಕ್ಷ ಪ್ರಕಾಶ್, ಗ್ರಾಪಂ ಅಧ್ಯಕ್ಷೆ ಕೆ.ಎಂ.ಶ್ರುತಿ, ಉಪಾಧ್ಯಕ್ಷ ತಮ್ಮೇಗೌಡ, ಡಾ.ಟಿ.ಸಿ.ಪೂರ್ಣಿಮಾ, ತಹಶೀಲ್ದಾರ್ ಸೌಮ್ಯ, ಮಲ್ಲೇಶ್, ಬಿ.ಎಸ್.ಶ್ರೀನಿವಾಸ್, ಮಾಸ್ಟರ್ ಶಿವೇಗೌಡ, ಬಿ.ಜೆ.ನಾಗಣ್ಣ, ವೆಂಕಟೇಶ್, ಬಿ.ಜೆ.ಪ್ರಕಾಶ್, ರವಿಕರ, ಕಸಾಪ ಕಾರ್ಯದರ್ಶಿ ನಂಜುಂಡಸ್ವಾಮಿ, ಎಂ.ರಮೇಶ್ ಸೇರಿದಂತೆ ಇತರರಿದ್ದರು.

ಶಾಸಕ ಸಿಎಸ್‌ಪಿಗೆ ಬೆಳ್ಳಿಗದೆ ವಿತರಣೆ

ಬನ್ನಂಗಾಡಿಯಲ್ಲಿ 9ನೇ ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿ ಯಶಸ್ವಿಗೊಳಿಸುವ ಮೂಲಕ ಗ್ರಾಮದಲ್ಲಿ ಸಾಂಸ್ಕೃತಿಕ ಕಲರವ ಮೂಡಿಸುವ ಜೊತೆಗೆ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಸ್ಪಂದಿಸಿದ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಬನ್ನಂಗಾಡಿ ಗ್ರಾಮದ ಯುವಕರು, ಮುಖಂಡರು, ಅಭಿಮಾನಿಗಳು, ಗ್ರಾಮಸ್ಥರು ಅಭಿನಂದಿಸಿ 'ಬೆಳ್ಳಿಗದೆ' ನೀಡಿದರು. ಈ ವೇಳೆ ಮುಖಂಡರಾದ ಬಿ.ಆರ್.ಪ್ರಸನ್ನ, ಬಿ.ಎಸ್.ಶ್ರೀನಿವಾಸ್, ಬಿ.ಆರ್.ಅವಿನಾಶ್, ಆನಂದ, ಮಹೇಶ್, ಬಿ.ಜಿ.ರಜಿನಿ, ಬಿ.ಎಂ.ಅಣ್ಣಯ್ಯ, ಬಿ.ಎನ್.ನಂದೀಶ್, ಗ್ರಾಪಂ ಸದಸ್ಯ ಪ್ರಭಾಕರ್, ಬಿ.ಎಚ್.ಪ್ರಸನ್ನ, ಬಿ.ಸಿ.ವಾಸು, ಜೆಸಿಪಿ ಚಲುವರಾಜು, ಮಂಜು, ಮಹೇಂದ್ರ ಸೇರಿದಂತೆ ಸಿಎಸ್‌ಪಿ ಅಭಿಮಾನಿಗಳು, ಮುಖಂಡರು ಹಾಜರಿದ್ದರು.

ಮೈಸೂರಿನ ಅರವಿಂದನಗರದಲ್ಲಿ ಮಹಿಳೆ, ಮಗಳಿಂದ ನಿವಾಸಿಗಳ ಮೇಲೆ ದೌರ್ಜನ್ಯ ಆರೋಪ



ಮೈಸೂರು, ಫೆ.9(ಪಿಎಂ)– ಮೈಸೂರಿನ ಅರವಿಂದನಗರದ 12ನೇ ಕ್ರಾಸ್ ನಿವಾಸಿ ಮತ್ತು ಬಿಜೆಪಿ ಮುಖಂಡರೂ ಆದ ಮಹಿಳೆ ಮತ್ತು ಇವರ ಪುತ್ರಿ, ಬಡಾವಣೆ ನಿವಾಸಿಗಳ ಮೇಲೆ ದೌರ್ಜನ್ಯ ನಡೆಸುತ್ತಿದ್ದು, ಈ ಇಬ್ಬರು ಇಡೀ ಅರವಿಂದನಗರದ ಶಾಂತಿ–ಸುವ್ಯವಸ್ಥೆ ಹಾಳು ಮಾಡುತ್ತಿದ್ದಾರೆ ಎಂದು ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಅರವಿಂದನಗರದಲ್ಲಿ ಕೂಲಿ ಕಾರ್ಮಿಕರು ಸೇರಿದಂತೆ ತಳ ಸಮುದಾಯದವರು ಹೆಚ್ಚಾಗಿ ವಾಸ ಮಾಡುತ್ತಿದ್ದಾರೆ. ಈ ನಡುವೆ ಇಲ್ಲಿನ ಬಿಜೆಪಿ ಮುಖಂಡರೂ ಆದ ಮಹಿಳೆ ಮತ್ತು ಇವರ ಪುತ್ರಿ ಬಡಾವಣೆ ನಿವಾಸಿಗಳಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿದರು.

ಈ ಅಮ್ಮ–ಮಗಳ ದೌರ್ಜನ್ಯಕ್ಕೆ ಕಡಿವಾಣ ಹಾಕಲು ಪೊಲೀಸ್ ಇಲಾಖೆಗೂ ಸಾಧ್ಯವಾಗುತ್ತಿಲ್ಲ. ಕಾರಣ ಮಹಿಳೆಯು ಬಿಜೆಪಿ ಮುಖಂಡರಾಗಿರುವುದು. ಈ ಮಹಿಳೆ ವಿರುದ್ಧ ಜಾತಿ ನಿಂದನೆ ಪ್ರಕರಣ ಸೇರಿದಂತೆ ವಿವಿಧ ರೀತಿಯ ಪ್ರಕರಣಗಳು ದಾಖಲಾಗಿದ್ದರೂ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಎಷ್ಟರ ಮಟ್ಟಿಗೆ ತಳಸಮುದಾಯದ ಜನತೆಗೆ ರಕ್ಷಣೆ ಇದೆ ಎಂಬುದಕ್ಕೆ ಇದೂ ಒಂದು ಉದಾಹರಣೆ ಎಂದು ಕಿಡಿಕಾರಿದರು. ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಹಲವು ಬಿಜೆಪಿ ನಾಯಕರೊಂದಿಗೆ ಫೋಟೋ ತೆಗೆಸಿಕೊಂಡಿರುವ ಈ ಮಹಿಳೆ, ರಾಜಕೀಯ ಪ್ರಭಾವ ಬಳಸಿ ದೌರ್ಜನ್ಯ ನಡೆಸುತ್ತಿದ್ದಾರೆ. ಈ ಹಿಂದೆ ಇದ್ದ ಪೊಲೀಸ್ ಅಧಿಕಾರಿಯೊಬ್ಬರಿಗೆ ಈ ಮಹಿಳೆ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದಾಗ, ಅವರು ಅಸಹಾಯಕತೆ ವ್ಯಕ್ತಪಡಿಸಿದ್ದರು ಎಂದರು. ಈ ಮಹಿಳೆ ಯಾವುದೇ ದೂರು ನೀಡಿದರೂ ಎಫ್‌ಐಆರ್ ಮಾಡಲಾಗುತ್ತದೆ. ಅವರಿಂದ ದೌರ್ಜನ್ಯಕ್ಕೆ ಒಳಗಾದವರು ದೂರು ನೀಡಿದರೆ ಕೇವಲ ಎನ್‌ಸಿಆರ್‌ಗೆ ಸೀಮಿತ ಆಗಿರುವುದೇ ಹೆಚ್ಚು. ಈಗಲಾದರೂ ಈ ಮಹಿಳೆ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಎಸ್‌ಸಿ–ಎಸ್‌ಟಿ ಸಮುದಾಯದ ಬಿಜೆಪಿ ಶಾಸಕರು, ಸಂಸದರು ಒಬ್ಬರೂ ದಲಿತರ ಮೇಲಿನ ದೌರ್ಜನ್ಯದ ವಿಚಾರದಲ್ಲಿ ಚಕಾರ ಎತ್ತುತ್ತಿಲ್ಲ. ಈ ಪೈಕಿ ಬಿಜೆಪಿ ಎಂಎಲ್‌ಸಿ ಛಲವಾದಿ ನಾರಾಯಣಸ್ವಾಮಿ ದೊಡ್ಡದಾಗಿ ಭಾಷಣ ಬಿಗಿಯುತ್ತಾರೆ. ಇಂತಹ ವಿಚಾರಗಳಲ್ಲಿ ಅವರಲ್ಲಿ ಯಾವುದೇ ಚಿಂತನೆ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಟ್ರಸ್ಟ್ ಕಾರ್ಯದರ್ಶಿ ಚಿನ್ನಅನ್ನದಾನಿ, ಅರವಿಂದನಗರದ ನಿವಾಸಿಗಳಾದ ರಂಜಿತಾ, ಲತಾಮಂಗೇಶ್ವರಿ ಮತ್ತಿತರರು ಗೋಷ್ಠಿಯಲ್ಲಿದ್ದರು.


ನಟಿ ಅಭಿನಯ ಬಂಧನಕ್ಕಾಗಿ ಲುಕ್ ಔಟ್ ನೋಟಿಸ್



ಬೆಂಗಳೂರು, ಫೆ.9– ಅತ್ತಿಗೆಗೆ ವರದಕ್ಷಿಣೆ ಕಿರುಕುಳ ನೀಡಿದ ಪ್ರಕರಣದಲ್ಲಿ ನಟಿ ಅಭಿನಯ ಅವರ ಬಂಧನಕ್ಕಾಗಿ ಚಂದ್ರಾ ಲೇಔಟ್ ಪೊಲೀಸರು ಲುಕ್ ಔಟ್ ನೋಟಿಸ್ ಹೊರಡಿಸಿದ್ದಾರೆ. ಜೈಲು ಶಿಕ್ಷೆ ಪ್ರಕಟವಾದ ಬಳಿಕ ತಲೆಮರೆಸಿಕೊಂಡಿರುವ ಅಭಿನಯ, ಅವರ ತಾಯಿ ಜಯಮ್ಮ ಹಾಗೂ ಸಹೋದರ ಚೆಲುವರಾಜು ಬಗ್ಗೆ ಸುಳಿವು ಸಿಕ್ಕರೆ ಕೂಡಲೇ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಪೊಲೀಸರು ಮನವಿ ಮಾಡಿದ್ದಾರೆ. ಅಭಿನಯ ಅವರ ಅತ್ತಿಗೆ ಲಕ್ಷ್ಮೀದೇವಿ ಅವರು ದಾಖಲಿಸಿದ್ದ ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಮೂವರು ಅಪರಾಧಿಗಳಿಗೆ ಸೆಷನ್ಸ್ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಇದರ ವಿರುದ್ಧ ಅಭಿನಯ ಅವರು ಹೈಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಆದರೆ, ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿದ್ದ ಹೈಕೋರ್ಟ್, ಅಭಿನಯ ಅವರ ತಾಯಿ ಜಯಮ್ಮಗೆ 5 ವರ್ಷ, ಅಭಿನಯ ಹಾಗೂ ಅವರ ಸಹೋದರ ಚೆಲುವರಾಜ್‌ಗೆ 2 ವರ್ಷ ಶಿಕ್ಷೆ ನೀಡಲಾಗಿತ್ತು. ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಆರೋಪಿಗಳನ್ನು ಬಂಧಿಸಿ ಕೋರ್ಟಿಗೆ ಹಾಜರು ಪಡಿಸಬೇಕಿತ್ತು. ಆದರೆ ಆರೋಪಿಗಳು ಕೈಗೆ ಸಿಗದೆ ತಲೆಮರೆಸಿಕೊಂಡಿದ್ದು, ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿ ಮಾಡಿದ್ದಾರೆ. ನಟಿ ಅಭಿನಯ 1983ರಲ್ಲಿ ಖ್ಯಾತ ನಿರ್ದೇಶಕ ಕಾಶಿನಾಥ್ ಅವರ ಸೂಪರ್ ಹಿಟ್ ಚಿತ್ರ 'ಅನುಭವ' ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದರು. ಕೆಲ ಕಾಲ ಚಿತ್ರರಂಗದಿಂದ ದೂರವಾಗಿದ್ದ ಇವರು, ಮತ್ತೆ ಹಿಟ್ಲರ್ ಕಲ್ಯಾಣ ಮತ್ತಿತರ ಜನಪ್ರಿಯ ಧಾರಾವಾಹಿಗಳ ಮೂಲಕ ಮನೆ ಮಾತಾಗಿದ್ದರು. ಇದೀಗ ಮತ್ತೆ ಧಾರವಾಹಿಯಿಂದಲೂ ಔಟ್ ಆಗಿದ್ದಾರೆ.

ನೀವೆಲ್ಲ ಸೇರಿದರೂ ನನ್ನೊಬ್ಬನಿಗೆ ಸಮ ಅಲ್ಲ

ಎದೆತಟ್ಟಿ ವಿಪಕ್ಷಗಳ ವಿರುದ್ಧ ಪ್ರಧಾನಿ ಮೋದಿ ಗುಡುಗು



ನವದೆಹಲಿ, ಫೆ.9– ಪ್ರಧಾನಿ ನರೇಂದ್ರ ಮೋದಿ ಗುರುವಾರ ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ವಿರುದ್ಧ ರೋಷಾವೇಷದಿಂದ ವಾಗ್ದಾಳಿ ನಡೆಸಿದರು. ವಿಪಕ್ಷಗಳು ಎಷ್ಟೇ ಆರೋಪ ಮಾಡಿದರೂ, ಕೆಸರು ಎರಚಿದಷ್ಟೂ ಕಮಲ ಮತ್ತಷ್ಟು ಅರಳುತ್ತದೆ ಎಂದು ಮಾರ್ಮಿಕವಾಗಿ ನುಡಿದರು. ಇಡೀ ಪ್ರತಿಪಕ್ಷಗಳು ನನ್ನೊಬ್ಬನಿಗೆ ಸಮ ಅಲ್ಲ ಎಂದು ಎದೆ ತಟ್ಟಿಕೊಂಡು ಗುಡುಗಿದರು.

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಚರ್ಚೆಯ ವೇಳೆ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಒಬ್ಬ ವ್ಯಕ್ತಿ ಹೇಗೆ ಹಲವರನ್ನು ಬಲವಾಗಿ ಎದುರಿಸುತ್ತಿದ್ದಾನೆ ಎಂಬುದನ್ನು ರಾಷ್ಟ್ರ ಗಮನಿಸುತ್ತಿದೆ. ವಿರೋಧ ಪಕ್ಷಗಳು ನನ್ನ ವಿರುದ್ಧ ಹೊಸ ಘೋಷಣೆಗಳನ್ನು ಹುಡುಕಬೇಕಿದೆ. ನಾನು ದೇಶಕ್ಕಾಗಿ ಬದುಕುವುದನ್ನು ಮುಂದುವರೆಸುತ್ತೇನೆ ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದರು. ತನನ್ನು ಎದುರಿಸಲಾಗದೆ ರಾಜಕೀಯ ವಿರೋಧಿಗಳು ಆಟವಾಡುತ್ತಿದ್ದಾರೆ ಎಂದು ಆರೋಪಿಸಿದ ಮೋದಿ, ಕೇಂದ್ರ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡುತ್ತಾ ಹೋದರು.

ಸ್ವಾತಂತ್ರ್ಯ ನಂತರ ದೇಶ ಕಟ್ಟುವಲ್ಲಿ ಜವಹರ್‌ಲಾಲ್ ನೆಹರು ಅವರ ಪ್ರಯತ್ನಗಳನ್ನು ಬಿಜೆಪಿ ನಿರ್ಲಕ್ಷಿಸಿದೆ ಎಂಬ ಕಾಂಗ್ರೆಸ್ ಆರೋಪಗಳಿಗೆ ಪ್ರತಿಕ್ರಿಯಿಸಿದ ಅವರು, ಒಂದು ವೇಳೆ ನೆಹರೂ ಅತ್ಯುತ್ತಮ ನಾಯಕರಾದರೆ ಅವರ ತಲೆಮಾರಿನ ಜನರು, ನೆಹರೂ ಅನ್ನು ತಮ್ಮ ಉಪನಾಮವಾಗಿ ಏಕೆ ಇಟ್ಟುಕೊಳ್ಳುವುದಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ, ಭಯ ಮತ್ತು ನಾಚಿಕೆ ಏನು? ಎಂದು ಗಾಂಧಿ ಕುಟುಂಬವನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

ಪ್ರತಿಪಕ್ಷಗಳು ದೇಶದ ಕಲ್ಯಾಣಕ್ಕಿಂತ ಕೇವಲ ರಾಜಕೀಯ ಮಹತ್ವಕಾಂಕ್ಷೆಯ ಬಗ್ಗೆ ಮಾತನಾಡುತ್ತಿವೆ. ನಾವು ದೇಶವನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯುತ್ತಿದ್ದೇವೆ. ನಮ್ಮ ನೀತಿಗಳು ರಾಷ್ಟ್ರ ಹಾಗೂ ಪ್ರಾದೇಶಿಕ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತಿವೆ. ಆದರೆ, ಕಾಂಗ್ರೆಸ್ ಪಕ್ಷ ಇದೀಗ ದೇಶವನ್ನು ಹಾದಿ ತಪ್ಪಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

ಸರಕಾರದ 600 ಕಾರ್ಯಕ್ರಮಗಳು ಗಾಂಧಿ–ನೆಹರೂ ಕುಟುಂಬದವರ ಹೆಸರುಗಳಲ್ಲಿವೆ ಎಂದು ವಾಗ್ದಾಳಿ ನಡೆಸಿದ ಮೋದಿ, ಕಾಂಗ್ರೆಸ್ ಕೋವಿಡ್–19 ಲಸಿಕೆ ಕಂಡುಹಿಡಿದ ಭಾರತೀಯ ವಿಜ್ಞಾನಿಗಳನ್ನು ಅಪಮಾನಿಸಿದೆ. ಅವರ ಆಡಳಿತ ಅವಧಿಯಲ್ಲಿ ಬುಡಕಟ್ಟು ಸಮುದಾಯ, ಸಣ್ಣ ಮತ್ತು ಅತಿ ಸಣ್ಣ ರೈತರನ್ನು ನಿರ್ಲಕ್ಷಿಸಲಾಗಿತ್ತು ಎಂದು ಆರೋಪಿಸಿದರು. ತಮ್ಮ ವಿರುದ್ಧ ಪ್ರತಿಪಕ್ಷಗಳು ಆರೋಪ ಮಾಡುವಾಗ ಕೆಲ ಜನರ ವರ್ತನೆ ಮತ್ತು ಭಾಷೆ ಸದನಕ್ಕೆ ನಿರಾಸೆಯನ್ನುಂಟು ಮಾಡಿದೆ ಎಂದು ಪ್ರಧಾನಿ ಮೋದಿ ಹೇಳಿದರು. ನಂತರ ಧ್ವನಿಮತದೊಂದಿಗೆ ರಾಷ್ಟ್ರಪತಿಗಳ ವಂದನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ಫೆ.13ಕ್ಕೆ ಮುರುಘಾ ಶರಣರ ಅಧಿಕಾರ ನಿರ್ಬಂಧಿಸಿದ ಅರ್ಜಿ ವಿಚಾರಣೆ

ಬೆಂಗಳೂರು, ಫೆ.9–ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೊ), ಅತ್ಯಾಚಾರ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಮುರುಘಾ ಶರಣರ ಅಧಿಕಾರ ಚಲಾವಣೆಗೆ ವಿಧಿಸಲಾಗಿರುವ ನಿರ್ಬಂಧ ಪ್ರಶ್ನಿಸಿದ ಅರ್ಜಿಯನ್ನು ಹೈಕೋರ್ಟ್ ಫೆ.13ರಂದು ವಿಚಾರಣೆ ನಡೆಸಲಿದೆ.

ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿ ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ಸ್‌ನ ಎರಡನೇ ಹೆಚ್ಚುವರಿ ನ್ಯಾಯಾಲಯ 2022ರ ಡಿಸೆಂಬರ್ 15ರಂದು ನೀಡಿರುವ ಆದೇಶವನ್ನು ಪ್ರಶ್ನಿಸಿ ಮುರುಘಾ ಶರಣರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ವಿಚಾರಣೆಗೆ ನಿಗದಿಯಾಗಿತ್ತು.

ವಿಚಾರಣೆ ದಿನದಂದು ಹಾಜರಾಗಿದ್ದ ಅಡ್ವೋಕೇಟ್ ಜನರಲ್, ಮಠದ ಆಡಳಿತಾಧಿಕಾರಿ ಪ್ರಶ್ನಿಸಿದ ಅರ್ಜಿ ವಿಚಾರಣೆ ಇದೇ ಹೈಕೋರ್ಟ್‌ನ ಮತ್ತೊಂದು ಪೀಠದಲ್ಲಿ ನಡೆಯುತ್ತಿರುವ ಕಾರಣ ಇದನ್ನೂ ಅದೇ ಅರ್ಜಿಯ ಜೊತೆಗೆ ಸೇರ್ಪಡೆ ಮಾಡಲು ಮನವಿ ಮಾಡಿದ್ದರು.

ಇದನ್ನು ಮಾನ್ಯ ಮಾಡಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ನ್ಯಾಯಪೀಠ, ಮತ್ತೊಂದು ರಿಟ್ ಅರ್ಜಿಯ ಜೊತೆಗೇ ಇದೂ ವಿಚಾರಣೆಗೆ ಒಳಪಡುವುದು ಸೂಕ್ತ ಎಂದು ಬೇರೊಂದು ಪೀಠಕ್ಕೆ ವರ್ಗಾಯಿಸುವಂತೆ ನಿರ್ದೇಶಿಸಿದ್ದರು. ಈ ಕಾರಣಕ್ಕಾಗಿ ಈ ಅರ್ಜಿ ಈಗ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ವಿಚಾರಣೆಗೆ ನಿಗದಿಯಾಗಿದೆ. ವರ್ಗಾವಣೆಗೊಂಡಿರುವ ಅರ್ಜಿಯನ್ನು ಶುಕ್ರವಾರದಂದು (ಫೆ.10) ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಶರಣರ ಪರ ವಕೀಲರು ಗುರುವಾರ (ಫೆ.9) ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಆಡಳಿತಾಧಿಕಾರಿ ಪ್ರಶ್ನಿಸಿದ ಮತ್ತು ಅಧಿಕಾರ ನಿರ್ಬಂಧ ಪ್ರಶ್ನಿಸಿದ ಅರ್ಜಿಗಳನ್ನು ಇದೇ 13ಕ್ಕೆ ವಿಚಾರಣೆಗೆ ನಿಗದಿಪಡಿಸುವಂತೆ ಸೂಚಿಸಿದೆ.

ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ಸಂಬಂಧ ಕ್ರಮಕ್ಕೆ ಆಯುಕ್ತರಿಗೆ ಪ್ರಾದೇಶಿಕ ಆಯುಕ್ತರ ಸೂಚನೆ

ಮೈಸೂರು, ಫೆ.9(ಎಂಕೆ)– ಮೈಸೂರು ಮಹಾನಗರ ಪಾಲಿಕೆ ಸ್ಥಾಯಿ ಸಮಿತಿ ಚುನಾವಣೆ ಮುಂದೂಡಿರುವ ಕುರಿತು ಕೂಲಂಕುಶವಾಗಿ ಪರಿಶೀಲಿಸಿ ಕೂಡಲೇ ನಿಯಮಾನುಸಾರ ಅಗತ್ಯ ಕ್ರಮಕೈಗೊಂಡು ವರದಿ ನೀಡುವಂತೆ ನಗರಪಾಲಿಕೆ ಆಯುಕ್ತರಿಗೆ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು ಸೂಚಿಸಿದ್ದಾರೆ.


ನಗರಪಾಲಿಕೆ ಸ್ಥಾಯಿ ಸಮಿತಿ ಚುನಾವಣೆ ನಡೆಸದೇ ಮೇಯರ್ ಅವರು ದುರುದ್ದೇಶದಿಂದ ಮುಂದೂಡುತ್ತಿರುವುದಾಗಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಸಲ್ಲಿಸಿದ್ದ ಮನವಿ ಕುರಿತು ಪರಿಶೀಲನೆ ನಡೆಸಿ, ವರದಿ ನೀಡುವಂತೆ ಪತ್ರದ ಮೂಲಕ ತಿಳಿಸಿದ್ದಾರೆ. ದುರುದ್ದೇಶದಿಂದ ಮುಂದೂಡುವುದಲ್ಲದೆ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಚುನಾವಣೆ ನಡೆಸದೇ ಕಾನೂನನ್ನು ಉಲ್ಲಂಘಿಸಿ ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಲಾಗಿದೆ. ಸ್ಥಾಯಿ ಸಮಿತಿಗಳಿಲ್ಲದಿರುವುದರಿಂದ ನಗರದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಲಾಗುತ್ತಿಲ್ಲ ಮತ್ತು ಹೊಸ ಯೋಜನೆಗಳಿಗೆ ಅನುಮೋದನೆ ನೀಡಲು ಸಾಧ್ಯವಾಗದೆ ನಾಗರಿಕರಿಗೆ ವಂಚಿಸಲಾಗುತ್ತಿದೆ. 2023–24ನೇ ಸಾಲಿನ ಬಜೆಟ್ ಮಂಡಿಸಬೇಕಾಗಿರುವುದರಿಂದ ಸ್ಥಾಯಿ ಸಮಿತಿಗೆ ಒಪ್ಪಿಗೆ ಪಡೆಯಲು ತೊಂದರೆಯಾಗುತ್ತಿದೆ ಎಂದು ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು.

ಇಂದಿನಿಂದ ವಿಧಾನ ಮಂಡಲ ಬಜೆಟ್ ಅಧಿವೇಶನ

ಬೆಂಗಳೂರು, ಫೆ.9– ರಾಜ್ಯದಲ್ಲಿ ಬಜೆಟ್ ಮಂಡನೆ ಇರುವುದರಿಂದ ಶುಕ್ರವಾರ (ಫೆ. 10)ದಿಂದ ಅಧಿವೇಶನ ಆರಂಭವಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಅಧಿವೇಶನದಲ್ಲಿ ಎಲ್ಲರೂ ಕಡ್ಡಾಯವಾಗಿ ಭಾಗವಹಿಸಬೇಕೆಂದು ಶಾಸಕರಿಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಗುರುವಾರ ಮನವಿ ಮಾಡಿಕೊಂಡಿದ್ದಾರೆ.

ಅಧಿವೇಶನ ಕುರಿತು ಇಂದು ಮಾಹಿತಿ ನೀಡಿರುವ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಇದು ಈ ವಿಧಾನಸಭೆಯ 15ನೆಯ ಮತ್ತು ಕೊನೆಯ ಅಧಿವೇಶನ ಆಗಿರುತ್ತದೆ. ಅಧಿವೇಶನದಲ್ಲಿ ಎಲ್ಲರೂ ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ಕೊನೆಯ ಅಧಿವೇಶನ ಎಂದು ಯಾರೂ ನಿರ್ಲಕ್ಷಿಸದೇ ಪಾಲ್ಗೊಳ್ಳಿ ಎಂದು ಮನವಿ ಮಾಡಿಕೊಂಡರು. ಫೆಬ್ರುವರಿ 10ರಂದು ಆರಂಭವಾಗುವ ಅಧಿವೇಶನ ಫೆ. 24ರವರೆಗೆ ನಡೆಯಲಿದೆ. ಇದು ಬಜೆಟ್ ಅಧಿವೇಶನವಾಗಿದ್ದು, ಫೆ. 17ರಂದು ಸಿಎಂ ಬಸವರಾಜ ಬೊಮ್ಮಾಯಿ ಅವರು ಬಜೆಟ್ ಮಂಡಿಸಲಿದ್ದಾರೆ. ಫೆಬ್ರುವರಿ 20ರಿಂದ 24ರವರೆಗೂ ಬಜೆಟ್ ಮೇಲೆ ಚರ್ಚೆ ನಡೆಯಲಿದೆ. ಅಧಿವೇಶನ ಆರಂಭವಾಗುವ ನಾಳೆ 11 ಗಂಟೆಗೆ ರಾಜ್ಯಪಾಲರು ಬೃಹತ್ ಮೆಟ್ಟಿಲುಗಳ ಮೂಲಕ ವಿಧಾನಸಭೆಗೆ ಆಗಮಿಸಲಿದ್ದು, ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆಂದು ತಿಳಿಸಿದರು.

ಮುಂದಿನ ಸಿಎಂ ಹೈಕಮಾಂಡ್ ನಿರ್ಧಾರ



ಸಿಂಧನೂರು, ಫೆ.9– ಮುಂದಿನ ಮುಖ್ಯಮಂತ್ರಿ ಯಾರಾಗುತ್ತಾರೆ ಎನ್ನುವುದನ್ನು ಮೋದಿ ಹಾಗೂ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ರಾಜ್ಯದಲ್ಲಿ ಎಲ್ಲರೂ ಒಗ್ಗಟ್ಟಾಗಿ 150 ಸ್ಥಾನ ಗೆದ್ದು ನಿಶ್ಚಿತವಾಗಿ ಸರ್ಕಾರ ರಚಿಸುತ್ತೇವೆಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೋಶಿ ಮುಂದಿನ ಸಿಎಂ ಕುರಿತು ಚರ್ಚೆ ಮಾಡಲು ಇಷ್ಟಪಡುವುದಿಲ್ಲ. ಅದನ್ನು ಪಕ್ಷ ನೋಡಿಕೊಳ್ಳುತ್ತದೆ. ಅಮಿತ್ ಶಾ, ನರೇಂದ್ರ ಮೋದಿ ಆ ಕುರಿತು ತೀರ್ಮಾನ ಕೈಗೊಳ್ಳುತ್ತಾರೆ. ಈಗಲೇ ಪ್ರತಿಕ್ರಿಯಿಸುವುದು ಸರಿಯಲ್ಲ. ಮೊದಲು ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಒಟ್ಟಾಗಿ ರಾಜ್ಯ ಪ್ರವಾಸ ಮಾಡುತ್ತೇವೆ. ಸ್ಪಷ್ಟ ಬಹುಮತ ಪಡೆಯುತ್ತೇವೆ. ಅಧಿವೇಶನದ ಬಳಿಕ ರಾಜ್ಯ ಪ್ರವಾಸ ಕೈಗೊಂಡಾಗ ಒಲವು ಹೇಗಿದೆ ಎನ್ನುವುದು ಗೊತ್ತಾಗುತ್ತದೆ. ವಿಶೇಷವಾಗಿ ಪರಿಶಿಷ್ಟ ವರ್ಗ, ಪ.ಪಂಗಡಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಕೊಟ್ಟಿರುವ ಯೋಜನೆಗಳು ನಮಗೆ ದೊಡ್ಡ ಶಕ್ತಿ. ಮತ್ತೊಮ್ಮೆ ನಾವು ಅಧಿಕಾರಕ್ಕೆ ಬರುವುದು ಸ್ಪಷ್ಟ ಎಂದರು. ಕಾಂಗ್ರೆಸ್‌ನಲ್ಲಿ ನಾವೇ ಸಿಎಂ ಎಂದು ಹೇಳಿಕೊಂಡು ಈಗಾಗಲೇ ತಿರುಕನ ಕನಸು ಕಾಣುತ್ತಿದ್ದಾರೆ. ಅವರ ಆಸೆ ಈಡೇರುವುದಿಲ್ಲ. ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಬ್ರಾಹ್ಮಣ ಸಿಎಂ ಕುರಿತು ಹೇಳಿಕೆ ನೀಡಿದ್ದು ಸರಿಯಲ್ಲ. ಅವರು ಯಾಕೋ ಇತ್ತೀಚೆಗೆ ದಾರಿ ತಪ್ಪಿದ ಹೇಳಿಕೆ ನೀಡುತ್ತಿದ್ದಾರೆ. ಇದು ಅವರಿಗೆ ಶೋಭೆ ತರುವುದಿಲ್ಲ. ಅವರ ಮೇಲೆ ಜನ ಇಟ್ಟಿರುವ ವಿಶ್ವಾಸ ಕಳೆದುಕೊಳ್ಳುತ್ತಾರೆ ಎಂದರು.

ನನ್ನನ್ನು ಸೈಡ್‌ಲೈನ್ ಮಾಡಿಲ್ಲ: ಬಿಜೆಪಿಯಲ್ಲಿ ನನ್ನನ್ನು ಸೈಡ್‌ಲೈನ್ ಮಾಡಿದ್ದಾರೆಂಬುದು ಸುಳ್ಳು. ಆ ರೀತಿ ಯಾವುದೂ ಇಲ್ಲ. ಪಕ್ಷ ನನಗೆ ಕೇಂದ್ರ ಮಟ್ಟದಲ್ಲಿ ಸ್ಥಾನಮಾನ ಕೊಟ್ಟಿದೆ. ಎಲ್ಲ ರೀತಿಯ ಜವಾಬ್ದಾರಿಗಳನ್ನು ನೀಡಿದೆ. ಹೀಗಿರುವಾಗ ಸೈಡ್‌ಲೈನ್ ಮಾತೇ ಇಲ್ಲ. ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ನನ್ನ ಮೇಲೆ ವಿಶ್ವಾಸವಿಟ್ಟಿದ್ದು, ಅವರ ನಿರೀಕ್ಷೆಯಂತೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರಲಾಗುವುದು ಎಂದು ಬಿಎಸ್‌ವೈ ಹೇಳಿದರು.

ವಿಧಾನಸಭಾ ಚುನಾವಣೆ ಸಿದ್ಧತೆ

ಮತದಾನಕ್ಕೆ ಬಳಸುವ ಶಾಯಿ ಉತ್ಪಾದನೆ ತ್ವರಿತಕ್ಕೆ ಮೈಲ್ಯಾಕ್ ಸೂಚನೆ

ಮೈಸೂರು, ಫೆ.9(ಜಿಎ)– ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಗೆ ಸಿದ್ಧತೆ ಆರಂಭಗೊಂಡಿದ್ದು, ಮತದಾನಕ್ಕೆ ಅವಶ್ಯವಾದ ಅಳಿಸಲಾಗದ ಶಾಯಿ ತಯಾರಿಕೆ ತ್ವರಿತಗೊಳಿಸುವಂತೆ ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಮೈಸೂರು ಪೇಂಟ್ ಮತ್ತು ವಾರ್ನಿಷ್ ಲಿಮಿಟೆಡ್‌ಗೆ (ಮೈಲ್ಯಾಕ್) ನಿರ್ದೇಶನ ನೀಡಿದ್ದಾರೆ.

ವಿಧಾನಸಭಾ ಚುನಾವಣೆಗೆ ಎಲ್ಲಾ ಜಿಲ್ಲಾ ಮಟ್ಟದಲ್ಲಿಯೂ ಮತದಾರರ ಪಟ್ಟಿ ಪರಿಷ್ಕರಣೆ, ತಿದ್ದುಪಡಿ ಸೇರಿದಂತೆ ಸಂಬಂಧಿಸಿದ ಬಹುತೇಕ ಚಟುವಟಿಕೆಗಳು ಅಂತ್ಯಗೊಂಡಿವೆ. ಈಗ ಮತದಾನ ವೇಳೆ ಮತದಾರ ಬೆರಳಿಗೆ ಹಾಕುವ ಶಾಯಿ ಅಣಿಗೊಳಿಸಲಾಗುತ್ತದೆ. ಅದರಂತೆ ಚುನಾವಣಾ ಆಯೋಗವು 1.30 ಲಕ್ಷ ಬಾಟಲು ಅಳಿಸಲಾಗದ ಶಾಯಿ ತಯಾರಿಕೆಗೆ ಮೈಲ್ಯಾಕ್‌ಗೆ ಸೂಚನೆ ನೀಡಿದೆ. ದೇಶಿಯವಾಗಿ ಅಲ್ಲದೆ ವಿಶ್ವದ ನಾನಾ ರಾಷ್ಟ್ರಗಳ ಚುನಾವಣೆಗಳಿಗೆ ಮೈಲ್ಯಾಕ್ ಅಳಿಸಲಾಗದ ಶಾಯಿ ತಯಾರಿಸಿ, ರಫ್ತು ಮಾಡಿಕೊಂಡು ಬಂದಿದ್ದು, ಗುಣಮಟ್ಟದ ಅಳಿಸಲಾಗದ ಶಾಹಿ ತಯಾರಿಸುವ ಏಕೈಕ ಸಂಸ್ಥೆಯಾದರಿಂದ ಬಾರೀ ಬೇಡಿಕೆ ಇದೆ. ಶಾಯಿ ಜತೆಗೆ ಮತ ಯಂತ್ರಗಳ ಪ್ಯಾಕಿಂಗ್‌ಗೆ ಬಳಸುವ ಅರಗಿಗೂ ಬೇಡಿಕೆ ಬಂದಿದ್ದು, 3.90 ಲಕ್ಷ ಅರಗು ಸ್ಟಿಕ್ ತಯಾರಿಕೆಗೂ ಚುನಾವಣಾ ಆಯೋಗದ ಅಧಿಕಾರಿಗಳು ಸೂಚಿಸಿದ್ದಾರೆ ಎಂದು ಮೈಲ್ಯಾಕ್ ಅಧ್ಯಕ್ಷ ರಘು ಆರ್. ಕೌಟಿಲ್ಯ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಕನ್ನಡಿಗ ಕುಂಬ್ಳೆ ದಾಖಲೆ ಮುರಿದ ಅಶ್ವಿನ್

ವೇಗವಾಗಿ 450 ವಿಕೆಟ್ ಪಡೆದ ಮೊದಲ ಭಾರತೀಯ, ಆಸೀಸ್ ವಿರುದ್ಧ 100 ವಿಕೆಟ್ ಮೇಲೆ ಕಣ್ಣು

ನಾಗ್ಪುರ, ಫೆ.9– ಆಸ್ಟ್ರೇಲಿಯಾ ವಿರುದ್ಧದ ಪ್ರತಿಷ್ಠಿತ ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಟೀಮ್ ಇಂಡಿಯಾ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ವಿಶೇಷ ದಾಖಲೆ ಬರೆದಿದ್ದಾರೆ. ಪಂದ್ಯದಲ್ಲಿ ಆಸ್ಟ್ರೇಲಿಯಾದ 3 ವಿಕೆಟ್‌ಗಳನ್ನು ಕಬಳಿಸಿದ ಆರ್.ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಅತೀ ವೇಗವಾಗಿ 450 ವಿಕೆಟ್ ಪಡೆದ ಮೊದಲ ಭಾರತೀಯ ಬೌಲರ್ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. ಅಲ್ಲದೇ ಕನ್ನಡಿಗ ಅನಿಲ್ ಕುಂಬ್ಳೆ ಅವರ ಹೆಸರಿನಲ್ಲಿದ್ದ ದಾಖಲೆಯನ್ನು ಅಶ್ವಿನ್ ಮುರಿದಿದ್ದಾರೆ.




ಅಶ್ವಿನ್ 89 ಟೆಸ್ಟ್ ಪಂದ್ಯಗಳಲ್ಲೇ 450 ವಿಕೆಟ್ ಪಡೆದರೇ, ಸ್ಪಿನ್ ದಂತಕತೆ ಅನಿಲ್ ಕುಂಬ್ಳೆ 93 ಟೆಸ್ಟ್ ಪಂದ್ಯಗಳಲ್ಲಿ ಈ ಸಾಧನೆ ಮಾಡಿದ್ದರು. ಈಗ ಆ ದಾಖಲೆಯನ್ನು ಅಶ್ವಿನ್ ಮುರಿದಿದ್ದಾರೆ


ಶ್ರೀಲಂಕಾ ಸ್ಪಿನ್ ದಿಗ್ಗಜ ಮುತ್ತಯ್ಯ ಮುರಳೀಧರನ್ 80 ಟೆಸ್ಟ್ ಪಂದ್ಯಗಳಲ್ಲೇ 450 ವಿಕೆಟ್ ಕಬಳಿಸಿ ಅತಿ ವೇಗವಾಗಿ ಈ ದಾಖಲೆ ಬರೆದ ಬೌಲರ್‌ಗಳ ಸಾಲಿನಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಆಸ್ಟ್ರೇಲಿಯಾ ಮಾಜಿ ವೇಗಿ ಗ್ಲೆನ್ ಮೆಗ್ರಾತ್ (100), ಸ್ಪಿನ್ ದಿಗ್ಗಜ ಶೇನ್ ವಾರ್ನ್ (101) 450 ವಿಕೆಟ್ ಕೆಡವಿದ ಟಾಪ್ ಐವರು ಬೌಲರ್‌ಗಳ ಪಟ್ಟಿಯಲ್ಲಿದ್ದಾರೆ.

ಪಂದ್ಯದ 53ನೇ ಓವರ್‌ನಲ್ಲಿ ಆಸ್ಟ್ರೇಲಿಯಾ ವಿಕೆಟ್ ಕೀಪರ್ ಅಲೆಕ್ಸ್ ಕೇರಿ ಚೆಂಡನ್ನು ಸ್ವೀಪ್ ಮಾಡುವ ಭರದಲ್ಲಿ ರವಿಚಂದ್ರನ್ ಅಶ್ವಿನ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು. ಈ ವಿಕೆಟ್ ಮೂಲಕ ಅಶ್ವಿನ್ ತಮ್ಮ ಟೆಸ್ಟ್ ಕ್ರಿಕೆಟ್ ಜೀವನದ 450ನೇ ವಿಕೆಟ್ ಸಂಪಾದಿಸಿದರು. ಪಂದ್ಯದಲ್ಲಿ ಪರಿಣಾಮಕಾರಿ ಬೌಲಿಂಗ್ ಸಂಘಟಿಸಿದ ಅಶ್ವಿನ್, ಟಾಡ್ ಮರ್ಫಿ ಹಾಗೂ ಸ್ಕಾಟ್ ಬೋಲೆಂಡ್ ಅವರ ವಿಕೆಟ್ ಕಬಳಿಸಿ ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ವಿಕೆಟ್‌ಗಳನ್ನು 452ಕ್ಕೆ ಹೆಚ್ಚಿಸಿಕೊಂಡಿದ್ದಾರೆ.

100 ವಿಕೆಟ್ ಸಾಧನೆ ಮೇಲೆ ಕಣ್ಣಿಟ್ಟಿರುವ ಅಶ್ವಿನ್: ಆಸ್ಟ್ರೇಲಿಯಾ ವಿರುದ್ಧ ಉತ್ತಮ ಬೌಲಿಂಗ್ ದಾಖಲೆಯನ್ನು ಅಶ್ವಿನ್ ಹೊಂದಿದ್ದಾರೆ. ನಾಗ್ಪುರ ಟೆಸ್ಟ್‌ಗೂ ಮುನ್ನ ಆಸೀಸ್ ವಿರುದ್ಧ 89 ವಿಕೆಟ್ ಕಬಳಿಸಿದ ದಾಖಲೆ ಬರೆದಿದ್ದ ಅಶ್ವಿನ್, ಈಗ ತಮ್ಮ ವಿಕೆಟ್ ಸಂಖ್ಯೆಯನ್ನು 92ಕ್ಕೆ ಹೆಚ್ಚಿಸಿಕೊಂಡಿದ್ದಾರೆ. ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿಯ ಉಳಿದ ಪಂದ್ಯಗಳಲ್ಲಿ 8 ವಿಕೆಟ್ ಕಬಳಿಸಿದರೆ, ಆಸ್ಟ್ರೇಲಿಯಾ ಎದುರು 100 ವಿಕೆಟ್‌ಗಳ ಸಾಧನೆ ಮಾಡಲಿದ್ದಾರೆ.



ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರು ಹಾಗೂ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಜಿ.ಡಿ. ಹರೀಶ್‌ಗೌಡರ ಹುಟ್ಟುಹಬ್ಬವನ್ನು ಹೆಬ್ಬಾಳು ಕುಂಬಾರಕೊಪ್ಪಲು ಸಹಕಾರಿ ಬಂಧುಗಳ ವತಿಯಿಂದ ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಚೇತನ್ ಕುಮಾರ್ ವಿಷಕಂಠೇಗೌಡ, ಮೈಸೂರು ನಗರಪಾಲಿಕೆ ಸದಸ್ಯ ಪೈ. ಶ್ರೀನಿವಾಸ್, ಅಭ್ಯುದಯ ಸಂಘದ ಉಪಾಧ್ಯಕ್ಷ ವೈ. ಬೈರಪ್ಪ, ಮುಖಂಡರಾದ ಶಂಕರಣ್ಣ ಪಟೇಲ್, ಲೋಕೇಶ್, ರವಿ ಶಾಮಿಯಾನ, ಅನಿಲ್, ಮದನ್, ರಘು, ಪ್ರಸನ್ನ, ರಾಘವೇಂದ್ರಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ)ಅಧ್ಯಕ್ಷರಾದ ಗಣೇಶ್ ಅವರಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ರೇಸಿಂಗ್ ಪ್ರತಿನಿಧಿ ಪಿ.ಜಿ.ಚಂದ್ರಶೇಖರ್ ಅವರು ಟಿಪ್‌ಸ್ಟರ್ ಟ್ಯಾಲಿ ಟ್ರೋಫಿಯನ್ನು ಸ್ವೀಕರಿಸಿದರು. ಈ ವೇಳೆ ಎಂಆರ್‌ಸಿ ಕಮಿಟಿ ಸದಸ್ಯರೂ, ಸ್ಟೀವರ್ಡ್‌ಗಳು ಉಪಸ್ಥಿತರಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರಕಟ

ಮೈಸೂರಿನ 10 ಮಂದಿ ಪತ್ರಕರ್ತರಿಗೆ ಪ್ರಶಸ್ತಿ



ಮೋಹನ್ | ಶಂಕರ್ ಬೆನ್ನೂರು | ಕೆ.ಪಿ.ನಾಗರಾಜ್ | ಶಿವಪ್ರಸಾದ್ | ಎಂ.ಗೋವಿಂದೇಗೌಡ | ಮುಳ್ಳೂರು ರಾಜು | ಅ.ಮ.ಸುರೇಶ್ | ರಮೇಶ್ ನಾಯಕ | ಶಿವಕುಮಾರ್ ರಾವ್ | ನಾಗೇಶ್ ಪಾಣತ್ತಲೆ

ಮೈಸೂರು, ಫೆ9(ಆರ್‌ಕೆಬಿ)– ಮೈಸೂರಿನ ಹತ್ತು ಮಂದಿ ಪತ್ರಕರ್ತರು ಕರ್ನಾಟಕ ಮಾಧ್ಯಮ ಅಕಾಡೆಮಿ ಕೊಡ ಮಾಡುವ 'ಮಾಧ್ಯಮ ವಾರ್ಷಿಕ ಪ್ರಶಸ್ತಿ' ಹಾಗೂ 'ದತ್ತಿ ಪ್ರಶಸ್ತಿ'ಗಳಿಗೆ ಆಯ್ಕೆಯಾಗಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯಲ್ಲಿ ಮಾಧ್ಯಮ ಕ್ಷೇತ್ರದಲ್ಲಿನ ಸೇವಾ ಸಾಧನೆ ಪರಿಗಣಿಸಿ, ನಾಲ್ಕು ವರ್ಷಗಳ (2019, 2020, 2021 ಮತ್ತು 2022) ಅವಧಿಗೆ ನಾಡಿನ 124 ಪತ್ರಕರ್ತರನ್ನು ವಾರ್ಷಿಕ ಪ್ರಶಸ್ತಿಗೆ ಹಾಗೂ 21 ಮಂದಿಯನ್ನು ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಆಂದೋಲನ ಸಂಸ್ಥೆಯವರು ಸ್ಥಾಪನೆ ಮಾಡಿರುವ ಅತ್ಯುತ್ತಮ ಜಿಲ್ಲಾ ಪತ್ರಿಕೆಗೆ ನೀಡುವ 'ಆಂದೋಲನ ಪ್ರಶಸ್ತಿ', ಅಭಿಮಾನಿ ಸಂಸ್ಥೆಯವರು ಸ್ಥಾಪಿಸಿರುವ 'ಅಭಿಮಾನಿ' ಮತ್ತು 'ಅರಗಿಣಿ' ಪ್ರಶಸ್ತಿಗಳು, ಮೈಸೂರು ದಿಗಂತ ಪತ್ರಿಕೆ ಸ್ಥಾಪಿಸಿರುವ 'ಮೈಸೂರು ದಿಗಂತ' ಪ್ರಶಸ್ತಿ ಹಾಗೂ ಪತ್ರಕರ್ತ ಕೆ.ಶಿವಕುಮಾರ್ ಸ್ಥಾಪಿಸಿರುವ ಡಾ. ಬಿ.ಆರ್.ಅಂಬೇಡ್ಕರ್ 'ಮೂಕ ನಾಯಕ' ಪ್ರಶಸ್ತಿಗಳು ದತ್ತಿ ಪ್ರಶಸ್ತಿಗಳಾಗಿದ್ದು, ಪ್ರಶಸ್ತಿಗಳ ಮೊತ್ತ ತಲಾ 10 ಸಾವಿರ ರೂ. ನಗದು, ಪ್ರಶಸ್ತಿ ಫಲಕ ಒಳಗೊಂಡಿರುತ್ತದೆ.

ಪ್ರತೀ ವರ್ಷದಲ್ಲೂ ಓರ್ವರನ್ನು ವಿಶೇಷ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿದ್ದು, ಈ ವಿಶೇಷ ಪ್ರಶಸ್ತಿಯು 50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿರುತ್ತದೆ. ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾದವರಿಗೆ 25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು. ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಇತರ ಸಚಿವರು ಮತ್ತು ಗಣ್ಯರನ್ನು ಆಹ್ವಾನಿಸಲಾಗುತ್ತದೆ ಎಂದು ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ತಿಳಿಸಿದ್ದಾರೆ.

ಈ ಪೈಕಿ 'ಮೈಸೂರು ಮಿತ್ರ' ಸಂಪಾದಕ ಎಂ.ಗೋವಿಂದೇಗೌಡ 2021ನೇ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಉಳಿದಂತೆ ಮೈಸೂರು ಜಿಲ್ಲೆಯಿಂದ ಪ್ರಶಸ್ತಿ ಪಡೆದವರಿವರು.

ವಾರ್ಷಿಕ ಪ್ರಶಸ್ತಿಗೆ ಭಾಜನರಾದವರು:

2020ನೇ ಸಾಲಿನ ವಾರ್ಷಿಕ ಪ್ರಶಸ್ತಿ: ಮುಳ್ಳೂರು ರಾಜು (ವಿಜಯವಾಣಿ), ನಾಗೇಶ್ ಪಾಣತ್ತಲೆ (ವಿಜಯ ಕರ್ನಾಟಕ).

2021ನೇ ಸಾಲಿನ ಪ್ರಶಸ್ತಿ: ಅ.ಮ. ಸುರೇಶ್ (ಉದಯವಾಣಿ), ನಂಜನಗೂಡು ಮೋಹನ್ (ವಿಶ್ವವಾಣಿ), ಮುಳ್ಳೂರು ಶಿವಪ್ರಸಾದ್ (ಆಂದೋಲನ), ಕೆಪಿನಾಗರಾಜ್ (ಪಬ್ಲಿಕ್ ಟಿವಿ), ಶಂಕರ ಬೆನ್ನೂರು (ದ ಹಿಂದೂ).

2022ನೇ ಸಾಲಿನ ಪ್ರಶಸ್ತಿ: ಕೆ.ಬಿ.ರಮೇಶ್‌ನಾಯಕ (ಆಂದೋಲನ)

ಅತ್ಯುತ್ತಮ ಮಾನವೀಯ ಸಮಸ್ಯೆ ಲೇಖನಕ್ಕೆ ನೀಡುವ 2022ನೇ ಸಾಲಿನ ಮೈಸೂರು ದಿಗಂತ ಪ್ರಶಸ್ತಿ: ವಿ.ಆರ್.ಶಿವಕುಮಾರ್ ಹುಣಸೂರು (ವಿಜಯವಾಣಿ).

ಮೈಸೂರು ವಿಭಾಗದ ವಿವಿಧ ಜಿಲ್ಲೆಗಳ ಪ್ರಶಸ್ತಿ ಪುರಸ್ಕೃತರ ವಿವರ

2019ನೇ ಸಾಲಿನ ಪ್ರಶಸ್ತಿ: ಚಾಮರಾಜನಗರ ಜಿಲ್ಲೆಯ ಆರ್.ಮನೋಜ್ (ಕಸ್ತೂರಿ ಟಿವಿ), ಹಾಸನ ಜಿಲ್ಲೆಯ ಸುದರ್ಶನ್ ಚನ್ನಂಗಿಹಳ್ಳಿ (ವಿಜಯ ಕರ್ನಾಟಕ), ಹೆಚ್.ವಿ.ಕಿರಣ್ (ಟಿವಿ 9), ಮಂಡ್ಯದ ಕೆಂಚೇಗೌಡ (ವಿಜಯ ಕರ್ನಾಟಕ), ಕೊಡಗಿನ ಅನಂತ ಶಯನ (ಹಿರಿಯ ಪತ್ರಕರ್ತ).

2020ನೇ ಸಾಲಿನ ಪ್ರಶಸ್ತಿ: ಮಂಡ್ಯದ ಧರಣೇಶ್ ಬೂಕನಕೆರೆ (ದಿಗ್ವಿಜಯ ನ್ಯೂಸ್), ಡಿ.ಎಲ್.ಲಿಂಗರಾಜು (ಹಿರಿಯ ಪತ್ರಕರ್ತ), ಕೊಡಗಿನ ನಾಗೇಶ್ ಪಾಣತ್ತಲೆ (ವಿಜಯ ಕರ್ನಾಟಕ), ಮಹೇಶ್ ನಾಚಯ್ಯ (ಹಿರಿಯ ಪತ್ರಕರ್ತ), ಹಾಸನದ ಬಿ.ಆರ್.ಉದಯ ಕುಮಾರ್ (ಇಂಡಿಯನ್ ಎಕ್ಸ್‌ಪ್ರೆಸ್), ಜಿ.ಪ್ರಕಾಶ್ (ವಿಜಯ ಕರ್ನಾಟಕ). 2020ನೇ ಸಾಲಿನ ಸಾಮಾಜಿಕ ಸಮಸ್ಯೆ ಲೇಖನಕ್ಕೆ ನೀಡುವ ಅಭಿಮಾನಿ ಪ್ರಶಸ್ತಿ ಹಾಸನದ ಜೋಸೆಫ್ ಡಿಸೋಜ (ಜ್ಞಾನದೀಪ).

2022ನೇ ಸಾಲಿನ ಪ್ರಶಸ್ತಿ: ಚಾಮರಾಜನಗರದ ಕೆ.ಬಿ.ರಮೇಶ್‌ನಾಯಕ್ (ಆಂದೋಲನ), ಹಾಸನದ ರವಿ ನಾಕಲಗೂಡು (ಹಲೋ ಹಾಸನ), ಮಂಡ್ಯದ ಸೋಮಶೇಖರ ಕೆರಗೋಡು (ಕೆಮ್ಮುಗಿಲು). ಅಲ್ಲದೆ 2020ನೇ ಸಾಲಿನ ಡಾ.ಬಿ.ಆರ್.ಅಂಬೇಡ್ಕರ್ 'ಮೂಕನಾಯಕ ಪ್ರಶಸ್ತಿಗೆ ತಳಸಮುದಾಯದ ಬಗೆಗಿನ ಬರಹ ಅಂಕಣಕಾರರಾದ ಪ್ರೊಆರ್.ಇಂದಿರಾ (ಪ್ರಾಧ್ಯಾಪಕರು, ಮೈಸೂರು ವಿವಿ). ಹಾಗೂ 2021ನೇ ಸಾಲಿಗೆ ಚಾಮರಾಜನಗರದ ದೀನಬಂಧು ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥ ಪ್ರೊ.ಜಿ.ಎಸ್.ಜಯದೇವ್, 2022ನೇ ಸಾಲಿಗೆ ಪ್ರೊ.ಮುಜಾಫರ್ ಅಸ್ಸಾದಿ (ಪ್ರಾಧ್ಯಾಪಕ, ಮೈಸೂರು ವಿವಿ), ಆಯ್ಕೆಯಾಗಿದ್ದಾರೆ.


2019ನೇ ಸಾಲಿನ ವಿಶೇಷ ಪ್ರಶಸ್ತಿಗೆ ಡೆಕ್ಕನ್ ಹೆರಾಲ್ಡ್‌ನ ತಿಲಕ್ ಕುಮಾರ್, 2020ನೇ ಸಾಲಿನ ವಿಶೇಷ ಪ್ರಶಸ್ತಿಗೆ ವಿಜಯವಾಣಿ ಮುಖ್ಯಸ್ಥ ವಿಜಯ ಸಂಕೇಶ್ವರ್, 2021ನೇ ಸಾಲಿನ ವಿಶೇಷ ಪ್ರಶಸ್ತಿಗೆ ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್, 2022ನೇ ಸಾಲಿನ ವಿಶೇಷ ಪ್ರಶಸ್ತಿಗೆ ಹಿರಿಯ ಆರ್ಥಿಕ ತಜ್ಞೆ ಶ್ರೀಮತಿ ಸುಶೀಲ ಸುಬ್ರಹ್ಮಣ್ಯಂ ಆಯ್ಕೆಯಾಗಿದ್ದಾರೆ.

ನಾಳೆ ಎಸ್‌ಜೆಸಿಇ ವಜ್ರಮಹೋತ್ಸವ ಉದ್ಘಾಟನೆ

ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರಿಂದ ಚಾಲನೆ



ಮೈಸೂರು,ಫೆ.9(ಪಿಎಂ)– ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯದ (ಜೆಎಸ್‌ಎಸ್–ಎಸ್‌ಟಿಯು) ಘಟಕ ಕಾಲೇಜು ಆಗಿರುವ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ (ಎಸ್‌ಜೆಸಿಇ) ವಜ್ರಮಹೋತ್ಸವವನ್ನು ಫೆ.11ರಂದು ಜಮ್ಮು–ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಉದ್ಘಾಟಿಸಲಿದ್ದಾರೆ ಎಂದು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎ.ಎಸ್.ಸಂತೋಷ್ ಕುಮಾರ್ ತಿಳಿಸಿದರು.



ಮನೋಜ್ ಸಿನ್ಹಾ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾಲೇಜಿನ ಆವರಣದಲ್ಲಿ 'ವಜ್ರ ಮಹೋತ್ಸವ'ದ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಇದೇ ವೇಳೆ ಬಹುಮಾಧ್ಯಮ ಸಂಪನ್ಮೂಲ ಕೇಂದ್ರದ ಉದ್ಘಾಟನೆಯನ್ನೂ ಮನೋಜ್ ಸಿನ್ಹಾ ನೆರವೇರಿಸಲಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರ ಪ್ರೊ.ಎಂ.ಹೆಚ್.ಧನಂಜಯ, ನಿರ್ದೇಶಕ ಡಾ.ಬಿ.ಸುರೇಶ್ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

2022ರ ಮೇಯಿಂದಲೇ ವಜ್ರಮಹೋತ್ಸವ ಪೂರ್ವ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಅಲ್ಲದೆ, ಮುಂದಿನ ಜೂನ್ ವರೆಗೂ ಇನ್ನು ಹತ್ತು ಹಲವು ಕಾರ್ಯಕ್ರಮಗಳನ್ನು ವಜ್ರಮಹೋತ್ಸವ ಪ್ರಯುಕ್ತ ಆಯೋಜಿಸಲಾಗುವುದು. ಉದಯೋನ್ಮುಖ ತಂತ್ರಜ್ಞಾನಗಳ ಕುರಿತು ಅಂತಾರಾಷ್ಟ್ರೀಯ, ರಾಷ್ಟ್ರೀಯ ಸಮ್ಮೇಳನ, ವಿಚಾರ ಸಂಕಿರಣ, ಅಂತರ ವಿವಿ ಕ್ರೀಡಾಕೂಟ, ವಿದ್ಯಾರ್ಥಿಗಳ ವಿವಿಧ ಯೋಜನೆಗಳ ವಸ್ತು ಪ್ರದರ್ಶನ ಹಾಗೂ ಕಾಲೇಜಿನ ವಿವಿಧ ವಿಭಾಗಗಳ ಸೌಲಭ್ಯ ಮತ್ತು ಸಾಧನೆಗಳ ವಸ್ತು ಪ್ರದರ್ಶನ ಆಯೋಜಿಸಲಾಗುವುದು ಎಂದರು.

ತಾಂತ್ರಿಕ ಶಿಕ್ಷಣದಲ್ಲಿ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಿ, ದೇಶದ ಅಭಿವೃದ್ಧಿಯನ್ನು ಸಾಧಿಸುವ ಗುರಿಯೊಂದಿಗೆ ಸುತ್ತೂರು ಮಠದ 23ನೇ ಪೀಠಾಧಿಪತಿಗಳಾದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಕನಸಿನ ಕೂಸಾಗಿ 1963ರಲ್ಲಿ ಎಸ್‌ಜೆಸಿಇ ಕಾಲೇಜು ಸ್ಥಾಪನೆಗೊಂಡಿತು. ಪ್ರಸ್ತುತ ನಮ್ಮ ಕಾಲೇಜು ದೇಶ ಮಾತ್ರವಲ್ಲದೆ, ಜಾಗತಿಕ ಮಟ್ಟದಲ್ಲಿ ವಿಜ್ಞಾನ–ತಂತ್ರಜ್ಞಾನ ಶಿಕ್ಷಣ ಒದಗಿಸುವ ಅತ್ಯುನ್ನತ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಿದರು.

ವಿಜ್ಞಾನ–ತಂತ್ರಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೌಲಿಕ ಕಾರ್ಯಕ್ರಮ 'ಟೆಕ್ವಿಪ್'(ಟಿಇಕ್ಯೂಐಪಿ)ನಿಂದ' ಗುರುತಿಸಲ್ಪಟ್ಟಿದೆ. ರಾಷ್ಟ್ರೀಯ ಶಿಕ್ಷಣ ನೀತಿ–2020ರಡಿ ಹಲವು ಶೈಕ್ಷಣಿಕ ಮತ್ತು ಪಠ್ಯ ಅಳವಡಿಕೆಯ ಯೋಜನೆಗಳನ್ನು ಕಾಲೇಜಿನಿಂದ ಕೈಗೆತ್ತಿಕೊಳ್ಳಲಾಗಿದೆ ಎಂದು ವಿವರಿಸಿದರು. ಜೆಎಸ್‌ಎಸ್–ಎಸ್‌ಟಿಯು ಪ್ರಭಾರ ಕುಲಸಚಿವ ಪ್ರೊ.ಬಿ.ಎಸ್.ಹರೀಶ್, ಸಹಾಯಕ ಕುಲಸಚಿವ ಪ್ರೊ.ಮಹೇಶನ್, ಎಸ್‌ಜೆಸಿಇ ಪ್ರಾಂಶುಪಾಲ ಪ್ರೊ.ಎಸ್.ಬಿ.ಕಿವಡೆ ಗೋಷ್ಠಿಯಲ್ಲಿದ್ದರು.

ಅರಮನೆ ಆವರಣದ ದೇವಸ್ಥಾನಗಳಿಗೆ ಪ್ರವೇಶಾವಕಾಶ

ಪ್ರವೇಶದ್ವಾರ, ವಾಹನ ನಿಲ್ದಾಣ ಸಂಬಂಧ ಅರಮನೆ ಮಂಡಳಿಯಿಂದ ಮಾರ್ಗಸೂಚಿ

ಮೈಸೂರು, ಫೆ.9(ಎಂಕೆ)– ಮೈಸೂರು ಅರಮನೆ ಆವರಣದಲ್ಲಿರುವ ದೇವಸ್ಥಾನಗಳಿಗೆ ಆಗಮಿಸುವ ಭಕ್ತರಿಗೆ ಪ್ರವೇಶಾವಕಾಶ ಕಲ್ಪಿಸಿರುವ ಮೈಸೂರು ಅರಮನೆ ಮಂಡಳಿ, ವಾಹನ ನಿಲ್ದಾಣ ಹಾಗೂ ಪ್ರವೇಶ ದ್ವಾರ ಕುರಿತು ಅಗತ್ಯ ಮಾರ್ಗ ಸೂಚಿಗಳನ್ನು ಪ್ರಕಟಿಸಿದೆ.



ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನ, ಶ್ರೀ ಖಿಲ್ಲೆ ವೆಂಕಟರಮಣಸ್ವಾಮಿ ದೇವಸ್ಥಾನ ಹಾಗೂ ಶ್ರೀ ಲಕ್ಷ್ಮಿ ರಮಣ ಸ್ವಾಮಿ ದೇವಸ್ಥಾನಕ್ಕೆ ಭಕ್ತರು ಕರಿಕಲ್ಲು ತೊಟ್ಟಿ ದ್ವಾರದ ಮೂಲಕ ಆಗಮಿಸಬೇಕಾಗಿದ್ದು, ಕರಿಕಲ್ಲು ತೊಟ್ಟಿ ದ್ವಾರದ ಎಡಭಾಗದಲ್ಲಿರುವ ಸ್ಥಳದಲ್ಲಿ ವಾಹನಗಳ ನಿಲ್ದಾಣಕ್ಕೆ ಅವಕಾಶ ನೀಡಲಾಗಿದೆ. ಹಾಗೆಯೇ ಶ್ರೀ ಶ್ವೇತವರಾಹಸ್ವಾಮಿ ದೇವಸ್ಥಾನಕ್ಕೆ ವರಾಹ ದ್ವಾರ ಮೂಲಕ ಅಲ್ಲಿಯೇ ವಾಹಗಳನ್ನು ನಿಲ್ಲಿಸಿ ಪ್ರವೇಶ ಪಡೆಯಬಹುದಾಗಿದೆ.

ಶ್ರೀ ಗಾಯತ್ರಿದೇವಿ ದೇವಸ್ಥಾನ, ಶ್ರೀ ತ್ರಿನಯನೇಶ್ವರಸ್ವಾಮಿ ದೇವಸ್ಥಾನ, ಶ್ರೀ ಕೋಡಿ ಸೋಮೇಶ್ವರಸ್ವಾಮಿ ದೇವಸ್ಥಾನ ಹಾಗೂ ಶ್ರೀ ಕೋಡಿ ಕಾಲಭೈರವೇಶ್ವರ ದೇವಸ್ಥಾನಕ್ಕೆ ಜಯ ಮಾರ್ತಾಂಡ ದ್ವಾರದ ಮೂಲಕ ಪ್ರವೇಶ ಪಡೆಯಲು ಅವಕಾಶ ನೀಡಿದ್ದು, ದೊಡ್ಡಕೆರೆ ಮೈದಾನದಲ್ಲಿ ವಾಹನಗಳನ್ನು ನಿಲ್ಲಿಸಬಹುದಾಗಿದೆ. ಹಾಗೆಯೇ ಶ್ರೀಭುವನೇಶ್ವರಿ ದೇವಸ್ಥಾನಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರವಿರುವ ಸ್ಥಳದಲ್ಲಿ ವಾಹನಗಳನ್ನು ನಿಲ್ಲಿಸಿ ಜಯರಾಮ–ಬಲರಾಮ ದ್ವಾರದಿಂದ ಪ್ರವೇಶಿಸಬಹುದಾಗಿದೆ. ಹಿರಿಯ ನಾಗರಿಕರು, ವಿಶೇಷಚೇತನರು ಹಾಗೂ ಅನಾರೋಗ್ಯಪೀಡಿತ ವ್ಯಕ್ತಿಗಳು ಶ್ರೀ ಗಾಯತ್ರಿದೇವಿ ದೇವಸ್ಥಾನ, ಶ್ರೀ ತ್ರಿನಯನೇಶ್ವರ ಸ್ವಾಮಿ ದೇವಸ್ಥಾನ, ಶ್ರೀ ಕೋಡಿ ಸೋಮೇಶ್ವರಸ್ವಾಮಿ ದೇವಸ್ಥಾನ, ಶ್ರೀ ಕೋಡಿ ಕಾಲಭೈರವೇಶ್ವರ ಹಾಗೂ ಭುವನೇಶ್ವರಿ ದೇವಸ್ಥಾನಕ್ಕೆ ಕರಿಕಲ್ಲು ತೊಟ್ಟಿ ದ್ವಾರದಲ್ಲಿ ಪ್ರವೇಶಿಸಿ ಲಕ್ಷ್ಮಿ ರಮಣಸ್ವಾಮಿ ದೇವಸ್ಥಾನದ ಎಡಭಾಗದಲ್ಲಿರುವ ಮಾರ್ಗದ ಮೂಲಕ ಪ್ರವೇಶಿಸಬಹುದಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಟರ್ಕಿ, ಸಿರಿಯಾ ಭೂಕಂಪದಲ್ಲಿ ಮೃತರ ಸಂಖ್ಯೆ 19,300ಕ್ಕೂ ಹೆಚ್ಚು ಏರಿಕೆ!

ಇಸ್ತಾನ್‌ಬುಲ್, ಫೆ9– ಟರ್ಕಿ ಮತ್ತು ಸಿರಿಯಾದಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ ಹಾನಿಗೊಳಗಾದ ಪ್ರದೇಶದಲ್ಲಿ ಕುಸಿದ ಮನೆಗಳ ಅವಶೇಷಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಮೃತದೇಹಗಳನ್ನು ಹೊರತೆಗೆಯಲಾಗಿದ್ದು, ಸಾವಿನ ಸಂಖ್ಯೆ 19,300ಕ್ಕೆ ಏರಿದೆ.

ಟರ್ಕಿ ಮತ್ತು ಸಿರಿಯಾದಲ್ಲಿ ಭೂಕಂಪಗಳು ಸಂಭವಿಸಿದ ಮೂರು ದಿನಗಳ ನಂತರ ಲಕ್ಷಾಂತರ ಜನರು ನಿರಾಶ್ರಿತರಾಗಿ ಶಿಬಿರಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಇನ್ನು ಕೊರೆಯುವ ಚಳಿಯಲ್ಲಿ ಆಹಾರ ಮತ್ತು ನೀರಿಗಾಗಿ ಹಾಹಾಕಾರ ಶುರುವಾಗಿದೆ. ಇನ್ನು ಕಟ್ಟಡದ ಅವಶೇಷಗಳ ಅಡಿಯಿಂದ ನೂರಾರು ಮಂದಿ ಬದುಕಿ ಬರುತ್ತಿರುವುದು ನಿಜಕ್ಕೂ ವಿಸ್ಮಯ ಮೂಡಿಸಿದೆ.

ಅಂತಕ್ಯಾ ನಗರದಲ್ಲಿ ರಾತ್ರಿಯಿಡೀ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ತುರ್ತು ರಕ್ಷಣಾ ಸಿಬ್ಬಂದಿ ಹಜಾಲ್ ಗುನರ್ ಎಂಬ ಹುಡುಗಿಯನ್ನು ಕಟ್ಟಡದ ಅವಶೇಷಗಳಿಂದ ರಕ್ಷಿಸಿದ್ದಾರೆ.

ಟರ್ಕಿ ಮತ್ತು ಸಿರಿಯಾದಲ್ಲಿ ಸಾವಿನ ಸಂಖ್ಯೆ 19,300 ದಾಟಿದ್ದು 80,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. 110,000ಕ್ಕೂ ಹೆಚ್ಚು ರಕ್ಷಣಾ ಕಾರ್ಯಕರ್ತರು ಈಗ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಟರ್ಕಿಯ ವಿಪತ್ತು ನಿರ್ವಹಣಾ ಸಂಸ್ಥೆ ತಿಳಿಸಿದೆ.

ನಾಳೆ 'ವಂದನೆ ಅಭಿನಂದನೆ' ಶೀರ್ಷಿಕೆಯಡಿ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದಿಸುವ ಬೃಹತ್ ಸಮಾರಂಭ

ಮೈಸೂರು,ಫೆ.9(ಪಿಎಂ)– ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಹೆಚ್.ವಿ.ರಾಜೀವ ಸ್ನೇಹಬಳಗ, ಹೊಯ್ಸಳ ಕರ್ನಾಟಕ ಸಂಘ ಮತ್ತು ಮೈಸೂರಿನ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಫೆ.11ರಂದು 'ವಂದನೆ ಅಭಿನಂದನೆ' ಶೀರ್ಷಿಕೆಯಡಿ ಮೈಸೂರಿನ ಕೀರ್ತಿಯನ್ನು ರಾಷ್ಟ್ರ ಮಟ್ಟಕ್ಕೇರಿಸಿದ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಮಾರಂಭದ ಸಂಚಾಲಕ ಮತ್ತು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದರು.





ಡಾ.ಎಸ್.ಎಲ್. ಭೈರಪ್ಪ | ಡಾ.ಖಾದರ್ ವಲ್ಲಿ ಡುದೇಕುಲಾ | ಡಾ.ಎಸ್. ಸುಬ್ಬರಾಮನ್ | ವಿದುಷಿ ಜಯಲಕ್ಷ್ಮೀ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮೈಸೂರಿನ ಕಲಾಮಂದಿರದಲ್ಲಿ ಸಂಜೆ 5ಕ್ಕೆ ಸಮಾರಂಭ ನಡೆಯಲಿದೆ. ಪದ್ಮ ಭೂಷಣ ಪುರಸ್ಕೃತರಾದ ಖ್ಯಾತ ಸಾಹಿತಿ ಡಾ.ಎಸ್.ಎಲ್.ಭೈರಪ್ಪ, ಪದ್ಮಶ್ರೀ ಪುರಸ್ಕೃತರಾದ ಸಿರಿಧಾನ್ಯ ಆಹಾರ ಪಿತಾಮಹ ಡಾ.ಖಾದರ್ ವಲ್ಲಿ ಡುದೇಕುಲಾ, ಪದ್ಮಶ್ರೀ ಪುರಸ್ಕೃತರಾದ ಖ್ಯಾತ ಪುರಾತತ್ವ ರಸಾಯನಶಾಸ್ತ್ರಜ್ಞ ಡಾ.ಎಸ್.ಸುಬ್ಬರಾಮನ್ ಮತ್ತು 2020ರ ಪದ್ಮಶ್ರೀ ಪುರಸ್ಕೃತರಾದ ಸುಧರ್ಮಾ ಸಂಸ್ಕೃತ ಪತ್ರಿಕೆ ಸಂಪಾದಕಿ ವಿದುಷಿ ಜಯಲಕ್ಷ್ಮೀ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಗುವುದು ಎಂದರು.

ಈ ಎಲ್ಲಾ ಮಹನೀಯರು ನೇಪಥ್ಯದಲ್ಲಿ ಇದ್ದುಕೊಂಡೇ ತಮ್ಮ ಕ್ಷೇತ್ರಗಳಲ್ಲಿ ಅದಮ್ಯ ಸಾಧನೆ ಮಾಡಿದ ದಿಗ್ಗಜರು. ಅವರನ್ನು ಅಭಿನಂದಿಸುವುದು ನಮ್ಮನ್ನು ನಾವು ಅಭಿನಂದಿಸಿಕೊಂಡಂತೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಮಾರಂಭ ಉದ್ಘಾಟಿಸಲಿದ್ದಾರೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ ಮುಖ್ಯ ಭಾಷಣ ಮಾಡಲಿದ್ದಾರೆ. ಇತಿಹಾಸ ಸಂಶೋಧಕ ಡಾ.ಹೆಚ್.ವಿ.ನಾಗರಾಜರಾವ್, ಇತಿಹಾಸ ತಜ್ಞ ಡಾ.ರೋಹಿತ್ ಈಶ್ವರ್, ನೈಸರ್ಗಿಕ ಕೃಷಿಕ ಹೊನ್ನೂರು ಪ್ರಕಾಶ್ ಅಭಿನಂದಿತರ ಕುರಿತು ಮಾತಾಡಲಿದ್ದಾರೆ ಎಂದು ತಿಳಿಸಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ವಲಯ ಪ್ರಮುಖ್ ಡಾ.ವಿ. ರಂಗನಾಥ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಾಮಾನ್ಯರಾಗಿ ಮೇರು ಸಾಧನೆ ಮಾಡುವ ನೈಜ ಸಾಧಕರನ್ನು ಗುರುತಿಸಿ ಪದ್ಮ ಪ್ರಶಸ್ತಿ ನೀಡುವ ಉತ್ತಮ ವಾತಾವರಣ ಸೃಷ್ಟಿಯಾಗಿದೆ. ಮೈಸೂರು ಜಿಲ್ಲೆಯಲ್ಲಿ ಇಂತಹ ಮೇರು ಪ್ರಶಸ್ತಿ ಪಡೆದವರನ್ನು ಗೌರವಿಸುವ ಪರಿಪಾಠ ರೂಢಿಸಿಕೊಳ್ಳುವುದು ಒಳ್ಳೆಯ ಬೆಳವಣಿಗೆಯಾಗಲಿದೆ ಎಂದು ಹೇಳಿದರು. ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಪಿ.ವಿ.ಭಾರದ್ವಜ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಶಾರದಾ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿ ಮಂಜುನಾಥ್ ಗೋಷ್ಠಿಯಲ್ಲಿದ್ದರು.

ಮಕ್ಕಳು ತಪ್ಪು ಮಾಡಿದರೆ ಗುದ್ದುವ ಬದಲು ತಿದ್ದಿ ಬುದ್ಧಿ ಹೇಳಿ

ಬಾಲಮಂದಿರದ ಸಿಬ್ಬಂದಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ಮಾಹಿತಿ

ಮೈಸೂರು, ಫೆ.9(ಎಸ್‌ಬಿಡಿ)– ಎಲ್ಲಾ ಸ್ತರದ ಮಕ್ಕಳಿಗೆ ಅಗತ್ಯ ಸೌಲಭ್ಯ, ಸುರಕ್ಷತೆ ಕಲ್ಪಿಸುವುದರ ಜೊತೆಗೆ ಸಂಸ್ಕಾರ ಬೆಳೆಸುವ ಮೂಲಕ ಅವರನ್ನು ಮುಖ್ಯವಾಹಿನಿಗೆ ಕರೆತರುವ ನಿಟ್ಟಿನಲ್ಲಿ 24 ಇಲಾಖೆಗಳ ಸಮನ್ವಯ ಕಾರ್ಯಾಚರಣೆಗೆ ಮುಂದಾಗಿರುವುದಾಗಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ತಿಳಿಸಿದ್ದಾರೆ.

ಮೈಸೂರಿನ ವಾರ್ತಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳ ಸುರಕ್ಷತೆ ಹಕ್ಕುಗಳ ರಕ್ಷಣೆ ಬಗ್ಗೆ ಕಳೆದ 3 ತಿಂಗಳಲ್ಲಿ 31 ಜಿಲ್ಲೆಗಳಲ್ಲೂ ಪ್ರಗತಿ ಪರಿಶೀಲನೆ ನಡೆಸಿದ್ದು, ಹಲವು ಶಿಫಾರಸ್ಸು ಹಾಗೂ ನಿರ್ದೇಶನ ನೀಡಲಾಗಿದೆ. ಪರಿಸರ, ನೀರಿನಂತೆ ಮಕ್ಕಳು ದೇಶದ ಸಂಪತ್ತು ಇವರ ವಿಚಾರದಲ್ಲಿ ಯಾವುದೇ ಭೇದ ಭಾವವಿಲ್ಲದೆ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ತಮ್ಮ ಇಲಾಖೆ ವ್ಯಾಪ್ತಿಗೆ ಬರುವ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ಸಮನ್ವಯದಿಂದ ಶಿಫಾರಸ್ಸುಗಳ ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳ ಮೂಲಕ ಕೋರಲಾಗಿದೆ ಎಂದರು.

ಸಂಸ್ಕಾರ ಬೆಳೆಸಬೇಕು: ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ, ಕ್ರೀಡಾ ಇಲಾಖೆಯಡಿಯ ಹಾಸ್ಟೆಲ್‌ಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಬಾಲಕರು ಹಾಗೂ ಬಾಲಕಿಯರ ಬಾಲಮಂದಿರಗಳು ಸೇರಿದಂತೆ ರಾಜ್ಯದಲ್ಲಿ 3 ಲಕ್ಷಕ್ಕೂ ಹೆಚ್ಚು ಮಕ್ಕಳು ವಸತಿ ಸೌಲಭ್ಯ ಪಡೆದಿದ್ದಾರೆ. ಊಟ, ವಸತಿ, ಪಠ್ಯಪುಸ್ತಕ ಸೇರಿದಂತೆ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಲಾಗಿದೆ ಆದರೆ ಶಿಕ್ಷಣದ ಜೊತೆಗೆ ಸಂಸ್ಕಾರ ಬೆಳೆಸುವ ಕೆಲಸವೂ ಆಗಬೇಕಿದೆ. ವ್ಯಕ್ತಿ ಎಷ್ಟೇ ಉನ್ನತ ಮಟ್ಟಕ್ಕೇರಿದರೂ ಸುಸ್ಕಾರ ಇಲ್ಲದಿದ್ದರೆ ಎಲ್ಲವೂ ವ್ಯರ್ಥವಾಗುತ್ತದೆ. ಮಕ್ಕಳು ಹಾಗೂ ಸಮಾಜದ ಹಿತದೃಷ್ಟಿಯಿಂದ ಮಕ್ಕಳಲ್ಲಿ ಸಂಸ್ಕಾರ ಬೆಳೆಸಬೇಕು. ಗುದ್ದುವ ಪ್ರವೃತ್ತಿ ಬಿಟ್ಟು ಮಕ್ಕಳನ್ನು ತಿದ್ದುವ ಕಾರ್ಯ ಮಾಡಬೇಕು.



ಲೈಸೆನ್ಸ್ ರದ್ದುಗೊಳಿಸುವ ಎಚ್ಚರಿಕೆ...

ಮಕ್ಕಳ ಮೇಲಿನ ದೌರ್ಜನ್ಯ ಕುರಿತ ಮಾಧ್ಯಮಗಳ ವರದಿ ಆಧರಿಸಿ 3 ತಿಂಗಳಲ್ಲಿ 96 ಸುಮೊಟೋ ಕೇಸ್ ದಾಖಲಿಸಿದ್ದೇನೆ. ಇದೂ ಸೇರಿ ರಾಜ್ಯದಲ್ಲಿ 1400ಕ್ಕೂ ಹೆಚ್ಚು ಕೇಸ್ ಇತ್ಯರ್ಥ ಬಾಕಿ ಇವೆ. ಸ್ಥಳೀಯವಾಗಿ 'ಬಿ' ರಿಪೋರ್ಟ್ ಆಗಿರುವ ಪ್ರಕರಣಗಳಲ್ಲಿ ಅನುಮಾನವಿದ್ದರೆ ಉನ್ನತ ತನಿಖೆಗೆ ಅವಕಾಶವಿದೆ. ಕಳೆದ ವರ್ಷದ ಏಪ್ರಿಲ್‌ನಿಂದ ಈವರೆಗೆ ಮೈಸೂರು ನಗರ 45, ಗ್ರಾಮಾಂತರ 97 ಸೇರಿ ಜಿಲ್ಲೆಯಲ್ಲಿ 142 ಪೋಕ್ಸೋ ಪ್ರಕರಣ ದಾಖಲಾಗಿವೆ. ದೇವದಾಸಿ ಮಕ್ಕಳು ಶಾಲೆ–ಕಾಲೇಜಿಗೆ ದಾಖಲಾಗುವ ವೇಳೆ ತಂದೆ ಹೆಸರು ಕೇಳುವಂತಿಲ್ಲ ಎಂದು ನಿನ್ನೆಯಷ್ಟೇ ಆದೇಶವಾಗಿದೆ. ಅದರಂತೆ ಮೆಡಿಕಲ್ ಸ್ಟೋರ್‌ಗಳಲ್ಲಿ ವಯಸ್ಕರು ಬಳಸುವ ವಸ್ತುಗಳನ್ನು ಮಕ್ಕಳಿಗೆ ನೀಡದಂತೆ ಸುತ್ತೋಲೆ ಹೊರಡಿಸಲಾಗುವುದು. ಹಾಗೆಯೇ ಪಬ್ಬು–ಬಾರ್‌ಗಳಿಗೆ ಮಕ್ಕಳಿಗೆ ಪ್ರವೇಶ ನೀಡಿದರೆ, ಅವರಿಗೆ ಮದ್ಯ ಮಾರಾಟ ಮಾಡಿದರೆ ಅಂತಹವರ ಲೈಸೆನ್ಸ್ ರದ್ದುಗೊಳಿಸುವಂತೆ ಆದೇಶ ಹೊರಡಿಸುವ ನಿರೀಕ್ಷೆ ಇದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ತಿಳಿಸಿದರು.

ಈ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ವಾರ್ಡನ್‌ಗಳು ಮಕ್ಕಳೊಂದಿಗೆ ಮಾತನಾಡಬೇಕು ಎಂದು ಹೇಳಿದರು.

ಸಮಾಲೋಚಕರ ನಿಯೋಜನೆ: ರಾಜ್ಯ ಪ್ರವಾಸದಲ್ಲಿ ನಾನು 30 ಹಾಸ್ಟೆಲ್‌ಗಳು ಹಾಗೂ ಬಾಲಮಂದಿರಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಆದಾಗ್ಯೂ ನಿಲಯ ಪಾಲಕರು ಮಕ್ಕಳ ಮೇಲೆ ನಿಗಾ ಇಡಬೇಕು. ತಪ್ಪು ಕಂಡರೆ ತಿದ್ದಿ ಬುದ್ಧಿ ಹೇಳಬೇಕು. ಹಾದಿ ತಪ್ಪುತ್ತಿದ್ದಾರೆ ಎಂದೆನಿಸಿದರೆ ಅಂತಹ ಮಕ್ಕಳ ಪಟ್ಟಿ ಮಾಡಿ ಸಮಾಲೋಚನೆಗೆ ವ್ಯವಸ್ಥೆ ಮಾಡಬೇಕು. ಕನಿಷ್ಠ ಪ್ರಮಾಣದ ಕಲಿಕೆ, ಹಾಜರಾತಿ ಬಗ್ಗೆಯೂ ನಿಗಾ ವಹಿಸಬೇಕು. ಮಕ್ಕಳ ಹಕ್ಕಿನ ಜೊತೆಗೆ ಚೆನ್ನಾಗಿ ಓದಿ, ವಿದ್ಯಾವಂತರಾಗಬೇಕೆಂಬ ಅವರ ಕರ್ತವ್ಯದ ಅರಿವು ಮೂಡಿಸಬೇಕು. ಮಕ್ಕಳು ಮುಖ್ಯವಾಹಿನಿಗೆ ಬರುವಲ್ಲಿ ಯಾವುದೇ ಅಡ್ಡಿಯಾಗದಂತೆ ನಿರ್ವಹಿಸಲು ಸಮಾಲೋಚಕರನ್ನು ನಿಯೋಜನೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ ಎಂದರು.

ಹಲವು ಕ್ರಮ: ಅಂಗನವಾಡಿ ಹಾಗೂ ಶಾಲೆಗಳ ಮೂಲಕ ಮಕ್ಕಳಿಗೆ ಪೌಷ್ಟಿಕ ಆಹಾರ, ಗರ್ಭಿಣಿ ಸ್ತ್ರೀಯರಿಗೂ ಈ ಸೌಲಭ್ಯ ಮಾರಕ ರೋಗಗಳಿಂದ ರಕ್ಷಣೆಗೆ ಲಸಿಕೀಕರಣ ಸಮರ್ಪಕವಾಗಿ ನಡೆಯಬೇಕು. ಬಾಲಕಾರ್ಮಿಕ ಮಕ್ಕಳ ಸಮೀಕ್ಷೆ ಪರಿಣಾಮಕಾರಿಯಾಗಿ ನಡೆಸಿ, ಅವರಿಗೆ ಅಂಗಡಿ ಮಾಲೀಕರಿಂದ 20 ಸಾವಿರ ಹಾಗೂ ಸರ್ಕಾರದ 15 ಸಾವಿರ ಸೇರಿ ಒಟ್ಟು 35 ಸಾವಿರ ರೂ. ಹಣವನ್ನು ಆ ಬಾಲಕ ಹಾಗೂ ಜಿಲ್ಲಾಧಿಕಾರಿಗಳ ಜಂಟಿ ಖಾತೆಯಲ್ಲಿ ಜಮಾ ಮಾಡಬೇಕು. ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ವಿಚಾರಣೆಗೆ ಅಧಿಕಾರಿ ಹಾಗೂ ಮಹಿಳಾ ಸಿಬ್ಬಂದಿ ಒಳಗೊಂಡ ವಿಶೇಷ ಮಕ್ಕಳ ಪೊಲೀಸ್ ಘಟಕ ರೂಪಿಸಬೇಕು. ಮಕ್ಕಳಲ್ಲಿ ಗಿಡ ಮೂಲಿಕೆಗಳ ಬಗ್ಗೆ ಅರಿವು ಮೂಡಿಸಬೇಕು. ಬಾಲಮಂದಿರಗಳಲ್ಲಿ ಮಕ್ಕಳಿಗೆ ಜಿಲ್ಲಾ ಕೌಶಲ್ಯಾಭಿವೃದ್ಧಿ ತರಬೇತಿ, ಆಸಕ್ತಿ ಅನುಸಾರ ತರಬೇತಿ ಹಾಗೂ ಬ್ರಿಡ್ಜ್ ಕೋರ್ಸ್ ಕಲ್ಪಿಸುವ ನಿಟ್ಟಿನಲ್ಲಿ ಯೋಚಿಸಲಾಗಿದೆ ಎಂದು ತಿಳಿಸಿದರು.

ಉನ್ನತ ಮಟ್ಟದ ಸಭೆ: ಬಾಲ್ಯವಿವಾಹ ಮಾಡಿದರೆ ಹುಡುಗ ಜೈಲಿಗೆ, ಹುಡುಗಿ ಬಾಲಮಂದಿರಕ್ಕೆ ಸೇರುತ್ತಾರೆ. ಪ್ರತಿ ಜೈಲಿನಲ್ಲೂ 10–15 ಜನ ಬಾಲ್ಯವಿವಾಹ ಪ್ರಕರಣದಡಿ ಬಂದವರಿರುತ್ತಾರೆ. ಇದೆಲ್ಲದರ ಬಗ್ಗೆ ತಿಳಿಹೇಳಿ ಜಾಗೃತಿ ಮೂಡಿಸಬೇಕು. ಮಕ್ಕಳ ಮೇಲೆ ದೌರ್ಜನ್ಯವಾದರೆ ಮಕ್ಕಳ ಸಹಾಯವಾಣಿ 1098ಗೆ ಕರೆ ಮಾಡಿದರೆ ಅದು 112ಗೂ ಸಂಪರ್ಕವಾಗಿ ಪೊಲೀಸರು ತಕ್ಷಣ ರಕ್ಷಣೆಗೆ ಧಾವಿಸುತ್ತಾರೆ. ಬಾಲ್ಯವಿವಾಹ, ಶಾಲೆಬಿಟ್ಟ ಮಕ್ಕಳು, ಬಾಲಕಾರ್ಮಿಕ ಪ್ರಕರಣಗಳ ಪತ್ತೆ ಕಾರ್ಯ ಪರಿಣಾಮಕಾರಿಯಾಗಿ ನಡೆದಿದೆ. ಮಕ್ಕಳ ಕಲ್ಯಾಣ ಸಮಿತಿ ರಾಜ್ಯ ಮಟ್ಟದ ಘಟಕ ರೂಪಿಸಲಾಗಿದ್ದು, ಇನ್ನೊಂದು ತಿಂಗಳಲ್ಲಿ ಎಲ್ಲಾ ಜಿಲ್ಲಾ ಮಟ್ಟದ ಘಟಕಗಳ ರಚನೆಯಾಗಲಿದೆ. ಶಾಲೆ ಮಕ್ಕಳು ಹಾಗೂ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಮೇಲೆ ನಿಗಾ ವಹಿಸಬೇಕಿದೆ. ಅದರಲ್ಲೂ ಹೆಚ್‌ಐವಿ, ಟಿಬಿ ಇನ್ನಿತರ ಕಾಯಿಲೆಗಳಿಂದ ಬಳಲುತ್ತಿರುವವರು, ಕೊರೊನಾದಿಂದ ಒಬ್ಬರು ಅಥವಾ ಇಬ್ಬರು ಪೋಷಕರನ್ನೂ ಕಳೆದುಕೊಂಡಿರುವವರು, ಬೀದಿಬದಿ ಬೇಡುವ ಮಕ್ಕಳು, ಬಾಲಕಾರ್ಮಿಕರು ಹೀಗೆ ಎಲ್ಲಾ ಸ್ತರದ ಮಕ್ಕಳಿಗೆ ಅಗತ್ಯ ಸೌಲಭ್ಯ ಕಲ್ಪಿಸಿ, ಮುಖ್ಯವಾಹಿನಿಗೆ ಕರೆ ತರಬೇಕಿದೆ. ಮುಂದಿನ ವಾರ ಮೈಸೂರಿನಲ್ಲೇ ಉನ್ನತ ಮಟ್ಟದ ಸಭೆಯಲ್ಲಿ ಮಹತ್ವದ ಚರ್ಚೆ ನಡೆಸಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜ್, ವಾರ್ತಾ ಮತ್ತು ಪ್ರಚಾರ ಇಲಾಖೆ ಉಪ ನಿರ್ದೇಶಕ ಡಿ.ಅಶೋಕ್ ಕುಮಾರ್ ಹಾಜರಿದ್ದರು.

ಮಡಿಕೇರಿ–ವಿರಾಜಪೇಟೆ ರಸ್ತೆ ಬದಿ ಕಸ ಸುರಿಯುತ್ತಿದ್ದವರಿಗೆ ದಂಡ

ಕಸದ ರಾಶಿಯಲ್ಲಿದ್ದ ಬಿಲ್‌ನಿಂದ ಕಸ ಸುರಿಯುತ್ತಿದ್ದವರನ್ನು ಪತ್ತೆ ಹಚ್ಚಿದ ನಗರಸಭೆ



ಮಡಿಕೇರಿ, ಫೆ.9– ಮಡಿಕೇರಿಯಿಂದ ಮೇಕೇರಿ ಮೂಲಕ ವಿರಾಜಪೇಟೆಗೆ ಹಾದು ಹೋಗುವ ಹೆದ್ದಾರಿ ಬದಿ ಪ್ರತಿನಿತ್ಯ ರಾಶಿ ರಾಶಿ ಕಸ ಎಸೆಯುತ್ತಿದ್ದವರಿಗೆ ಮಡಿಕೇರಿ ನಗರಸಭೆ ದಂಡ ವಿಧಿಸಿದೆ.

ಚೀಲ ಮತ್ತು ಬಾಕ್ಸ್‌ಗಳಲ್ಲಿ ತ್ಯಾಜ್ಯ ತುಂಬಿಕೊಂಡು ವಾಹನಗಳಲ್ಲಿ ಬಂದು ರಸ್ತೆಯ ಬದಿಯಲ್ಲೇ ಮೆಡಿಕಲ್ ತ್ಯಾಜ್ಯ, ಮಾಂಸದ ಅಂಗಡಿಯ ತ್ಯಾಜ್ಯ, ಹೊಟೇಲ್‌ನ ಹಳಸಿದ ವಸ್ತುಗಳು, ಪ್ಲಾಸ್ಟಿಕ್ ತಿಂಡಿ ಪೊಟ್ಟಣಗಳು, ಹಳೇ ಬಟ್ಟೆಗಳನ್ನು ಮೂಟೆ ಕಟ್ಟಿ ಎಸೆಯಲಾಗುತ್ತಿತ್ತು.

ಗುರುವಾರ ಬೆಳಗ್ಗೆ 8 ಗಂಟೆಯಿಂದಲೇ ಕಸ ವಿಲೇವಾರಿಗೆ ಕ್ರಮ ಕೈಗೊಂಡ ಮಡಿಕೇರಿ ನಗರಸಭೆಯ 22ನೇ ವಾರ್ಡ್‌ನ ಮಂಗಳಾ ದೇವಿ ನಗರದ ವಾರ್ಡ್ ಸದಸ್ಯೆ ಸಬಿತಾ, ನಗರ ಸಭೆಯ ಸಿಬ್ಬಂದಿಗಳು ಹಾಗೂ ಪೌರ ಕಾರ್ಮಿಕರು ತ್ಯಾಜ್ಯವನ್ನು ತೆರವುಗೊಳಿಸಿ ಟ್ರ್ಯಾಕ್ಟರ್ ಮೂಲಕ ವಿಲೇವಾರಿಗೊಳಿಸಿದರು.

ಕೆಲವು ಕಸದ ಚೀಲಗಳಲ್ಲಿ ಇದ್ದ ಅಂಗಡಿ ಬಿಲ್, ವಿದ್ಯುತ್ ಬಿಲ್, ಆನ್‌ಲೈನ್ ಆರ್ಡರ್‌ಗಳ ರಶೀದಿ, ಕೆಲ ಹೋಂ ಸ್ಟೇಗಳಿಗೆ ಸೇರಿದ ವಿಸಿಟಿಂಗ್ ಕಾರ್ಡ್‌ಗಳು, ಬಿಲ್ ಬುಕ್‌ಗಳ ವಿಳಾಸ ಮತ್ತು ಫೋನ್ ನಂಬರನ್ನು ಆಧರಿಸಿ ಮಾಲೀಕರನ್ನು ಪತ್ತೆ ಮಾಡಲಾಯಿತು.

ರಸ್ತೆ ಬದಿ ಎಸೆದಿದ್ದ ಕಸದ ಬ್ಯಾಗ್‌ವೊಂದರಲ್ಲಿ ಮೂರ್ನಾಡುವಿಗೆ ಸೇರಿದ ವ್ಯಕ್ತಿಯೊಬ್ಬರ ಕರೆಂಟ್ ಬಿಲ್, ಪ್ರತಿಷ್ಠಿತ ಸೇವಾ ಸಂಸ್ಥೆಯೊಂದರ ಮಾಹಿತಿ ಕಾರ್ಡ್ ಆಧರಿಸಿ ಅವರಿಗೆ ಫೋನ್ ಮಾಡಿ ಸ್ಥಳಕ್ಕೆ ಕರೆಸಿಕೊಳ್ಳಲಾಯಿತು. ಈ ಸಂದರ್ಭ ತಪ್ಪೊಪ್ಪಿಕೊಂಡ ವ್ಯಕ್ತಿಗೆ ಸ್ಥಳದಲ್ಲೇ 2 ಸಾವಿರ ರೂ.ಗಳ ದಂಡವನ್ನು ವಿಧಿಸಲಾಯಿತು. ಇದರೊಂದಿಗೆ ಮೇಕೇರಿಯ ಹೋಂಸ್ಟೇಯೊಂದರ ವಿಳಾಸವಿರುವ ತ್ಯಾಜ್ಯವೂ ಪತ್ತೆಯಾಗಿ, ಹೋಂಸ್ಟೇ ಬಳಿ ತೆರಳಿದ ವಾರ್ಡ್ ಸದಸ್ಯೆ ಸಬಿತಾ ಮತ್ತು ನಗರಸಭೆ ಸಿಬ್ಬಂದಿಗಳು ಅಲ್ಲಿ ಯಾರು ಇಲ್ಲದ್ದನ್ನು ಗಮನಿಸಿ ಈ ಕುರಿತು ಮೇಕೇರಿ ಗ್ರಾಮ ಪಂಚಾಯತ್‌ಗೆ ಮಾಹಿತಿ ನೀಡಿದ್ದಾರೆ. ಕಸದ ರಾಶಿಯಲ್ಲಿ ಕಾಟಕೇರಿಯ ವ್ಯಕ್ತಿಯೊಬ್ಬರಿಗೆ ಸೇರಿದ ಬಿಲ್, ಮಡಿಕೇರಿಯ ಪೆನ್ಷನ್ ಲೇನ್‌ನ ವ್ಯಕ್ತಿಯೊಬ್ಬರು ಆನ್‌ಲೈನ್ ಮೂಲಕ ಆರ್ಡರ್ ಮಾಡಿರುವ ಬಿಲ್‌ಗಳು ಪತ್ತೆಯಾಗಿದೆ

ಈ ಕುರಿತು ಪ್ರತಿಕ್ರಿಯಿಸಿರುವ ವಾರ್ಡ್ ಸದಸ್ಯೆ ಸಬಿತಾ, ಸಾರ್ವಜನಿಕರು ಈ ರೀತಿ ರಸ್ತೆ ಬದಿ ತ್ಯಾಜ್ಯವನ್ನು ಸುರಿತ್ತಿರುವ ಬಗ್ಗೆ ಹಲವು ಸಮಯಗಳಿಂದ ದೂರು ಬಂದಿದ್ದು ಈ ದಿನ ಬೆಳಗ್ಗೆಯಿಂದಲೇ ತ್ಯಾಜ್ಯ ವಿಲೇವಾರಿ ಮಾಡಲಾಗಿದೆ. ಕಸದ ಚೀಲಗಳಲ್ಲಿದ್ದ ಚೀಟಿಗಳ ಮೂಲಕ ನಾಲ್ಕೈದು ವಿಳಾಸಗಳನ್ನು ಪತ್ತೆ ಹಚ್ಚಲಾಗಿದೆ. ಅವರಿಗೂ ನಗರ ಸಭೆ ಮೂಲಕ ದಂಡ ವಿಧಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸ್ಕೌಟ್ಸ್, ಗೈಡ್ಸ್ ಸಂಸ್ಥೆಯಿಂದ ಸಾಧಕರಿಗೆ ಸನ್ಮಾನ



ಮಡಿಕೇರಿ, ಫೆ.9– ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಪ್ರಶಸ್ತಿ ಪಡೆದ ಸಂಸ್ಥೆಯ ಸಾಧಕರನ್ನು ಗುರುವಾರ ಸನ್ಮಾನಿಸಲಾಯಿತು.

ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಮತ್ತು ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ರಾಣಿ ಮಾಚಯ್ಯ, ಜಿಲ್ಲಾ ಸಂಸ್ಥೆಯ ಸಹ ಕಾರ್ಯದರ್ಶಿ ಮತ್ತು ನಾಡಪೆದ ಆಶಾ ಚಿತ್ರಕ್ಕೆ ಅತ್ಯುತ್ತಮ ನಾಯಕ ನಟ ಪ್ರಶಸ್ತಿ ಪುರಸ್ಕೃತರಾದ ಬೊಳ್ಳಜಿರ ಬಿ.ಅಯ್ಯಪ್ಪ ಹಾಗೂ ಗ್ರಾಮೀಣ ಶಿಕ್ಷಕ ರತ್ನ ಪ್ರಶಸ್ತಿ ಪುರಸ್ಕೃತರಾದ ಸಂಸ್ಥೆಯ ಶಿಕ್ಷಕ ಟಿ.ಕೆ.ವಾಮನ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ, ಸ್ಥಾನಿಕ ಆಯುಕ್ತ ಎಚ್.ಆರ್.ಮುತ್ತಪ್ಪ, ಜಿಲ್ಲಾ ತರಬೇತಿ ಆಯುಕ್ತ ಮೈಥಿಲಿ ರಾಜ್, ಜಿಲ್ಲಾ ಖಜಾಂಚಿ ಪುಷ್ಪವೇಣಿ, ಮಡಿಕೇರಿ ಸ್ಥಳೀಯ ಸಂಸ್ಥೆ ಮುಖ್ಯಸ್ಥರಾದ ನೀಲಮ್ಮ ಮತ್ತು ತಂಗಮ್ಮ, ಜಿಲ್ಲಾ ಸಂಸ್ಥೆ ಮಾಜಿ ಕಾರ್ಯದರ್ಶಿ ಡೀಝಿ, ಸಂಪಾಜೆ ಸ್ಥಳೀಯ ಸಂಸ್ಥೆಯ ಸಹ ಕಾರ್ಯದರ್ಶಿ ಕೆ.ಯು. ರಂಜಿತ್, ಜಿಲ್ಲಾ ಕಾರ್ಯದರ್ಶಿ ಎಂ.ಎಂ.ವಸಂತಿ, ಪೊನ್ನಂಪೇಟೆ ಸ್ಥಳೀಯ ಸಂಸ್ಥೆಯ ಸಹ ಕಾರ್ಯದರ್ಶಿ ಅಲೀಮ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್ ಮತ್ತು ಗೈಡ್ಸ್‌ನ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಆಯಾಯ ಶಾಲೆಗಳ ತರಬೇತಿ ಶಿಕ್ಷಕರು ಪಾಲ್ಗೊಂಡಿದ್ದರು.

ಕೊಡಗಿನ ಮೂವರಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ


ಅನಂತಶಯನ


ಮಹೇಶ್ ನಾಚಯ್ಯ


ನಾಗೇಶ್ ಪಾಣತ್ತಲೆ

ಮಡಿಕೇರಿ, ಫೆ.9– ರಾಜ್ಯ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪ್ರಕಟಗೊಂಡಿದ್ದು, ಕೊಡಗು ಜಿಲ್ಲೆಯ ಮೂವರು ಹಿರಿಯ ಪತ್ರಕರ್ತರು ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮಡಿಕೇರಿ ನಿವಾಸಿ, ಶಕ್ತಿ ದಿನ ಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ. ಅನಂತಶಯನ ಮತ್ತು ವಿರಾಜಪೇಟೆ ನಿವಾಸಿ ಪೂಮಾಲೆ ಕೊಡವ ವಾರ ಪತ್ರಿಕೆಯ ಸಂಪಾದಕ ಅಜ್ಜಿನಿಕಂಡ ಮಹೇಶ್ ನಾಚಯ್ಯ ಅವರಿಗೆ ಪ್ರತಿಷ್ಠಿತ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇನ್ನು ಕೊಡಗು ಮೂಲದ ಛಾಯಾಚಿತ್ರಗಾರ ನಾಗೇಶ್ ಪಾಣತ್ತಲೆ ಅವರಿಗೂ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಲಭಿಸಿದೆ ಎಂದು ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಗೋಣಿಕೊಪ್ಪ ಬೈಪಾಸ್ ರಸ್ತೆಯ ನಿವೇಶನದಲ್ಲಿ ಗುರುವಾರ ಮಧ್ಯಾಹ್ನ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು, ಕುರುಚಲು ಕಾಡು ಹೊತ್ತಿ ಉರಿದಿದೆ. ಅಗ್ನಿಶಾಮಕ ದಳ ತುರ್ತು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿತು.

‘ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ, ಮಾರಾಟ ಮೇಳ’ಕ್ಕೆ ಚಾಲನೆ



ಮಡಿಕೇರಿ, ಫೆ.9– ನಗರದ ಗಾಂಧಿ ಮೈದಾನದಲ್ಲಿ ಫೆ15 ರವರೆಗೆ ಏರ್ಪಡಿಸಲಾಗಿರುವ ‘ಕಾವೇರಿ ವಸ್ತ್ರಸಿರಿ’ ಜಿಲ್ಲಾ ಮಟ್ಟದ ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಕರ್ನಾಟಕ ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ ಚಾಲನೆ ನೀಡಿದರು.

ಜವಳಿ ಅಭಿವೃದ್ಧಿ ಆಯುಕ್ತಾಲಯ, ಜಿಲ್ಲಾಡಳಿತ, ಜಿಪಂ, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಸಹಕಾರದಲ್ಲಿ ಏರ್ಪಡಿಸಲಾಗಿರುವ ‘ಕಾವೇರಿ ವಸ್ತ್ರಸಿರಿ’ ಜಿಲ್ಲಾ ಮಟ್ಟದ ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ನಾಪಂಡ ರವಿಕಾಳಪ್ಪ ಅವರು ರಾಷ್ಟ್ರದಲ್ಲಿ ಹಿಂದಿನಿಂದಲೂ ಕೈಮಗ್ಗದಿಂದ ಉತ್ಪಾದಿಸಿದ ಬಟ್ಟೆಗಳನ್ನು ಧರಿಸುತ್ತಾ ಬರಲಾಗಿದೆ. ಆ ನಿಟ್ಟಿನಲ್ಲಿ ಗುಡಿ ಮತ್ತು ಸಣ್ಣ ಕೈಗಾರಿಕೆಗೆ ಒತ್ತು ನೀಡಲಾಗಿದೆ ಎಂದರು.

ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಿದ್ದು, ಜಿಲ್ಲೆಯ ಜನತೆ ಇದರ ಸದುಪಯೋಗಪಡಿಸಿಕೊಳ್ಳುವಂತಾಗಬೇಕು ಎಂದು ಅವರು ಹೇಳಿದರು.

ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಚರಕದ ಮೂಲಕ ವಸ್ತ್ರ ನೇಯ್ದು ಸ್ವದೇಶಿ ಉತ್ಪನ್ನಗಳಿಗೆ ಬೇಡಿಕೆ ತಂದು ಕೊಟ್ಟರು. ಆ ನಿಟ್ಟಿನಲ್ಲಿ ಸ್ವದೇಶಿ ಕೈಮಗ್ಗ ಉತ್ಪನ್ನಗಳನ್ನು ಬಳಸುವಂತಾಗಬೇಕು. ಇದರಿಂದ ಇಲ್ಲಿನ ಸ್ಥಳೀಯರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದರು.

ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಎಸ್. ಗುರುಸ್ವಾಮಿ ಅವರು ಮೇಳದಲ್ಲಿ ಕೈಮಗ್ಗ ನೇಕಾರರು ಉತ್ಪಾದಿಸಿದ ರೇಷ್ಮೆ, ಕಾಟನ್, ಕಾಂಚಿಪುರಂ, ಮೊಣಕಾಲ್ಮೂರು, ಕಂಚಿಕಾಟನ್, ಇಳಕಲ್ ಸೀರೆಗಳು, ಟವಲ್, ಬೆಡ್‌ಶೀಟ್, ಲುಂಗಿ, ಕರವಸ್ತ್ರ ಮತ್ತಿತರ ನಿತ್ಯ ಬಳಕೆಯ ಕೈಮಗ್ಗ ವಸ್ತುಗಳನ್ನು ನೇರವಾಗಿ ಶೇ.20 ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

ರಾಷ್ಟ್ರದ ಪಶ್ಚಿಮ ಬಂಗಾಳ, ರಾಜ್ಯದ ಚಿಕ್ಕಬಳ್ಳಾಪುರ, ಗದಗ, ಶಿರಸಿ, ಹಾಗೆಯೇ ಬಾಗಲಕೋಟೆ, ಗದಗ, ದಾವಣಗೆರೆ, ಬೆಂಗಳೂರು, ತುಮಕೂರು, ಹಾವೇರಿ, ಬೆಳಗಾವಿ, ಕುಶಾಲನಗರ, ಪೊನ್ನಂಪೇಟೆ, ಹಾಸನ, ಬೆಂಗಳೂರು ಗ್ರಾಮಾಂತರ ಹೀಗೆ ವಿವಿಧ ಜಿಲ್ಲೆಗಳಿಂದ ಕೈಮಗ್ಗ ಉತ್ಪಾದಕರು ಆಗಮಿಸಿ ಕೈಮಗ್ಗ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. 20 ಮಳಿಗೆಗಳನ್ನು ಸ್ಥಾಪಿಸಲಾಗಿದೆ ಎಂದು ಗುರುಸ್ವಾಮಿ ಅವರು ಹೇಳಿದರು. ನಗರಸಭೆ ಸದಸ್ಯರಾದ ಉಷಾ ಕಾವೇರಪ್ಪ, ಇತರರು ಇದ್ದರು.

ಮಹಿಳೆ ಮೇಲೆ ಕತ್ತಿಯಿಂದ ಹಲ್ಲೆ ನಡೆಸಿ, ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ

ಹಲ್ಲೆಗೊಳಗಾದ ಮಹಿಳೆ ಪ್ರಾಣಾಪಾಯದಿಂದ ಪಾರು

ವಿರಾಜಪೇಟೆ, ಫೆ.9– ವ್ಯಕ್ತಿಯೋರ್ವ ಮಹಿಳೆ ಮೇಲೆ ಕತ್ತಿಯಿಂದ ಹಲ್ಲೆ ಮಾಡಿ ಹತ್ಯೆಗೆ ಯತ್ನಿಸಿ ತಾನೂ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ದೇವಣಗೇರಿ ಗ್ರಾಮದಲ್ಲಿ ನಡೆದಿದೆ.



ದೇವಣಗೇರಿ ಗ್ರಾಮದ ವಾಸಿ ಮೂಕೊಂಡ ಬಾಬು ಮಾದಪ್ಪ (62) ಎಂಬುವರೇ ಆತ್ಮಹತ್ಯೆಗೆ ಶರಣಾದವರಾಗಿದ್ದಾರೆ. ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿರುವ ಮೂಕೊಂಡ ಶಾಂತಿ(63) ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬುಧವಾರ (ಫೆ.8) ಮಧ್ಯಾಹ್ನ ಕ್ಷುಲ್ಲಕ ಕಾರಣಕ್ಕಾಗಿ ಮಾದಪ್ಪ ಅವರು ಮೂಕೊಂಡ ಶಾಂತಿ ಅವರ ಮೇಲೆ ಕತ್ತಿಯಿಂದ ಮನಬಂದಂತೆ ಹಲ್ಲೆ ನಡೆಸಿ ನಾಪತ್ತೆಯಾಗಿದ್ದರು. ತೀವ್ರವಾಗಿ ಗಾಯಗೊಂಡ ಶಾಂತಿ ಅವರನ್ನು ವಿರಾಜಪೇಟೆ ಸರಕಾರಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಇರಿಸಿ ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಘಟನೆ ನಂತರ ಬಾಬು ಮಾದಪ್ಪ ಅವರು ಭಯದಿಂದ ಮನೆಯ ಸಮೀಪವಿರುವ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಇಂದು ಮೃತದೇಹ ಪತ್ತೆಯಾಗಿದ್ದು, ಸಾರ್ವಜನಿಕ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು. ವಿರಾಜಪೇಟೆ ಗ್ರಾಮಾಂತರ ಠಾಣಾಧಿಕಾರಿ ರವಿಕುಮಾರ್ ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.


ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಫೆ.9– ವಿರಾಜಪೇಟೆ ಪಟ್ಟಣ ವ್ಯಾಪ್ತಿಯ ಪಾಲಂಗಾಲ ಫೀಡರ್‌ನಲ್ಲಿ ಕಾಮಗಾರಿಯನ್ನು ನಿರ್ವಹಿಸಬೇಕಿರುವುದರಿಂದ ಫೆ.10 ರಂದು ಬೆಳಗ್ಗೆ 10 ಗಂಟೆಯಿಂದ ಕುಕ್ಲೂರು, ಬೇತ್ರಿ, ಕದನೂರು, ಕಾಕೋಟುಪರಂಬು, ನಾಲ್ಕೇರಿ, ಕಡಂಗಮರೂರು, ಕೆದಮಳ್ಳೂರು, ಪಾಲಂಗಾಲ, ಬೇಟೋಳಿ, ಗುಂಡಿಗೆರೆ, ಚಿಟ್ಟಾಡೆ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗಣಿಗಾರಿಕೆ ಜಮೀನು ಖರೀದಿಯಲ್ಲಿ ವಂಚನೆ ಆರೋಪ

ಶಾಸಕ ಪುಟ್ಟರಂಗಶೆಟ್ಟಿ ವಿರುದ್ಧ ಲೋಕಾಯುಕ್ತಕ್ಕೆ ದೂರು

ಚಾಮರಾಜನಗರ, ಫೆ.9– ಗಣಿಗಾರಿಕೆ ಜಮೀನು ಖರೀದಿ ವಿಚಾರದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿಯವರು ಒಪ್ಪಂದದಂತೆ ಪೂರ್ಣ ಪ್ರಮಾಣದ ಹಣ ನೀಡದೆ ವಂಚಿಸಿದ್ದಾರೆ ಈ ಸಂಬಂಧ ಲೋಕಾಯುಕ್ತಕ್ಕೆ ದೂರು ನೀಡಿದ್ದೇನೆ ಎಂದು ಗುಜರಾತ್ ಮೂಲದ ಉದ್ಯಮಿ ಕಮಲೇಶ್ ಕುಮಾರ್ ಗೋಪಾಲ್‌ದಾಸ್ ಪಟೇಲ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕರಿಕಲ್ಲು ಜಮೀನು ಖರೀದಿ ಸಂಬಂಧ ಶಾಸಕರು ನನಗೆ 9 ಕೋಟಿ ನೀಡಿರುವುದಾಗಿ ತಿಳಿಸಿದ್ದಾರೆ. ಆದರೆ, ಅವರು ನನಗೆ 1.90ಕೋಟಿ ಹಣವನ್ನು ಬ್ಯಾಂಕ್ ಮೂಲಕ ಹಾಗೂ 90 ಲಕ್ಷವನ್ನು ನಗದು ರೂಪದಲ್ಲಿ ನೀಡಿ, ಉಳಿದ ಹಣವನ್ನು ನೀಡದೆ ವಂಚಿಸುತ್ತಿದ್ದಾರೆ. ಈ ಸಂಬಂಧ ಲೋಕಾಯುಕ್ತಕ್ಕೆ ಲಿಖಿತ ದೂರು ಸಲ್ಲಿಸಿರುವುದಾಗಿ ಅವರು ತಿಳಿಸಿದರು.

ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಶಾಸಕರು ಜಮೀನನ್ನು ಸಂಪೂರ್ಣವಾಗಿ ಕ್ರಯ ಮಾಡಿಕೊಳ್ಳದೇ ಗಣಿಗಾರಿಕೆ ನಡೆಸುವ ಮೂಲಕ ನನಗೆ ಹಾಗೂ ಸರ್ಕಾರಕ್ಕೆ ಕೋಟ್ಯಾಂತರ ರೂ. ವಂಚಿಸಲು ಮುಂದಾ ಗಿದ್ದಾರೆ. ಈ ಸಂಬಂಧ ನಾನು ಈಗಾಗಲೇ ಪ್ರಧಾನಮಂತ್ರಿ, ಕೇಂದ್ರ ಹಾಗೂ ರಾಜ್ಯ ಗೃಹ ಸಚಿವರು, ಮಾನವ ಹಕ್ಕುಗಳ ಆಯೋಗ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳವರೆಗೆ ದೂರು ನೀಡಿದ್ದೇನೆ ಎಂದರು.

ಶಾಸಕರು ತಮಗೆ ಒಪ್ಪಂದದಂತೆ ಉಳಿದ ಹಣವನ್ನು ನೀಡಿದರೆ ಕೂಡಲೇ ಜಮೀನು ರಿಜಿಸ್ಟರ್ ಮಾಡಿಕೊಡಲು ಸಿದ್ಧವಾಗಿದ್ದೇನೆ. ಆದರೆ, ಶಾಸಕರು ಹಣ ನೀಡದೆ ತಮಗೆ ವಂಚನೆ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಚುನಾವಣಾ ಹೊಸ್ತಿಲಿನಲ್ಲಿ ಶಾಸಕರ ವಿರುದ್ಧ ತಾವು ಬೇರೆ ಪಕ್ಷದ ಮುಖಂಡರೊಂದಿಗೆ ಶಾಮೀಲಾಗಿ ಆರೋಪ ಮಾಡುತ್ತಿದ್ದೀರಾ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಕಮಲೇಶ್, ನಾನು ಯಾವುದೇ ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡಿಲ್ಲ. ನನಗೆ ರಾಜಕೀಯದ ಆಸಕ್ತಿ ಇಲ್ಲ. ಯಾವ ರಾಜಕೀಯ ಮುಖಂಡರ ಕೈವಾಡವಿಲ್ಲ ಎಂದು ಸ್ಪಷ್ಟಪಡಿಸಿದರು.

> ಗಣಿಗಾರಿಕೆ ಜಮೀನನ್ನು ಖಾತೆ ಮಾಡಿಕೊಟ್ಟ ಕೂಡಲೇ ನಾನು ಕಮಲೇಶ್‌ಗೆ ಒಪ್ಪಂದದಂತೆ ಉಳಿದ ಹಣ ನೀಡಲು ಸಿದ್ಧನಿದ್ದೇನೆ. ಇದರಲ್ಲಿ ವಂಚನೆ ಮಾಡುವ ಪ್ರಶ್ನೆಯಿಲ್ಲ. ಆತ ಮಾಡುತ್ತಿರುವ ಆರೋಪದಲ್ಲಿ ಹುರುಳಿಲ್ಲ. ಆತ ಲೋಕಾಯುಕ್ತಕ್ಕೆ ಆದರೂ ದೂರು ನೀಡಲಿ ಅಥವಾ ಸಿಬಿಐಗೆ ಆದರೂ ದೂರು ನೀಡಲಿ ಎದುರಿಸಲು ನಾನು ಸಿದ್ಧನಿದ್ದೇನೆ.
>
> 
>
> -ಸಿ. ಪುಟ್ಟರಂಗಶೆಟ್ಟಿ, ಶಾಸಕರು.

ಸುವರ್ಣ ಗಂಗೋತ್ರಿಯಲ್ಲಿ ಇಂದಿನಿಂದ ಕಾರ್ಯಾಗಾರ

ಚಾಮರಾಜನಗರ, ಫೆ9– ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ವಾಣಿಜ್ಯ ವಿಭಾಗ ಹಾಗೂ ವಾಣಿಜ್ಯಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ‘ಟು ಡೇಸ್ ವರ್ಕ್‌ಶಾಪ್ ಆನ್ ರೀಸೆಂಟ್ ಟ್ರೆಂಡ್ಸ್ ಇನ್ ಬ್ಯುಸಿನೆಸ್ ಎಜುಕೇಶನ್’ ವಿಷಯ ಕುರಿತು ಫೆ.10 ರಂದು ಬೆಳಿಗ್ಗೆ 10 ಗಂಟೆಗೆ ಎರಡು ದಿನಗಳ ಕಾರ್ಯಾಗಾರವನ್ನು ನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಸುವರ್ಣ ಗಂಗೋತ್ರಿಯ ನಿಜಗುಣ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ

ಮೈಸೂರು ಮಾನಸ ಗಂಗೋತ್ರಿಯ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಎನ್. ನಾಗರಾಜ ಕಾರ್ಯಾಗಾರ ಉದ್ಘಾಟಿಸುವರು. ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ ಪಿ. ಮಾದೇಶ್ ಅಧ್ಯಕ್ಷತೆ ವಹಿಸುವರು. ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಎಂ.ಬಿ.ಎ ವಿಭಾಗದ ಸಂಯೋಜಕ ಡಾ. ಆರ್. ಮಹೇಶ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಚಾಮರಾಜೇಶ್ವರ ದೇವಸ್ಥಾನದಲ್ಲಿ ಶಾಸಕರಿಂದ

ಚಿಕ್ಕರಥ, ದೇವರ ಉತ್ಸವ ವಾಹನ ಉದ್ಘಾಟನೆ



ಚಾಮರಾಜನಗರ, ಫೆ.9– ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ನೂತನವಾಗಿ ಸಿದ್ಧಪಡಿಸಿರುವ ನಾನಾ ದೇವರ ಉತ್ಸವ ವಾಹನ ಹಾಗೂ ಪೌರ್ಣಿಮೆ ಚಿಕ್ಕರಥವನ್ನು ಮಾಜಿ ಸಚಿವ ಹಾಗೂ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ದೇವಸ್ಥಾನ ಒಳಾಂಗಣದಲ್ಲಿ ನೂತನವಾಗಿ ದುರಸ್ತಿ ಪಡಿಸಿರುವ ಕೈಲಾಸ ವಾಹನ, ಗಜವಾಹನ, ಹಂಸ ವಾಹನ, ನಂದಿ ವಾಹನ, ವೃಷಭ ವಾಹನ, ಅಶ್ವ ವಾಹನ ಹಾಗೂ ಚಿಕ್ಕರಥಕ್ಕೆ ಪೂಜೆ ಸಲ್ಲಿಸಿ ಉದ್ಘಾಟಿಸಿ, ಸಮರ್ಪಿಸಿದರು. ಬಳಿಕ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟರು ಚಾಮರಾಜೇಶ್ವರ ದೇವಾಲಯದ ಕುಂಭಾಭಿಷೇಕ ಮಹೋತ್ಸವದಲ್ಲಿ ಬಾಕಿ ಉಳಿದಿದ್ದ, 2.90 ಲಕ್ಷ ರೂ ಹಾಗೂ ವೆಂಕಟನಾಗಪ್ಪಶೆಟ್ಟಿ ಬಿವಿಎಸ್ ಪ್ರತಿಷ್ಠಾನದ ವತಿಯಿಂದ 2 ಲಕ್ಷ ರೂ ಒಟ್ಟು 4.90 ಲಕ್ಷ ರೂ.ವೆಚ್ಚದಲ್ಲಿ ಎಲ್ಲ ದೇವರ ವಾಹನ, ಚಿಕ್ಕರಥ ನಿರ್ಮಿಸಲಾಗಿದ್ದು ಇದೀಗ ಉದ್ಘಾಟನೆ ಮಾಡಲಾಗಿದೆ. ಮುಂದಿನ ಆಷಾಢ ಮಾಸದಲ್ಲಿ ನಡೆಯುವ ಶ್ರೀಚಾಮರಾಜೇಶ್ವರ ರಥೋತ್ಸವದಲ್ಲಿ ಚಿಕ್ಕರಥ, ನಾನಾ ದೇವರ ವಾಹನ ಸಂಚರಿಸಲಿದೆ ಎಂದರು.

ಅರ್ಚಕ ರಾಮಕೃಷ್ಣ ಭಾರದ್ವಾಜ್ ಮಾತನಾಡಿ, ಕಳೆದ 50 ವರ್ಷಗಳ ಹಿಂದೆ ನಡೆಯುತ್ತಿದ್ದ ಆಷಾಢ ಮಾಸದ ಶ್ರೀಚಾಮರಾಜೇಶ್ವರ ರಥೋತ್ಸವ ಮೆರವಣಿಗೆಯಲ್ಲಿ ಮಹಾರಥೋತ್ಸವದ ಜತೆಯಲ್ಲಿ ಕೈಲಾಸ ವಾಹನ, ಗಜವಾಹನ, ಹಂಸ ವಾಹನ, ನಂದಿ ವಾಹನ, ವೃಷಭ ವಾಹನ, ಅಶ್ವ ವಾಹನ ಹಾಗೂ ಚಿಕ್ಕರಥ ಸಾಗುತ್ತಿತ್ತಂತೆ ಮುಂದಿನ ರಥೋತ್ಸವದಲ್ಲಿ ಅದು ಜರುಗಲಿದೆ ಎಂದರು.

ಕಾರ್ಯಕ್ರಮದಲ್ಲಿ ದೇವಸ್ಥಾನದ ಇಓ ರಾಜಶೇಖರ್, ಅರ್ಚಕ ಅಣ್ಣಾಜಿ, ಬಿವಿಎಸ್ ಪ್ರತಿಷ್ಠಾನದ ವೆಂಕಟನಾಗಪ್ಪಶೆಟ್ಟಿ, ಕೋಮಾರಿನ ಯಜಮಾನರಾದ ಲೋಕನಾಥ್, ಮಾಧು, ಮಹದೇವಶೆಟ್ಟಿ, ನಗರಸಭಾ ಮಾಜಿ ಸದಸ್ಯ ಗಣೇಶ್ ದೀಕ್ಷಿತ್, ಸತೀಶ್ ಕುಮಾರ್, ನಿಜಧ್ವನಿ ಗೋವಿಂದರಾಜು ಬಂಗಾರ ಸ್ವಾಮಿ, ಜಯಕುಮಾರ್, ಚಾ.ರಂ. ಶ್ರೀನಿವಾಸ ಗೌಡ, ಸತೀಶ್ ಕುಮಾರ್, ಸಿದ್ದರಾಜು ನಂಜುಂಡಶೆಟ್ಟಿ, ಶ್ರೀನಿವಾಸ, ದೇವರಾಜ್, ಸುರೇಶ್, ಮಹೇಶ್ ಬಂಡಿ ದಫೇದಾರ್ ಇತರರು ಹಾಜರಿದ್ದರು.

ನನಗೆ ಯಾವ ಕಾಯಿಲೆ ಇಲ್ಲ

ವದಂತಿಗಳ ಬಗ್ಗೆ ಶಾಸಕ ನರೇಂದ್ರ ಸ್ಪಷ್ಟನೆ



ಹನೂರು, ಫೆ.9– ನನ್ನ ಆರೋಗ್ಯದ ಬಗ್ಗೆ ಇಲ್ಲಸಲ್ಲದ ವದಂತಿಗಳನ್ನು ಹಬ್ಬಿಸಲಾಗುತ್ತಿದ್ದು, ಇದಕ್ಕೆ ಕಿವಿಗೊಡಬೇಡಿ. ನಾನು ಆರೋಗ್ಯವಾಗಿದ್ದೇನೆ. ನನಗೆ ಕ್ಯಾನ್ಸರ್ ಸೇರಿದಂತೆ ಯಾವುದೇ ರೋಗ ಇಲ್ಲ. ದೇವರು ಆಯಸ್ಸು ನೀಡಿದರೆ ಅಧಿಕಾರ ಇರಲಿ ಇಲ್ಲದಿರಲಿ ಇನ್ನೂ 20 ವರ್ಷಗಳ ಕಾಲ ಕ್ಷೇತ್ರದ ಜನತೆಯ ಸೇವೆ ಹಾಗೂ ಪಕ್ಷ ಸಂಘಟನೆಯನ್ನು ಮಾಡುತ್ತೇನೆ ಎಂದು ಶಾಸಕ ಆರ್. ನರೇಂದ್ರ ಭಾವುಕವಾಗಿ ನುಡಿದಿದ್ದಾರೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಆದಿ ಜಾಂಬವ ಸಮುದಾಯದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಸಮುದಾಯದ ಬಾಬು ಜಗಜೀವನ್ ರಾವ್ ಸಂಘದ ಅಧ್ಯಕ್ಷ ಬಾಲರಾಜು ಕ್ಷೇತ್ರದಲ್ಲಿ ತಮ್ಮ ಅನಾರೋಗ್ಯದ ಬಗ್ಗೆ ವದಂತಿಗಳು ಕೇಳಿ ಬರುತ್ತಿವೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ ಸ್ವತಃ ಶಾಸಕರೇ ನನಗೆ ಯಾವ ಅನಾರೋಗ್ಯವು ಕೂಡ ಇಲ್ಲ ಎಂದರು.

ಇವೆಲ್ಲ ವದಂತಿಗಳು. ನನ್ನ ಆಸೆ ಎಂದರೆ ಜನ ಸೇವೆ ಮಾಡುವಾಗಲೇ ನನ್ನನ್ನು ದೇವರು ಕರೆದುಕೊಳ್ಳಲಿ ಎಂಬುದು. ನಾನು ಕಾಲವಾದ ನಂತರದಲ್ಲೂ ಪಕ್ಷ ಸದೃಢವಾಗಿ ಇರುವ ನಿಟ್ಟಿನಲ್ಲಿ ಪಕ್ಷ ಸಂಘಟಿಸಿ ಹೋಗುತ್ತೇನೆ. ನನ್ನ ತರುವಾಯ ಒಳ್ಳೆ ನಾಯಕನನ್ನು ಬೆಳೆಸಿ ಹೋಗುತ್ತೇನೆ. ನನ್ನ ಆಸೆ ನಮ್ಮ ದೊಡ್ಡಪ್ಪ, ತಂದೆಯಂತೆ ಜನ ಸೇವೆ ಮಾಡುವಾಗಲೇ ನನ್ನನ್ನು ದೇವರು ಕರೆದುಕೊಳ್ಳಲಿ ಎಂದು ಭಾವುಕವಾಗಿ ನುಡಿದರು.

ಚುನಾವಣೆಯಲ್ಲಿ ಸ್ಪರ್ಧೆ ಖಚಿತ, ಕ್ಷೇತ್ರದ ಜನರ ಅಭಿಪ್ರಾಯ ಸಂಗ್ರಹಿಸಿ ಪಕ್ಷ ಆಯ್ಕೆ



ಚಾಮರಾಜನಗರ, ಫೆ .9– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವುದು ಖಚಿತವಾಗಿದ್ದು, ಕ್ಷೇತ್ರದ ಜನಾಭಿಪ್ರಾಯವನ್ನು ಸಂಗ್ರಹಿಸಿ ಯಾವ ಪಕ್ಷದಿಂದ ಸ್ಪರ್ಧೆ ಮಾಡಬೇಕೆಂದು ಸದ್ಯದಲ್ಲಿಯೇ ನಿರ್ಧರಿಸುವುದಾಗಿ ನಿವೃತ್ತ ಪೊಲೀಸ್ ಅಧಿಕಾರಿ ಬಿ. ಪುಟ್ಟಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 27 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದು, ಅಂದಿನಿಂದಲೂ ಇಲಾಖೆಯ ಸೇವೆಯ ಜೊತೆಗೆ ಸಮಾಜಮುಖಿ ಸೇವೆಯಲ್ಲಿ ತೊಡಗಿಸಿಕೊಂಡಿದ್ದೆ. ಸೇವೆಯುದ್ದಕ್ಕೂ ಬಡವರು, ಶೋಷಿತರು ಹಾಗೂ ದೀನ ದಲಿತರ ಪರವಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಆದರೆ ನಿವೃತ್ತಿ ಬಳಿಕ ಜನ ಸೇವೆ ಮಾಡುವುದು ಕಷ್ಟವಾಗುತ್ತಿದೆ. ಸಾರ್ವಜನಿಕರ ಹಂಬಲದಂತೆ ಕೆಲಸ ಮಾಡಲು ದೇಹ ಸ್ಪಂದಿಸುವುದಿಲ್ಲ. ಹೀಗಾಗಿ 46ನೇ ವಯಸ್ಸಿಗೆ ಪೊಲೀಸ್ ಇಲಾಖೆಗೆ ಸ್ವಯಂ ನಿವೃತ್ತಿ ಘೋಷಣೆ ಮಾಡಿ ಪೂರ್ಣ ಪ್ರಮಾಣದಲ್ಲಿ ಜನ ಸೇವೆ ಮಾಡಲು ರಾಜಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿರುವುದಾಗಿ ತಿಳಿಸಿದರು.

ಫೆ. 11 ರಂದು ಬೃಹತ್ ಸಮಾವೇಶ: ಮುಂದಿನ ರಾಜಕೀಯ ನಡೆ ಹಾಗೂ ಯಾವ ಪಕ್ಷಕ್ಕೆ ಸೇರಬೇಕೆಂಬ ಕುರಿತು ಈಗಾಗಲೇ ಚಾ.ನಗರ, ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕಿನಲ್ಲಿ ಅಭಿಮಾನಿಗಳ ಸಭೆಗಳನ್ನು ಕರೆದು ಚರ್ಚೆ ಮಾಡಲಾಗಿದೆ. ಅಂತಿಮವಾಗಿ ಫೆ. 11 ರಂದು ಸಂತೇಮರಹಳ್ಳಿಯಲ್ಲಿರುವ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಅವರಣದಲ್ಲಿ ಬೃಹತ್ ಸಮಾವೇಶವನ್ನು ಆಯೋಜನೆ ಮಾಡಲಾಗಿದೆ. ಅಲ್ಲಿ, ಎಲ್ಲರ ಸಲಹೆ, ಸೂಚನೆ ಮಾರ್ಗದರ್ಶನವನ್ನು ಪಡೆದು, ಯಾವ ಪಕ್ಷವನ್ನು ಸೇರ್ಪಡೆಯಾಗಬೇಕೆಂಬುದನ್ನು ನಿರ್ಧರಿಸಲಾಗುವುದು ಎಂದರು.

ಕಳೆದ ಹಲವಾರು ವರ್ಷಗಳಿಂದ ಬಿ. ಪುಟ್ಟಸ್ವಾಮಿ ಅಭಿಮಾನಿಗಳ ಬಳಗವು ಜಿಲ್ಲೆಯಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದೆ. ಆರೋಗ್ಯ ತಪಾಸಣೆ ಶಿಬಿರ, ರಕ್ತದಾನ ಶಿಬಿರ, ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು, ಸಾಧಕರಿಗೆ ಸನ್ಮಾನ, ಕೋವಿಡ್ ಸಂದರ್ಭದಲ್ಲಿ ಆಹಾರ ಕಿಟ್‌ಗಳ ವಿತರಣೆ, ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತಿದೆ. ಶಿಸ್ತಿನ ಇಲಾಖೆಯಲ್ಲಿ ಇಂಥ ಕಾರ್ಯಕ್ರಮಗಳ ಆಯೋಜನೆಯಿಂದ ಅನೇಕ ಬಾರಿ ತೊಂದರೆ ಅನುಭವಿಸುವಂತಾಗಿತ್ತು. ಅಲ್ಲದೇ ನಮ್ಮ ಹಿರಿಯ ಅಧಿಕಾರಿಗಳು ಮುಜುಗರ ಪಡುವಂತಾಗಿತ್ತು ಎಂದು ಅವರು ಹೇಳಿದರು.

ಹೀಗಾಗಿ 27 ವರ್ಷಗಳ ಸೇವೆಗೆ ನಿವೃತ್ತ ಘೋಷಣೆ ಮಾಡಿ, ರಾಜಕೀಯ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದೇನೆ. ನನಗೆ ಕರ್ತವ್ಯದಲ್ಲಿದ್ದಾಗ ಸಹಕರಿಸಿದ ಇಲಾಖೆಯ ಎಲ್ಲಾ ಹಿರಿಯ, ಕಿರಿಯ ಅಧಿಕಾರಿಗಳಿಗೆ ನಾನು ಆಭಾರಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರದ್ಯಂತ ಪ್ರವಾಸ ಮಾಡಿ, ಜನ ಮನ್ನಣೆಯನ್ನು ಗಳಿಸಿ, ಕ್ಷೇತ್ರದ ಜನರ ಸಂಕಷ್ಟದಲ್ಲಿ ಭಾಗಿಯಾಗಬೇಕೆಂಬ ಅಭಿಲಾಷೆ ನನ್ನದಾಗಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದು ಖಚಿತವಾಗಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಬಸ್ತೀಪುರ ನಾಗರಾಜು, ಜೆಸಿ. ಪುಟ್ಟಸ್ವಾಮಿ, ಕೆ.ಕೆ. ರಂಗರಾಜು, ನಗರಸಭಾಸದಸ್ಯೆ ಜಯಮೇರಿ, ಕಾಂತರಾಜು, ಫೈಯಾಜ್ ಖಾನ್ ಹಾಜರಿದ್ದರು.

ಕರ್ತವ್ಯದಲ್ಲಿದ್ದ ಮುಖ್ಯಪೇದೆ ಹೃದಯಾಘಾತದಿಂದ ಸಾವು

ಗುಂಡ್ಲುಪೇಟೆ/ಬೇಗೂರು, ಫೆ.9– ಕರ್ತವ್ಯದಲ್ಲಿದ್ದ ಮುಖ್ಯಪೇದೆಯೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಬ್ಬಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ.



ತಾಲೂಕಿನ ಚೌಡಹಳ್ಳಿ ಗ್ರಾಮದ ರಾಜಗೋಪಾಲ(47) ಮೃತರು. ಬೇಗೂರು ಠಾಣೆಯಲ್ಲಿ ಮುಖ್ಯಪೇದೆಯಾಗಿ ಸೇವೆ ಸಲ್ಲಿಸುತ್ತಿದ್ದ ಮೃತರನ್ನು ಇತ್ತೀಚೆಗೆ ಕಬ್ಬಹಳ್ಳಿ ಉಪ ಠಾಣೆಗೆ ನಿಯೋಜಿಸಲಾಗಿತ್ತು. ಗುರುವಾರ ಎದೆನೋವು ಕಾಣಿಸಿಕೊಂಡ ಕೂಡಲೇ ಗ್ರಾಮದ ಸಮುದಾಯ ಆರೋಗ್ಯಕೇಂದ್ರಕ್ಕೆ ಕರೆದೊಯ್ಯಲಾಯಿತು. ಎದೆನೋವು ತೀವ್ರವಾಗಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದೊಯ್ಯುವಾಗ ಮಾರ್ಗದಲ್ಲಿ ನಿಧನರಾದರು. ಮಧ್ಯಾಹ್ನ ಸ್ವಗ್ರಾಮಕ್ಕೆ ಮೃತದೇಹವನ್ನು ಕೊಂಡೊಯ್ಯಲಾಯಿತು.

ಸ್ಥಳಕ್ಕೆ ಎಸ್.ಪಿ. ಪದ್ಮಿನಿ ಸಾಹೂ, ಅಡಿಷನಲ್ ಎಸ್.ಪಿ. ಉದೇಶ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಸರ್ಕಲ್ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಧೂಳಶೆಟ್ಟಿ ಭೇಟಿ ನೀಡಿ ಅಂತಿಮ ದರ್ಶನ ಪಡೆದರು. ಅವಿವಾಹಿತರಾಗಿದ್ದ ಮೃತರಿಗೆ ತಾಯಿ ಪುಟ್ಟಸಿದ್ದಮ್ಮ ಹಾಗೂ ಸಹೋದರ ಇದ್ದಾರೆ. ಸ್ವಗ್ರಾಮ ಚೌಡಹಳ್ಳಿಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ದೇಶದ 25 ಹೈಕೋರ್ಟ್‌ಗಳಲ್ಲಿ ಸುಮಾರು 60 ಲಕ್ಷ, ಸುಪ್ರೀಂಕೋರ್ಟ್‌ನಲ್ಲಿ 69 ಸಾವಿರ ಪ್ರಕರಣ ಬಾಕಿ

ನವದೆಹಲಿ, ಫೆ.9– ಸುಪ್ರೀಂಕೋರ್ಟ್‌ನಲ್ಲಿ ಸುಮಾರು 69,000 ಕೇಸ್‌ಗಳು ಬಾಕಿಯಿದ್ದರೆ, ದೇಶದ 25 ಹೈಕೋರ್ಟ್‌ಗಳಲ್ಲಿ 60 ಲಕ್ಷ ಪ್ರಕರಣಗಳು ಇತ್ಯರ್ಥವಾಗಬೇಕಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ರಾಜ್ಯಸಭೆಗೆ ಮಾಹಿತಿ ನೀಡಿದೆ. ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿನ ವಿವರಗಳನ್ನು ಉಲ್ಲೇಖಿಸಿ, ಫೆಬ್ರವರಿ 1ರವರೆಗೂ ಸುಪ್ರೀಂ ಕೋರ್ಟ್‌ನಲ್ಲಿ ಸುಮಾರು 69, 511 ಕೇಸ್‌ಗಳು ಬಾಕಿ ಇರುವುದಾಗಿ ಕಾನೂನು ಸಚಿವ ಕಿರಣ್ ರಿಜಿಜು ಲಿಖಿತ ರೂಪದಲ್ಲಿ ಉತ್ತರ ನೀಡಿದ್ದಾರೆ. ಫೆಬ್ರವರಿ 1, 2023ರಂದು ರಾಷ್ಟ್ರೀಯ ನ್ಯಾಯಾಂಗ ಮಾಹಿತಿ ಗ್ರಿಡ್ (ಎನ್ ಜೆಡಿಜಿ)ಯಲ್ಲಿ ಲಭ್ಯವಾದ ಮಾಹಿತಿ ಪ್ರಕಾರ, ದೇಶಾದ್ಯಂತ ಹೈಕೋರ್ಟ್‌ಗಳಲ್ಲಿ 59, 87,477 ಕೇಸ್‌ಗಳು ಬಾಕಿಯಿವೆ ಎಂದು ಅವರು ತಿಳಿಸಿದರು.

ಒಂದನೇ ಪುಟದಿಂದ

ಕೇಂದ್ರಕ್ಕೆ ಶಿಫಾರಸು

ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಒದಗಿಸಲು 26 ಕೋಟಿ ರೂ. ವೆಚ್ಚದ ಯೋಜನೆಗೂ ಸಂಪುಟ ಒಪ್ಪಿಗೆ ನೀಡಿದ್ದು, ಇದರಲ್ಲಿ ಕೇಂದ್ರ ಸರ್ಕಾರ 14.5 ಕೋಟಿ ರೂ. ಹಾಗೂ ರಾಜ್ಯ ಸರ್ಕಾರ 11.5 ಕೋಟಿ ರೂ. ಅನುದಾನ ಭರಿಸಲಿದೆ ಎಂದು ತಿಳಿಸಿದರು.

ಕೆಪಿಎಸ್‌ಸಿ ಸದಸ್ಯತ್ವ ಭರ್ತಿ: ಲೋಕಸೇವಾ ಆಯೋಗದಲ್ಲಿ ಖಾಲಿ ಇರುವ ಒಂದು ಸದಸ್ಯ ಸ್ಥಾನವನ್ನು ಭರ್ತಿ ಮಾಡುವ ಅಧಿಕಾರವನ್ನು ಸಂಪುಟ ಸಭೆ ಮುಖ್ಯಮಂತ್ರಿಗಳಿಗೆ ನೀಡಿದೆ ಎಂದು ಅವರು ತಿಳಿಸಿದರು. ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ರಾಮನಗರದ 15 ಗ್ರಾಮಗಳಿಗೆ ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಒದಗಿಸಲು 28 ಕೋಟಿ ರೂ. ಒದಗಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದರು. ಉತ್ತರ ಕನ್ನಡದ ಯಲ್ಲಾಪುರ ಹೋಬಳಿಯಲ್ಲಿ ಬುಡಕಟ್ಟು ಜನರಿಗೆ ವನವಾಸಿ ಶಾಲೆಗಾಗಿ 1 ಎಕರೆ ಜಮೀನನ್ನು ಮಂಜೂರು ಮಾಡಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಅವರು ಹೇಳಿದರು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಬ್ಯಾನಾಪುರ ಸೇರಿದಂತೆ 12 ಗ್ರಾಮಗಳಿಗೆ ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಒದಗಿಸುವ 32 ಕೋಟಿ ರೂ. ವೆಚ್ಚದ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದ್ದು, ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ 16 ಕೋಟಿ ರೂ. ವೆಚ್ಚ ಭರಿಸಲಿವೆ ಎಂದರು.

ಕಲಬುರಗಿಯಲ್ಲಿ ಪಿಪಿ ಮಾದರಿಯಲ್ಲಿ ಬಸ್ ಸ್ಟ್ಯಾಂಡ್ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಅವರು ಹೇಳಿದರು.

ಹಾವೇರಿ ಜಿಲ್ಲೆಯ ಹಿರೇಕೆರೂರಿನ ಸರ್ವಜ್ಞ ಪ್ರಾಧಿಕಾರದ ವತಿಯಿಂದ ಹಾವೇರಿ, ಹಿರೇಕೆರೂರು, ಮಾಸೂರು, ಅಬಲೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 25 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ ಎಂದು ಹೇಳಿದರು. ಗದಗ್ ಜಿಲ್ಲೆಯಲ್ಲಿ ವೀರರಾಣಿ ಚನ್ನಮ್ಮ ಹೆಸರಿನ ಸಮುದಾಯ ಭವನ ನಿರ್ಮಾಣಕ್ಕೆ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ನರಗುಂದ ಇವರಿಗೆ ಎರಡು ಎಕರೆ ಜಮೀನು ಮಂಜೂರು ಮಾಡುವ ನಿರ್ಧಾರವನ್ನು ಸಚಿವ ಸಂಪುಟ ಕೈಗೊಂಡಿದೆ ಎಂದರು.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ನಗರ ಸೇರಿದಂತೆ 363 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ 350 ಕೋಟಿ ರೂ. ವೆಚ್ಚದ ಯೋಜನೆಗೂ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದರು. ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕು ಆಸ್ಪತ್ರೆಯನ್ನು 100 ಹಾಸಿಗೆಯಿಂದ 200 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲು ಸಂಪುಟ ಒಪ್ಪಿಗೆ ನೀಡಿದ್ದು, ಇದಕ್ಕೆ 23 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವ ತೀರ್ಮಾನವನ್ನು ಸಂಪುಟ ಕೈಗೊಂಡಿದೆ ಎಂದರು.

ಬೆಂಗಳೂರಿನ ಗೋವಿಂದರಾಜನಗರ ಕ್ಷೇತ್ರದಲ್ಲಿ ನಿರ್ಮಾಣವಾಗುತ್ತಿರುವ 300 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಉಪಕರಣಗಳನ್ನು ಖರೀದಿಸಲು 24 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಸಂಪುಟ ಒಪ್ಪಿಗೆ ನೀಡಿದೆ ಎಂದರು.

ಬೆಂಗಳೂರಿನ ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಟೋಲ್ ಘಟಕವನ್ನು ಒಡೆದು ಹಾಕಿರುವ ಬಗ್ಗೆ ತನಿಖೆ ನಡೆಸಲು ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ಈ ಬಗ್ಗೆ ಸುಪ್ರೀಂಕೋರ್ಟ್‌ನ ವಿಚಾರಣೆಗಾಗಿ 54.4 ಕೋಟಿ ರೂ. ಠೇವಣಿ ಇಡಲು ಸಂಪುಟ ಒಪ್ಪಿಗೆ ನೀಡಿದೆ ಎಂದರು. ರಾಯಚೂರಿನ ಹಗರಿಬೊಮ್ಮನಹಳ್ಳಿಯಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ಕೃಷಿ ಕಾಲೇಜು ಸ್ಥಾಪಿಸಲು ಸಂಪುಟ ಅನುಮೋದನೆ ನೀಡಿದೆ ಎಂದು ಅವರು ಹೇಳಿದರು. ರಾಜ್ಯದಲ್ಲೇ ಪ್ರಥಮ ಎನ್ನುವಂತೆ ಸೊರಬ ತಾಲೂಕಿನಲ್ಲಿರುವ ಎಲ್ಲ ಸರ್ಕಾರಿ ಕಚೇರಿಗಳನ್ನು ಒಂದೇ ಸೂರಿನಡಿ ತರಲು 18 ಎಕರೆ ಜಾಗದಲ್ಲಿ ಕಟ್ಟಡ ನಿರ್ಮಿಸುವ 49.66 ಕೋಟಿ ರೂ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದೆ. ಈ ಕಟ್ಟಡ ನಿರ್ಮಾಣದಲ್ಲಿ ತಾಲೂಕಿನ ಎಲ್ಲ ಸರ್ಕಾರಿ ಕಚೇರಿಗಳೂ ಒಂದೇ ಸೂರಿನಡಿ ಕಾರ್ಯನಿರ್ವಹಿಸಲು ಅನುಕೂಲವಾಗುತ್ತದೆ ಎಂದರು.ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಸರ್ಕಾರಿ ಟೂಲ್ ರೂಂ ಸ್ಥಾಪಿಸುವ 73.75 ಕೋಟಿ ರೂ. ಯೋಜನೆಗೂ ಸಂಪುಟ ಒಪ್ಪಿಗೆ ನೀಡಿದೆ. ಹಾಗೆಯೇ ನೆಲಗಾಳದಲ್ಲಿರುವ ಟೂಲ್ ರೂಂನ್ನು 37.55 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸುವ ಯೋಜನೆಗೂ ಸಂಪುಟ ಒಪ್ಪಿಗೆ ನೀಡಿದೆ ಎಂದರು.

ನನ್ನನ್ನು ಬಿಡುತ್ತಾರೆಯೇ

ದೇವಾಲಯಗಳ ಮೇಲೆ ಪೇಶ್ವೆಗಳಿಂದ ಪೈಶಾಚಿಕ ದಾಳಿ ನಡೆದಿತ್ತು. ಇದು ಇತಿಹಾಸ. ಈ ಇತಿಹಾಸವನ್ನು ತಿರುಚಿ ಹೇಳುವ ಅಗತ್ಯ ನನಗಿಲ್ಲ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.


ನಾನು ಹೇಳಿದ್ದೇ ಒಂದು, ಕೆಲವರು ತಿರುಚಿ ಅಪಪ್ರಚಾರ ನಡೆಸುತ್ತಿರುವುದೇ ಇನ್ನೊಂದು. ಈ ಒಂದು ಇನ್ನೊಂದರ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ಸತ್ಯಕ್ಕೂ ಸುಳ್ಳಿಗೂ ಇರುವಷ್ಟೇ ದೂರವಿದೆ. ಪಾಪ.. ಕೆಲವರಿಗೆ ತಿರುಚುವುದೇ ಕೆಲಸ, ಅದೇ ಅವರಿಗೆ ಸರ್ವಸ್ವ, ನಾನು ಏನು ಮಾಡಲಿ. ಸತ್ಯ ಹೇಳಿದ್ದೇನೆ, ಚರ್ಚೆಯಾಗಲಿ ಎಂದು ಅವರು ಹೇಳಿದ್ದಾರೆ. ಶಿವಾಜಿ ಮಹಾ ರಾಜರು, ಜಗಜ್ಯೋತಿ ಬಸ ವೇಶ್ವರರು, ಗೌತಮ ಬುದ್ಧ, ಮಹಾತ್ಮ ಗಾಂಧೀಜಿ ಮತ್ತು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನೇ ಬಿಡದವರು ಇವರು. ಇನ್ನು ನನ್ನನ್ನು ಬಿಟ್ಟಾರೆಯೇ. ಕೀಳು ನಿಂದನೆ, ಚಿತಾವಣೆಯಷ್ಟೇ ಇವರ ಆಯುಧಗಳು. ನಿಂದನೆ ಮತ್ತು ನಿಂಧಕರ ಬಗ್ಗೆ ನಾನು ಅಂಜುವ ಪೈಕಿ ಅಲ್ಲ ನೇರ ಮಾತುಗಳಲ್ಲಿ ಹೇಳಿದ್ದಾರೆ. ನಾನು ಎತ್ತಿದ ವಿಚಾರಕ್ಕೆ ಸಂಬಂಧವೇ ಇಲ್ಲದಂತೆ ಇವರು ಅವೇಶಭರಿತರಾಗಿ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಆದರೆ, ವಿಧಾನಸೌಧದಲ್ಲಿ ಬಿಜೆಪಿಯು ಪೇಶ್ವೆಗಳ ವಂಶಾವಳಿಯ ನಾಯಕನ ಪ್ರತಿಷ್ಠಾಪನೆ ಮಾಡಲು ಹೊರಟಿರುವ ನನ್ನ ಪ್ರಶ್ನೆಗೆ ಉತ್ತರ ಕೊಡುವ ದಮ್ಮು ತಾಕತ್ತು ತೋರಿಸುತ್ತಿಲ್ಲ, ಯಾಕೆ. ಇಂಥ ವಿಕೃತಿಗಳಿಗೆ ನಾನು ಸೊಪ್ಪು ಹಾಕುವುದಿಲ್ಲ ಎಂದಿದ್ದಾರೆ. ಯಾರೋ ಮಾಡಿದ ಆದೇಶ, ಕಟ್ಟಪ್ಪಣೆಗೆ ಅಂಜಿ ನನ್ನ ಬಗ್ಗೆ ಬಿಜೆಪಿ ನಾಯಕರು ಸರಣಿ ಹೇಳಿಕೆ ನೀಡಬಹುದು. ಜಾಲತಾಣ ಗಳಲ್ಲಿ ಅಪಪ್ರಚಾರ ಮಾಡಿಸಬಹುದು. ಆದರೆ, ಅವರೆಲ್ಲ ತಮ್ಮ ಆತ್ಮಸಾಕ್ಷಿಯನ್ನು ಒಮ್ಮೆ ಪ್ರಶ್ನೆ ಮಾಡಿಕೊಳ್ಳಲಿ. ಪೇಶ್ವೆ ವಂಶಾವಳಿ ನಾಯಕನ ಸರಣಿ ಹುನ್ನಾರಗಳ ಬಗ್ಗೆ ಮಾತನಾಡುವ ಧೈರ್ಯ ಅವರು ತೋರುತ್ತಾರೆಯೇ ಎಂದು ಮಾಜಿ ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ. ನನಗೆ ಸೋಲುವ ಭಯವಂತೆ, ಹತಾಶೆಯಂತೆ ಎಂದು ಬೊಗಳೆ ಬಿಟ್ಟುಕೊಂಡು ಕೇಕೆ ಹಾಕಿದರೆ ಜನ ನಂಬುವುದಿಲ್ಲ. ಅವರಿಗೂ ಗರ್ಭಗುಡಿಯಲ್ಲಿ ಏನು ನಡೆಯುತ್ತಿದೆ ಎಂಬುದು ಚೆನ್ನಾಗಿ ಗೊತ್ತು. ಸತ್ಯ ಸಾಯುವುದೂ ಇಲ್ಲ ಅಲ್ಲವೇ ಎಂದು ಕೇಳಿರುವ ಅವರು, ಜಗಜ್ಯೋತಿ ಬಸವೇಶ್ವ ರರು, ಗೌತಮ ಬುದ್ಧ, ಮಹಾತ್ಮ ಗಾಂಧೀಜಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿ ದ್ದನ್ನೇ ನಾನು ಹೇಳಿದ್ದೇನೆ. ಇನ್ನು, ಬ್ರಾಹ್ಮಣ ಸಮೂಹವನ್ನು ನಿಂದಿಸುವ ಪ್ರಶ್ನೆ ಎಲ್ಲಿ ಬಂತು ನಾನು ನಿಂದಿಸಿಲ್ಲ, ನಿಂದಿಸುವುದೂ ಇಲ್ಲ. ಮತ್ತೆ ಮತ್ತೆ ಸ್ಪಷ್ಟನೆ ಅನಗತ್ಯ ಎಂದು ತಿಳಿಸಿದ್ದಾರೆ.

ರಾಜಕೀಯ ಜೀವನ ಉಳಿಯಿತು

ಜೊತೆ ಕೈಜೋಡಿಸಿ ಅಂದು 20–20 ಸರ್ಕಾರ ರಚಿಸಿದೆವು, ನಾನು ಸಹಕಾರ ನೀಡಿರದಿದ್ದರೆ ಅವರು ರಾಜಕೀಯವಾಗಿ ನಿರ್ನಾಮ ಆಗುತ್ತಿದ್ದರು. ವಿಜಯೇಂದ್ರ ಆಗ ಎಲ್ಲಿದ್ದರು, ಇವರು ನಿನ್ನೆ ಮೊನ್ನೆ ಬಂದವರು ಮಾತನಾಡುತ್ತಾರೆ ಎಳಸುಗಳು ಎಂದರು.

ಸಿದ್ದಲಿಂಗಯ್ಯ ಬದುಕಿದ್ದಾರಲ್ಲವೇ, ಅಂದು ಸಿದ್ದಲಿಂಗಯ್ಯ ಎನ್ನುವವರು ನನಗೆ ಚೀಟಿ ತಂದುಕೊಟ್ಟರು, ಅಂದು ತಮ್ಮನ್ನು ಮಂತ್ರಿಯಾದರೂ ಮಾಡುವಂತೆ ಯಡಿಯೂರಪ್ಪ ಸಿದ್ದಲಿಂಗಯ್ಯ ಅವರ ಮೂಲಕ ಚೀಟಿಯಲ್ಲಿ ಬರೆದು ಕಳುಹಿಸಿಕೊಟ್ಟಿದ್ದರು. ಆಗ ನಾನು ನಿಮ್ಮ ನಾಯಕತ್ವ ಇರಲಿ ಎಂದು ಸಮ್ಮಿಶ್ರ ಸರ್ಕಾರ ಮಾಡಲು ಒಪ್ಪಿದ್ದೆ. ವೀರಶೈವರಿಗೆ ಏನು ಮಾಡಿದೆ ಎಂದು ವಿಜಯೇಂದ್ರ ಅವರಿಗೆ ಗೊತ್ತಿಲ್ಲ ಎಂದು ತಿರುಗೇಟು ಕೊಟ್ಟರು. ನಮ್ಮ ತಂದೆ ದೇವೇಗೌಡರು ವಿಧಾನಸಭೆ ವಿಸರ್ಜನೆ ಮಾಡಲು ಹೋಗಿದ್ದರು. ಆಗ ಯಡಿಯೂರಪ್ಪ ಜೊತೆ ಸೇರಿ ಸರ್ಕಾರ ಮಾಡಿದ್ದೆವು. ಅಧಿಕಾರದಲ್ಲಿ ಇದ್ದ ವೇಳೆ ಬಿಜೆಪಿಗರನ್ನು ಗೌರವದಿಂದ ಕಂಡಿದ್ದೇನೆ. ಬಿಜೆಪಿ ಬೆಳವಣಿಗೆಗೆ ಇದೇ ಸಹಕಾರಿ ಆಗಿತ್ತು. ಪೇಶ್ವೆ ವಂಶಸ್ಥರು ಅವರಿಗೆ ಅಧಿಕಾರವನ್ನು ಕೊಡಲು ಬಿಡಲಿಲ್ಲ. ಅವರೇ ಯಡಿಯೂರಪ್ಪ ಸರ್ಕಾರವನ್ನು ತೆಗೆದರು. ಎರಡನೇ ಬಾರಿ ಕಷ್ಟ ಪಟ್ಟು ಯಡಿಯೂರಪ್ಪ ಸಿಎಂ ಆದರು. ಅವರನ್ನು ಹೇಗೆ ನಡೆಸಿಕೊಂಡಿದ್ದಾರೆ ಎಂದು ಎಲ್ಲರಿಗೂ ತಿಳಿದಿದೆ. ನಾನು ವೀರಶೈವ, ದಲಿತ ಎಲ್ಲಾ ಸಮುದಾಯಕ್ಕೂ ಗೌರವ ನೀಡಿದ್ದೇನೆ ಎಂದರು. ಇನ್ನು ತಮ್ಮ ಮತ್ತು ತಮ್ಮ ಕುಟುಂಬದವರ ಮೇಲೆ ವಂಶಾಡಳಿತ ರಾಜಕೀಯ, ಕುಟುಂಬ ರಾಜಕಾರಣದ ಬಗ್ಗೆ ಪದೇ ಪದೆ ಮಾಡುತ್ತಿರುವ ಟೀಕೆಗಳಿಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ವಂಶಾಡಳಿತ ಬಿಜೆಪಿ, ಕಾಂಗ್ರೆಸ್‌ನಲ್ಲಿ ಇಲ್ಲವೇ. ನನ್ನ ಕುಟುಂಬದ ಮೇಲೆ ಟಾರ್ಗೆಟ್ ಮಾಡಿದ್ದಾರೆ. ಜನರ ಮೇಲೆ ನಮ್ಮ ಕುಟುಂಬದ ಪ್ರೀತಿಯನ್ನು ನೋಡಿ ಟಾರ್ಗೆಟ್ ಮಾಡ್ತಾ ಇದ್ದಾರೆ ಎಂದರು. ಗಣೇಶನ ಆಶೀರ್ವಾದ, ಆತ್ಮಲಿಂಗದ ಪ್ರಸಾದವೂ ನನಗೆ ಸಿಕ್ಕಿದೆ. ಅಲ್ಲದೇ ಬೋಲೋ ಶಂಕರ ದೇವರ ಪ್ರಸಾದ ಕೂಡ ಸಿಕ್ಕಿದೆ. ದೈವ ಅನುಗ್ರಹ ಜನತಾದಳದ ಮೇಲೆ ಇದೆ. ನಾಡಿನ ಜನತೆಗೆ ದೇವರ ಆಶೀರ್ವಾದ ಇದೆ. ಜೆಡಿಎಸ್ ಅಧಿಕಾರಕ್ಕೆ ಬಂದು ನಾಡಿನ ಜನರ ಕ್ಷೇಮ ಕಾಪಾಡಲು ಆದ್ಯತೆ ನೀಡುತ್ತೇವೆ ಎಂದರು.

ವಾರದಲ್ಲಿ ಕಾರ್ಯಾಚರಣೆಗಿಳಿಯಲಿದೆ ಮೈಸೂರು ವಿಭಾಗದ ಚಿರತೆ ಕಾರ್ಯಪಡೆ



● ಅಗತ್ಯ ಸಿಬ್ಬಂದಿ ನಿಯೋಜನೆ ಅಂತಿಮ ಹಂತ ● ಚಿರತೆ ಹಾವಳಿ ಇರುವ ಪ್ರದೇಶದಲ್ಲಿ ಕ್ಷಿಪ್ರ ಕಾರ್ಯಾಚರಣೆ

ಮೈಸೂರು, ಫೆ.9(ಎಂಟಿವೈ)– ಚಿರತೆ ಹಾವಳಿ ನಿಯಂತ್ರಿಸಲು ಅಸ್ತಿತ್ವಕ್ಕೆ ತರಲಾಗಿರುವ ಚಿರತೆ ಕಾರ್ಯಪಡೆಗೆ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸುವ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿದ್ದು, ಮುಂದಿನ ಒಂದು ವಾರದಲ್ಲಿ ಕಾರ್ಯಪಡೆ ಕಾರ್ಯಾರಂಭ ಮಾಡಲಿದೆ ಎಂದು ಮೈಸೂರು ಡಿಸಿಎಫ್ ಡಾ.ಕೆ.ಎನ್.ಬಸವರಾಜು ತಿಳಿಸಿದ್ದಾರೆ.

ಮೈಸೂರಿನ ಅಶೋಕಪುರಂನ ಅರಣ್ಯ ಭವನದಲ್ಲಿ 'ಮಾನವ–ವನ್ಯಜೀವಿ' ಸಂಘರ್ಷ ತಡೆಗೆ ಕೈಗೊಂಡಿರುವ ಕ್ರಮ ಹಾಗೂ ಜನರಲ್ಲಿರುವ ತಪ್ಪು ಕಲ್ಪನೆ ಕುರಿತಂತೆ ಪ್ರಾತ್ಯಕ್ಷಿಕೆ ನೀಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಸರ್ಕಾರ ಇದೇ ಮೊದಲ ಬಾರಿ ಚಿರತೆ ಕಾರ್ಯಪಡೆ (ಲೆಪರ್ಡ್ ಟಾಸ್ಕ್‌ಫೋರ್ಸ್) ರಚಿಸಿತ್ತು. ಈ ಪಡೆಗೆ ಕಾಯಕಲ್ಪ ನೀಡಲು ಕ್ರಮ ಕೈಗೊಳ್ಳಲಾಗಿದೆ. ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ನೇತೃತ್ವದಲ್ಲಿ ರಚನೆಗೊಂಡಿರುವ ಈ ವಿಶೇಷ ಕಾರ್ಯಪಡೆಯಲ್ಲಿ ಓರ್ವ ಎಸಿಎಫ್, ಒಬ್ಬರು ಆರ್‌ಎಫ್‌ಓ, 4 ಡಿಆರ್‌ಎಫ್‌ಓ, 8 ಗಸ್ತು ಅರಣ್ಯ ಪಾಲಕರು, 40 ಮಂದಿ ಟಾಸ್ಕ್ ಫೋರ್ಸ್ ಸಹಾಯಕರು, 5 ವಾಹನ ಚಾಲಕರು ಸೇರಿದಂತೆ 58 ಮಂದಿ ಈ ಟಾಸ್ಕ್ ಫೋರ್ಸ್‌ನಲ್ಲಿದ್ದಾರೆ. ಈ ಕಾರ್ಯಪಡೆಗೆ ಹೊರಗುತ್ತಿಗೆ ಆಧಾರದಲ್ಲಿ 40 ಮಂದಿಯನ್ನು ನಿಯೋಜಿಸಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿದೆ. ಆದಿವಾಸಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಈ ವಿಶೇಷ ಪಡೆ ಚಿರತೆ ಉಪಟಳ ಹೆಚ್ಚಾಗಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತದೆ ಕೇಂದ್ರೀಕೃತ ಪ್ರದೇಶದಲ್ಲಿ ಈ ಪಡೆ ಬೀಡು ಬಿಡಲಿದ್ದು, ದೂರು ಬಂದ ಸ್ಥಳಕ್ಕೆ ತುರ್ತಾಗಿ ಸಾಗಲಿದೆ. ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನಲ್ಲಿ 28 ಗ್ರಾಮಗಳಲ್ಲಿ ಚಿರತೆ ಹಾವಳಿ ಇರುವುದನ್ನು ಗುರುತಿಸಲಾಗಿದೆ. ಚಿರತೆ ಟಾಸ್ಕ್‌ಫೋರ್ಸ್ ತಂಡದ ಬೇಸ್ ಕ್ಯಾಂಪ್ ಮೈಸೂರು ಅರಣ್ಯ ವೃತ್ತ ವ್ಯಾಪ್ತಿಯ ತಿ.ನರಸೀಪುರ, ಮೈಸೂರು, ಕೆ.ಆರ್.ಪೇಟೆ ಮತ್ತು ಮಂಡ್ಯ ತಾಲೂಕುಗಳಲ್ಲಿ ಇರಲಿದೆ. ಪ್ರತಿ ತಂಡವೂ ಚಿರತೆ ಹಾವಳಿ ಇರುವ ಗ್ರಾಮಗಳಲ್ಲಿ ಗಸ್ತು ತಿರುಗುವುದು. ಜನವಸತಿ, ಕಬ್ಬು ಬೆಳೆ ಇರುವ ಪ್ರದೇಶಗಳಲ್ಲಿ ಚಿರತೆ ಇರುವಿಕೆ ಪತ್ತೆ ಹಚ್ಚಿ ಮುಂದಿನ ಕ್ರಮಕೈಗೊಳ್ಳಲಿದೆ ಎಂದರು.

65 ಚಿರತೆ ಸೆರೆ

ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 65 ಚಿರತೆಗಳನ್ನು ಸೆರೆ ಹಿಡಿಯಲಾಗಿದೆ. ಜನವರಿ ತಿಂಗಳಲ್ಲಿ 4 ಚಿರತೆ ಸೆರೆ ಹಿಡಿದು ಚಿಪ್ ಅಳವಡಿಸಿ, ಅದರ ಕಿವಿಯ ತುದಿಯನ್ನು 'ವಿ' ಶೇಪ್‌ನಲ್ಲಿ ಕತ್ತರಿಸಿ ಕಾಡಿಗೆ ಬಿಡಲಾಗಿದೆ. ಇದರಿಂದ ಕಾಡಿಗೆ ಬಿಟ್ಟ ಚಿರತೆ ಮತ್ತೆ ಗ್ರಾಮಗಳಿಗೆ ಬರುತ್ತಿವೆಯೇ ಎಂದು ಪರಿಶೀಲಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

30 ಬೋನ್ ಖರೀದಿಸಲು ಕ್ರಮ: ಮೈಸೂರು ಜಿಲ್ಲೆಯ ಹಲವೆಡೆ ಚಿರತೆ ಉಪಟಳದ ದೂರು ಕೇಳಿ ಬಂದ ಕೂಡಲೇ ಅರಣ್ಯ ಇಲಾಖೆ ಸ್ಪಂದಿಸುತ್ತಿದೆ. ಪ್ರಸ್ತುತ ಮೈಸೂರು ವಿಭಾಗದಲ್ಲಿ 20 ಬೋನ್‌ಗಳಿವೆ. ದೂರು ಕೇಳಿ ಬಂದ ಸ್ಥಳದಲ್ಲಿ ಬೋನ್ ಕೊಂಡೊಯ್ದು ಇಡಲಾಗುತ್ತಿದೆ. ಕೆಲವು ಸಂದರ್ಭದಲ್ಲಿ ಚಿರತೆ ಇರುವುದಾಗಿ ಭಾವಿಸಿ, ಸುಳ್ಳು ದೂರುಗಳು ವ್ಯಕ್ತವಾಗಿರುತ್ತದೆ. ಆದರೂ ಆ ದೂರುಗಳನ್ನು ನಾವು ಗಂಭೀರವಾಗಿ ಪರಿಗಣಿಸುತ್ತಿದ್ದೇವೆ. ಒಂದು ಸ್ಥಳದಲ್ಲಿ ಬೋನ್ ಇಟ್ಟು 3–4 ದಿನವಾದರೂ ಚಿರತೆ ಸುಳಿವು ದೊರೆಯದಿದ್ದರೂ, ಬೋನ್ ವಾಪಸ್ ತೆಗೆದುಕೊಂಡು ಹೋಗಲು ಜನ ಬಿಡುವುದಿಲ್ಲ. ಇದರಿಂದ ಕೆಲವೆಡೆ ದೂರು ಸಲ್ಲಿಕೆಯಾದ ಸ್ಥಳಕ್ಕೆ ತುರ್ತಾಗಿ ಬೋನ್ ಕೊಂಡೊಯ್ಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹೊಸದಾಗಿ 30 ಬೋನ್ ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ. ತಿ.ನರಸೀಪುರದಲ್ಲಿ ಜನರ ಮೇಲೆ ದಾಳಿ ನಡೆಸುತ್ತಿದ್ದ ಚಿರತೆ ಸೆರೆಗೆ ಬಳಸಿ ತುಮಕೂರಿನಿಂದ ತಂದಿದ್ದ ದೊಡ್ಡ ಬೋನ್‌ನಂತೆ ಎರಡು ದೊಡ್ಡ ಬೋನ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಚಿರತೆ ಸಂರಕ್ಷಣಾ ಕೇಂದ್ರವನ್ನು ತೆರೆಯುವ ಬಗ್ಗೆ ನಾಲ್ಕು ರಾಜ್ಯಗಳ ತಜ್ಞರು ಬಂದು ಪರಿಶೀಲಿಸಿ ಹೋಗಿದ್ದಾರೆ ಈ ಬಗ್ಗೆ ಏನಾದರೂ ಬೆಳವಣಿಗೆ ನಡೆದಲ್ಲಿ ಹಿರಿಯ ಅಧಿಕಾರಿಗಳು ಮುಂದಿನ ದಿನಗಳಲ್ಲಿ ಮಾಹಿತಿ ಒದಗಿಸಲಿದ್ದಾರೆ ಎಂದು ವಿವರಿಸಿದರು.

ಹಾಜರಾತಿ ಕೊರತೆ ಇರುವ ದ್ವಿತೀಯ ಪಿಯುಸಿ

ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿ

ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮನವಿ



ಮೈಸೂರು,ಫೆ.9(ಪಿಎಂ)– ಪ್ರಸಕ್ತ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಹಾಜರಾತಿ ಕೊರತೆ ಇರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಮಾನವೀಯತೆ ದೃಷ್ಟಿಯಿಂದ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕೆಂದು ಸರ್ಕಾರಕ್ಕೆ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರೀಕ್ಷೆ ಬರೆಯಲು ಸರ್ಕಾರ ಪ್ರತಿ ವಿಷಯದಲ್ಲಿ ಶೇ.75ರಷ್ಟು ಹಾಜರಾತಿ ಕಡ್ಡಾಯಗೊಳಿಸಿದೆ. ಆದರೆ ಕೆಲ ಖಾಸಗಿ ಕಾಲೇಜುಗಳು ಇದನ್ನೇ ನೆಪ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಪರೀಕ್ಷೆ ನಿರಾಕರಿಸಿ, ಮುಂದಿನ ಶೈಕ್ಷಣಿಕ ಸಾಲಿಗೆ ಮರು ಪ್ರವೇಶಾತಿ ಪಡೆಯುವಂತೆ ಪೋಷಕರಿಗೆ ಒತ್ತಡ ಹಾಕುತ್ತಿವೆ. ಕನಿಷ್ಠ ಒಂದೂವರೆ ಲಕ್ಷ ಶುಲ್ಕ ಪಾವತಿಸಿ ಮತ್ತೆ ಅದೇ ತರಗತಿಯಲ್ಲಿ ಓದುವುದು ವಿದ್ಯಾರ್ಥಿಗಳು, ಪೋಷಕರಿಗೆ ಹೊರೆಯಲಾಗಲಿದೆ. ಜೊತೆಗೆ ಈ ಕಾಲೇಜುಗಳು ಸರ್ಕಾರದ ನಿಯಮದಂತೆ ಹಾಜರಾತಿ ಕೊರತೆ ಬಗ್ಗೆ ಪೋಷಕರಿಗೆ ಮಾಹಿತಿ ನೀಡಿಲ್ಲ ಎಂದು ದೂರಿದರು.

ಹಾಜರಾತಿ ಕೊರತೆಯನ್ನು ವಿದ್ಯಾರ್ಥಿಗಳು, ಪೋಷಕರಿಗೆ ಕಳೆದ ಸೆ.16, ಡಿ.15 ಮತ್ತು ಈ ಜ.27ರಂದು ಪೋಷಕರ ಸಭೆ ಕರೆದು ಖುದ್ದಾಗಿ ಮಾಹಿತಿ ನೀಡಬೇಕೆಂದು ಸರ್ಕಾರ ಸುತ್ತೋಲೆ ಹೊರಡಿಸಿದೆ. ಆದರೆ ಬಹುತೇಕ ಕಾಲೇಜುಗಳು ಇದನ್ನು ಪಾಲಿಸಿಲ್ಲ. ಮೈಸೂರಿನ ವಿವಿಧ ಕಾಲೇಜುಗಳ ಸುಮಾರು 250 ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದ್ದು, ಈಗಾಗಲೇ ಪ್ರಾಯೋಗಿಕ ಪರೀಕ್ಷೆ ಬರೆಯಲು ಅವಕಾಶ ನೀಡಿಲ್ಲ ಎಂದರು.

ಇದು ರಾಜ್ಯಾದ್ಯಂತ ಎದುರಾಗಿರುವ ಸಮಸ್ಯೆ. ಖಾಸಗಿ ಕಾಲೇಜುಗಳು ಮರು ಪ್ರವೇಶಾತಿ ಮೂಲಕ ಶುಲ್ಕ ವಸೂಲಿ ಮಾಡಿಕೊಳ್ಳುವ ದಂಧೆಗೆ ಮುಂದಾಗಿವೆ. ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ ಈ ಸಾಲಿನಲ್ಲಿ ಮಾನವೀಯ ದೃಷ್ಟಿಯಿಂದ ಪರೀಕ್ಷೆ ನೀಡಬೇಕು. ಇಲ್ಲವಾದರೆ ಹೋರಾಟ ಅನಿವಾರ್ಯ ಎಂದು ಹೇಳಿದರು. ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಮುಖಂಡ ಲೋಕೇಶ್ ಮಾದಾಪುರ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಕುರಿತು ಮಂತ್ರಾಲಯದ ಶ್ರೀಗಳ ಹೇಳಿಕೆ ಸರಿಯಲ್ಲ

ಮೈಸೂರು,ಫೆ.9(ಪಿಎಂ)– 'ಹಿಂದೂ ಧರ್ಮದ ವಿರೋಧಿಯಲ್ಲ. ಹಿಂದುತ್ವ ಒಪ್ಪುವುದಿಲ್ಲ' ಎಂಬ ಸಿದ್ದರಾಮಯ್ಯ ಹೇಳಿಕೆಯನ್ನು ಮಂತ್ರಾಲಯದ ಸುಬುದೇಂದ್ರ ತೀರ್ಥ ಶ್ರೀಗಳು ಅರ್ಥಹೀನ ಎಂದಿರುವುದು ಸರಿಯಲ್ಲ ಎಂದು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ಹೇಳಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಬುದೇಂದ್ರ ತೀರ್ಥ ಶ್ರೀಗಳು ಸಿದ್ದರಾಮಯ್ಯರ 'ಹಿಂದುತ್ವ ಒಪ್ಪಲ್ಲ' ಹೇಳಿಕೆ ಅರ್ಥಹೀನ ಎಂದಿದ್ದಾರೆ. ಆದರೆ ಸಿದ್ದರಾಮಯ್ಯನವರು ಹೇಳಿರುವುದು ಹಿಂದೂ ಧರ್ಮದಲ್ಲಿರುವ ಸಾಮಾಜಿಕ ಅಸಮಾನತೆ, ಜಾತಿ ಪದ್ಧತಿ, ಲಿಂಗ ತಾರತಮ್ಯ, ಅಸ್ಪೃಶ್ಯತೆ ಆಚರಣೆಗೆ ಉತ್ತೇಜನ ನೀಡುವ ಹಿಂದುತ್ವದ ಬಗ್ಗೆಯಾಗಿದೆ ಎಂದು ತಿಳಿಸಿದರು.

ಈ ಕಾರಣಕ್ಕೆ ನಾನು ಹಿಂದೂ ಧರ್ಮದವನು. ಆದರೆ ಹಿಂದುತ್ವವನ್ನು ವಿರೋಧಿಸುತ್ತೇನೆ ಎಂದು ಸಿದ್ದರಾಮಯ್ಯನವರು ಹೇಳಿದ್ದು, ಇದು ಸರಿಯಿದೆ. ಆರ್‌ಎಸ್‌ಎಸ್ ಹಾಗೂ ಬಿಜೆಪಿಯವರು ಹಿಂದುತ್ವದ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ. ಸುಬುದೇಂದ್ರ ತೀರ್ಥ ಶ್ರೀಗಳ ಮತ್ತು ಪೇಜಾವರ ಶ್ರೀಗಳ ಮಠಗಳಲ್ಲಿ ಬ್ರಾಹ್ಮಣ್ಯೇತರರಿಗೆ ಸಹಪಂಕ್ತಿ ಭೋಜನ ವ್ಯವಸ್ಥೆ ನಿರಾಕರಿಸಲಾಗಿದೆ. ಈ ಮೂಲಕ ಸಾಮಾಜಿಕ ಅಸಮಾನತೆಗೆ ಉತ್ತೇಜನ ನೀಡಲಾಗುತ್ತಿದೆ. ಇವರು ಏಕೆ ತಮ್ಮ ಮಠಗಳಲ್ಲಿ ಬ್ರಾಹ್ಮಣ್ಯೇತರರಿಗೆ ಸಹಪಂಕ್ತಿ ಭೋಜನಕ್ಕೆ ಅವಕಾಶ ನೀಡುವುದಿಲ್ಲ ಎಂದು ಪ್ರಶ್ನಿಸಿದರು.

ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಇಂದಿಗೂ ಅಸ್ಪೃಶ್ಯತೆ ಆಚರಣೆ ಜೀವಂತವಾಗಿದೆ. ಇವರು ಹೇಳುವ ಹಿಂದುತ್ವ ಸಮಾನತೆ ಸಮಾಜ ಒಪ್ಪುವುದಿಲ್ಲ. ಸಮಾನತೆ ನಿರಾಕರಿಸುವ ಹಿಂದುತ್ವ ವಿರೋಧಿಸುವುದಾಗಿ ಸಿದ್ದರಾಮಯ್ಯನವರು ಹೇಳಿದ್ದು, ಇದು ಸರಿಯಿದೆ ಎಂದರು. ಮುಖಂಡ ಜಿ.ಎಲ್.ಪ್ರವೀಣ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಳೆ ನೃತ್ಯ, ಗಾಯನ, ನಾಟಕ ಪ್ರದರ್ಶನದ 'ಭಾವ ಸಂಭ್ರಮ'

ಮೈಸೂರು,ಫೆ.9(ಪಿಎಂ)– ಲಯನ್ಸ್ ಕ್ಲಬ್ ಆಫ್ ಮೈಸೂರು ಬಾಂಧವ್ಯ (ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆ ಜಿಲ್ಲೆ–317ಎ) ವತಿಯಿಂದ ಸಮಾಜ ಸೇವಾ ಕಾರ್ಯದ ನಿಧಿ ಸಂಗ್ರಹಕ್ಕಾಗಿ ಫೆ.11ರಂದು 'ಭಾವ ಸಂಭ್ರಮ' ಶೀರ್ಷಿಕೆಯಡಿ ನೃತ್ಯ, ಗಾಯನ ಮತ್ತು ನಾಟಕ ಪ್ರದರ್ಶನ ಒಳಗೊಂಡ ಮನರಂಜನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕ್ಲಬ್‌ನ ನಿಧಿ ಸಂಗ್ರಹ ಸಮಿತಿ ಅಧ್ಯಕ್ಷ ಸಿದ್ಧಾರ್ಥ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಅಂದು ಸಂಜೆ 5.30ರಿಂದ 8.30ರವರೆಗೆ ಕಾರ್ಯಕ್ರಮ ನಡೆಯಲಿದೆ. ಮೊದಲಿಗೆ ನಿರಂತರ ನೃತಂ ನೃತ್ಯ ಶಾಲೆಯ ತಂಡ ನೃತ್ಯ ಸಾದರಪಡಿಸಲಿದೆ ಎಂದರು.

ಬಳಿಕ ಸರಸ್ವತಿಪುರಂನ ಜೆಎಸ್ಎಸ್ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರ ತಂಡ 'ಚಾಮ ಚೆಲುವೆ' ಹಾಸ್ಯ ನಾಟಕ ಪ್ರದರ್ಶನ ನೀಡಲಿದೆ. ನಂತರ ಗಾಯಕ ಹೇಮಚಂದ್ರ, ಜನಪ್ರಿಯ ಕನ್ನಡ ಮತ್ತು ಹಿಂದಿ ಗೀತೆಗಳನ್ನು ಸಾದರಪಡಿಸಲಿದ್ದಾರೆ. ಸಹಾಯಧನ ಸಂಗ್ರಹಿಸುವ ಹಿನ್ನೆಲೆಯಲ್ಲಿ ತಲಾ 250 ರೂ. ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಪ್ರಾಯೋಜಕತ್ವ ನೀಡುವ ಕಂಪನಿಗಳಿಂದ ಲಕ್ಕಿ ಡಿಪ್ ಮೂಲಕ ಪ್ರೇಕ್ಷಕರಿಗೆ ಬಹುಮಾನ ನೀಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಮೈಸೂರಿನ ಆರ್ಥಿಕವಾಗಿ ಹಿಂದುಳಿದವರು, ವಿಕಲಚೇತನರ ಶ್ರೇಯೋಭಿವೃದ್ಧಿಗೆ ಸಂಗ್ರಹಿಸಿದ ಹಣ ಬಳಸಲಾಗುವುದು. ಅಲ್ಲದೆ, ಮೈಸೂರಿನ ವಸಂತನಗರದ ಸರ್ಕಾರಿ ಶಾಲೆಗೆ ಮೂಲ ಸೌಲಭ್ಯ ಕಲ್ಪಿಸಲು, ಅಲ್ಲಿನ ವಿದ್ಯಾರ್ಥಿಗಳ ಸಮವಸ್ತ್ರ ಸೇರಿದಂತೆ ವಿವಿಧ ಸೌಲಭ್ಯ ಕಲ್ಪಿಸಲು ಸಂಗ್ರಹಿಸಿದ ಹಣ ಬಳಸಿಕೊಳ್ಳಲಾಗುವುದು. ಹೆಚ್ಚಿನ ವಿವರಗಳಿಗೆ ಮೊ.ಸಂ. 88616 77771 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು. ಲಯನ್ಸ್ ಕ್ಲಬ್ ಆಫ್ ಮೈಸೂರು ಬಾಂಧವ್ಯ ಅಧ್ಯಕ್ಷ ವಿಜಯಕುಮಾರ್, ನಿರ್ದೇಶಕರಾದ ಮೇರಿ ಡೋರ್ತಿ, ಲಖನ್ ನಾಯಕ್ ಗೋಷ್ಠಿಯಲ್ಲಿದ್ದರು.



ಮೈಸೂರಿನ ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಕುರುಬಾರಹಳ್ಳಿ ಪ್ರಕಾಶ್ ಅವರನ್ನು ಮೈಸೂರಿನ ಕನಕ ಗುರು ಪೀಠದ ಶ್ರೀ ಶಿವಾನಂದಪುರಿ ಶ್ರೀಗಳು ಅಭಿನಂದಿಸಿ ಆಶೀರ್ವದಿಸಿದರು. ಚಿತ್ರದಲ್ಲಿ ಮೈಸೂರು ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಅವರನ್ನು ಕಾಣಬಹುದು.

ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಸಮಾರೋಪ

ಮೈಸೂರು, ಫೆ9(ಆರ್‌ಕೆಬಿ)– ಮೈಸೂರಿನ ಸರಸ್ವತಿಪುರಂ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಎನ್‌ಎಸ್‌ಎಸ್ ಭವನ ಸಭಾಂಗಣದಲ್ಲಿ ಏಳು ದಿನಗಳ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಗುರುವಾರ ಸಮಾರೋಪಗೊಂಡಿತು. ಮೈಸೂರು ವಿಶ್ವ ವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಂಟಿಯಾಗಿ ಶಿಬಿರವನ್ನು ಆಯೋಜಿಸಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ರಾಷ್ಟ್ರೀಯ ಐಕ್ಯತೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಶಿಬಿರ ಯಶಸ್ವಿಯಾಗಿದೆ. ನಾವು ಭಾರತೀಯರು ಎಂಬ ಭಾವನೆ ಪ್ರತಿಯೊಬ್ಬ ಕನ್ನಡಿಗರಲ್ಲೂ ಇರಬೇಕು ಎಂದು ಹೇಳಿದರು.

ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ ಡಾ.ಎಂ.ಬಿ.ಸುರೇಶ, ಎಸ್‌ಎಸ್‌ಎಸ್– ಇಟಿಐ ಸಂಯೋಜಕ ಪ್ರೊ.ಬಿ.ಚಂದ್ರಶೇಖರ್, ಕನ್ನಡ ಪ್ರಾಧ್ಯಾಪಕ ಸುರೇಶ್, ಸಲಹೆಗಾರರಾದ ಕೆ.ಟಿ.ವೀರಪ್ಪ ತರಬೇತಿ ಅಧಿಕಾರಿ ಕೆ.ಎ.ಕಾರ್ಯಪ್ಪ, ಪ್ರೊ.ಜೆ.ಬಿ.ಶಿವರಾಜು ಇನ್ನಿತರರು ಉಪಸ್ಥಿತರಿದ್ದರು.

ನಟನದಲ್ಲಿ ಕೊನೆಯ ಉತ್ತರ ನಾಟಕ ಪ್ರದರ್ಶನ

ಮೈಸೂರು, ಫೆ. 9– ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಬೆಂಗಳೂರಿನ ಸ್ಟೇಜ್ ಕಲಾವಿದರಿಂದ 'ಕೊನೆಯ ಉತ್ತರ' ನಾಟಕ ಪ್ರದರ್ಶನವನ್ನು ಫೆ. 12 ರಂದು ಸಂಜೆ 6.30ಕ್ಕೆ ಏರ್ಪಡಿಸಲಾಗಿದೆ. ನಾಟಕವನ್ನು ರಂಗನಾಥ್ ಶಿವಮೊಗ್ಗ (ನೀನಾಸಂ) ನಿರ್ದೇಶಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 7259537777, 9480468327 ಸಂಪರ್ಕಿಸಬಹುದು.

ವಿದ್ವಾನ್ ಬಿ.ವಿ. ಶ್ರೀಹರಿ ಅವರಿಂದ ನಾಳೆ ಕರ್ನಾಟಕ ಶಾಸ್ತ್ರೀಯ ಸಂಗೀತ

ಮೈಸೂರು, ಫೆ 9 – ಮೈಸೂರಿನ ಶಿವರಾಂಪೇಟೆಯ ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ರಾಮಮಂದಿರದ ಆವರಣದಲ್ಲಿ ಫೆ. 11 ರಂದು ಸಂಜೆ 6 ಗಂಟೆಗೆ ಫೆಬ್ರವರಿ ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಸಂಗೀತ ವಿದ್ವಾನ್ ಬಿ.ವಿ. ಶ್ರೀಹರಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ವಿ. ವರ್ಚಸ್–ಮೃದಂಗ ಸಹಕಾರ ನೀಡಲಿದ್ದಾರೆ.

ಸ್ಥಳೀಯ ಸಂಸ್ಕೃತಿ, ಇತಿಹಾಸದ ಅನುಭವ ಇಟ್ಟುಕೊಂಡು ಅನುವಾದಗಳಾಗಬೇಕು

● ಮಾಜಿ ಮುಖ್ಯ ನ್ಯಾಯಮೂರ್ತಿ ಎಲ್.ನರಸಿಂಹರೆಡ್ಡಿ ಅಭಿಮತ ● ಕಾನೂನುಗಳನ್ನು ಸ್ಥಳೀಯ ಭಾಷೆಗೆ ಅನುವಾದ ಮಾಡಿದ ಮಾತ್ರಕ್ಕೆ ಅವುಗಳಲ್ಲಿ ನಮ್ಮತನ ಬರುವುದಿಲ್ಲ



ಮೈಸೂರು, ಫೆ.9(ಆರ್‌ಕೆಬಿ)– ಕಾನೂನುಗಳನ್ನು ಸ್ಥಳೀಯ ಭಾಷೆಗೆ ಅನುವಾದ ಮಾಡಿದ ಮಾತ್ರಕ್ಕೆ ಅವುಗಳಲ್ಲಿ ನಮ್ಮತನ ಬರುವುದಿಲ್ಲ. ಸ್ಥಳೀಯ ಸಂಸ್ಕೃತಿ ಹಾಗೂ ಇತಿಹಾಸದ ಅನುಭವವನ್ನು ಗಮನದಲ್ಲಿಟ್ಟುಕೊಂಡು ಅನುವಾದಗಳಾಗಬೇಕು. ಉತ್ತಮ ವಿಚಾರ ನಮ್ಮಲ್ಲಿಲ್ಲದಿದ್ದರೆ ಮಾತ್ರ ಬೇರೆಯವರನ್ನು ಅವಲಂಬಿಸಬೇಕು ಎಂದು ಸಿಎಟಿ ಅಧ್ಯಕ್ಷರೂ ಆದ ಮಾಜಿ ಮುಖ್ಯ ನ್ಯಾಯಮೂರ್ತಿ ಮತ್ತು ಭಾರತೀಯ ಭಾಷಾ ಸಮಿತಿಯ ಕಾರ್ಯ ನಿರ್ವಾಹಕ ಅಧ್ಯಕ್ಷ ಎಲ್.ನರಸಿಂಹರೆಡ್ಡಿ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕಾನೂನು ಅಧ್ಯಯನ ವಿಭಾಗ, ಭಾರತೀಯ ಭಾಷಾ ಸಮಿತಿ ಜಂಟಿಯಾಗಿ ಮೈಸೂರಿನ ಮಾನಸಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಕನ್ನಡದಲ್ಲಿ ಕಾನೂನು ಪಠ್ಯಪುಸ್ತಕಗಳ ಅನುವಾದ ಮತ್ತು ಬರವಣಿಗೆ' ಕುರಿತ ಎರಡು ದಿನಗಳ ಕಾರ್ಯಾಗಾರಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು.

ನಮ್ಮ ಸಂಸ್ಕೃತಿಯಲ್ಲಿ ಮದುವೆ ಎಂಬುದು ದೀರ್ಘಕಾಲದ ವ್ಯವಸ್ಥೆಯಾಗಿತ್ತು. ಆದರೆ ಪಾಶ್ಚಾತ್ಯ ಕಾನೂನುಗಳನ್ನು ಅಳವಡಿಸಿಕೊಂಡ ಬಳಿಕ ವಿಚ್ಛೇದನ ಸುಲಭ ಮತ್ತು ತೀವ್ರವಾಯಿತು ಎಂದು ಉದಾಹರಣೆ ನೀಡಿದ ಅವರು, ನಮ್ಮದೇ ಮಾರ್ಗದ ಕಾನೂನು ಕಂಡುಕೊಂಡಿದ್ದರೆ ಇದು ಭಿನ್ನವಾಗಿರುವ ಸಾಧ್ಯತೆ ಇತ್ತು ಎಂದರು.

ಸ್ಥಳೀಯ ಭಾಷೆಗಳಲ್ಲಿ ಕಾನೂನಿನ ಬಳಕೆ ಮತ್ತು ವ್ಯಾಖ್ಯಾನದಿಂದ ಜನರು ಹೆಚ್ಚು ಅರಿವುಳ್ಳ, ಸಮಸ್ಯೆ ರಹಿತ ಬದುಕಿನತ್ತ ಸಾಗುತ್ತಾರೆ. ಆಯಾ ಭಾಷೆಗಳಲ್ಲಿ ಸೃಷ್ಟಿಯಾದ ಕಾನೂನುಗಳು ಅವುಗಳದೇ ಸಂಸ್ಕೃತಿಯ ಪ್ರಭಾವವನ್ನು ಹೊಂದಿರುತ್ತವೆ. ಬೇರೆಡೆಯಿಂದ ಎರವಲು ಪಡೆದ ಕಾನೂನುಗಳಲ್ಲಿ ಸ್ಥಳೀಯ ಬದುಕಿನ ಸೂಕ್ಷ್ಮ ಹಾಗೂ ಮಹತ್ವದ ಸಂಗತಿಗಳ ಕೊರತೆ ಇರುತ್ತದೆ ಎಂದು ತಿಳಿಸಿದರು.

ಇಂಗ್ಲೀಷ್ ಕಾನೂನು ವ್ಯವಸ್ಥೆಯಲ್ಲಿ ನ್ಯಾಯಾಲಯಕ್ಕೆ ಹೋದ ಮರು ಕ್ಷಣವೇ ವ್ಯಕ್ತಿಗಳು ವಿರೋಧಿಗಳ ಸ್ಥಾನವನ್ನು ಹೊಂದಿಬಿಡುತ್ತಾರೆ. ಆದರೆ ಭಾರತೀಯ ವ್ಯವಸ್ಥೆಯಲ್ಲಿ ದೂರು ತಂದವರನ್ನು ಒಟ್ಟಿಗೆ ಕೂರಿಸಿ ಉತ್ತರ ಹುಡುಕಲಾಗುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ ಮಾತನಾಡಿ, ನಮ್ಮ ಕಾನೂನಿನ ಪರಿಣಾಮಕಾರಿ ಅನುಷ್ಠಾನವು ಅದಕ್ಕೆ ಒಳಗಾಗುವ ಜನರ ಸಂಸ್ಕೃತಿ, ಭಾಷೆ, ಅಗತ್ಯತೆಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎಂದರು.

ಹುಬ್ಬಳ್ಳಿ ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ.ಪಿ.ಈಶ್ವರ ಭಟ್ ಮುಖ್ಯ ಭಾಷಣ ಮಾಡಿದರು. ಕೇಂದ್ರ ಶಿಕ್ಷಣ ಸಚಿವಾಲಯದ ಭಾರತೀಯ ಭಾಷಾ ಸಮಿತಿ ಅಧ್ಯಕ್ಷ ಚಾಮು ಕೃಷ್ಣಶಾಸ್ತ್ರಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮುಖ್ಯ ಸಮನ್ವಯ ಅಧಿಕಾರಿ ಡಾ.ಬುದ್ಧ ಚಂದ್ರಶೇಖರ, ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಎಚ್.ರಾಜಶೇಖರ್, ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರಕುಮಾರ್, ಮೈಸೂರು ವಿವಿ ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆಯ ಅಧ್ಯಕ್ಷ ಮತ್ತು ಡೀನ್ ಪ್ರೊ.ಟಿ.ಆರ್.ಮಾರುತಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಶುಕ್ರವಾರ 10-02-2023

ಬೆಳ್ಳಿ ಬೆಳಕು



18 to 25 ಈ ವಾರ ತೆರೆಗೆ

ಬಳ್ಳಾರಿ ದರ್ಬಾರ್ ಖ್ಯಾತಿಯ ಸ್ಮೈಲ್‌ಶ್ರೀನು ಅವರ ನಿರ್ದೇಶನದ ಮತ್ತೊಂದು ಚಿತ್ರ 18 To 25. ಈಗಿನ ಕಾಲದ ಯುವಜನತೆಯ ಮನಸ್ಥಿತಿಯನ್ನೇ ಆಧಾರವಾಗಿಟ್ಟುಕೊಂಡು ಈ ಚಿತ್ರವನ್ನು ನಿರೂಪಿಸಲಾಗಿದ್ದು ಹಿರಿಯರಿಗೆ ಹಾಗೂ ಕಿರಿಯರಿಗೂ ಒಂದು ಸಂದೇಶ ಚಿತ್ರದಲ್ಲಿದೆ. ಇಂದಿನಿಂದ 18 To 25 ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಇತ್ತೀಚೆಗೆ ಓಮೈ ಲವ್‌ನಂಥ ಯಶಸ್ವೀ ಚಿತ್ರವನ್ನು ನಿರ್ದೇಶಿಸಿದ್ದ ನಿರ್ದೇಶಕ ಸ್ಮೈಲ್ ಶ್ರೀನು ಅವರೇ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಕೂಡ ಬರೆದು ನಿರ್ದೇಶಿಸಿದ್ದಾರೆ. ಸ್ಮೈಲ್ ಜೋಹರ್ ಟಾಕೀಸ್ ಅಡಿಯಲ್ಲಿ 18 To 25 ಚಿತ್ರ ತಯಾರಾಗಿದೆ. ಈ ಚಿತ್ರದಲ್ಲಿ ಅಭಿರಾಮ್ ನಾಯಕನಾಗಿದ್ದು, ಋಷಿತೇಜ, ಅಖಿಲ, ವಿದ್ಯಾಶ್ರೀ, ರಾಕ್‌ಲೈನ್ ಸುಧಾಕರ್, ಫಾರೂಖ್‌ಖಾನ್, ನಾಗೇಶ್ವರ ರಾವ್, ಉದಯ ಭಾಸ್ಕರ್, ರವಿರಾಮ್, ಪೊಲ ಶ್ರೀನಿವಾಸಬಾಬು, ಭಾಗ್ಯಶ್ರೀ ಹಾಗೂ ಇತರರು ಪ್ರಮುಖ ತಾರಾಗಣದಲ್ಲಿ ನಟಿಸಿದ್ದಾರೆ.

ಈ ಚಿತ್ರದ ಹಾಡುಗಳಿಗೆ ಚರಣ್ ಅರ್ಜುನ್ ಅವರ ಸಂಗೀತ ನಿರ್ದೇಶನವಿದೆ, ಶಿವ ಕೆ.ನಾಯ್ಡು ಅವರ ಛಾಯಾಗ್ರಹಣ, ವಿ. ನಾಗೇಂದ್ರಪ್ರಸಾದ್, ಸ್ಮೈಲ್‌ಶ್ರೀನು ಅವರ ಸಾಹಿತ್ಯ, ವೈಲೆನ್ಸ್‌ವೇಲು ಅವರ ಸಾಹಸ, ಚಿರಂಜೀವಿ ಅವರ ನೃತ್ಯನಿರ್ದೇಶನ ಈ ಚಿತ್ರಕ್ಕಿದೆ.



ದೊಡ್ಡಹಟ್ಟಿ ಬೋರೇಗೌಡನ ಹಾಡಿಗೆ ಸಿದ್ದರಾಮಯ್ಯ ಚಾಲನೆ ಶೂಟಿಂಗ್‌ಗಾಗಿ ನಿಜವಾದ ಮನೆಯನ್ನೇ ಕಟ್ಟಿದ ಚಿತ್ರತಂಡ

ತರ್ಲೆ ವಿಲೇಜ್ ಖ್ಯಾತಿಯ ಕೆ.ಎಂ.ರಘು ನಿರ್ದೇಶನದ ತಿಥಿ ತರದ ಗ್ರಾಮೀಣ ಕಥಾಹಂದರ ಇರುವ ದೊಡ್ಡಹಟ್ಟಿ ಬೋರೇಗೌಡ ಫೆ.17ರಂದು ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ತಿಥಿ ಸಿನಿಮಾದ ಬಳಿಕ ಅಪ್ಪಟ ಹಳ್ಳಿ ಪ್ರತಿಭೆಗಳನ್ನೇ ಇಟ್ಟುಕೊಂಡು ಮಾಡಿರುವ ಚಿತ್ರವೂ ಇದಾಗಿದ್ದು, ಚಿತ್ರತಂಡ ಇತ್ತೀಚೆಗೆ ಮೆಹಬೂಬ್‌ಸಾಬ್ ಹಾಡಿದ ವಿಡಿಯೋಸಾಂಗ್‌ನ್ನು ಬಿಡುಗಡೆಗೊಳಿಸಿತ್ತು. ಮಾದೇವಾ ಖ್ಯಾತಿಯ ಗಾಯಕಿ ಅನನ್ಯಭಟ್ ಕಂಠದಲ್ಲಿ ಮೂಡಿಬಂದಿರುವ ಮತ್ತೊಂದು ವಿಶೇಷ ಹಾಡನ್ನು ಗುರುವಾರ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು. ಹಲವು ವಿಶೇಷತೆಗಳನ್ನು ಒಳಗೊಂಡಿರುವ ಈ ಚಿತ್ರದ ಮೂಲಕ ಪ್ರೇಕ್ಷಕರಿಗೆ ಹೊಸ ಅನುಭವವನ್ನು ಉಣಬಡಿಸಲು ಚಿತ್ರತಂಡ ಅಣಿಯಾಗಿದೆ ಈ ಚಿತ್ರಕ್ಕೆ 2021ನೇ ಸಾಲಿನ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡದ ಮೊದಲ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ದೊರೆತಿದೆ.

ಈ ಚಿತ್ರದಲ್ಲಿ ಗ್ರಾಮದ ಅಮಾಯಕ ಬೋರೇಗೌಡ ಒಂದು ಮನೆ ಕಟ್ಟಲು ಎಷ್ಟೆಲ್ಲಾ ಅಲೆದಾಡುತ್ತಾನೆ, ಪರಿಪಾಟಲು ಅನುಭವಿಸುತ್ತಾನೆ ಎಂಬುದನ್ನು ವಾಸ್ತವಿಕ ಕಥೆಯೊಂದಿಗೆ ಹೇಳಲಾಗಿದೆ. ಚಿತ್ರೀಕರಣಕ್ಕಾಗಿ ಮನೆಯ ಸೆಟ್ ಒಂದನ್ನು ಹಾಕಬೇಕಾಗಿತ್ತು, ಆದರೆ ಚಿತ್ರತಂಡ ಹಾಕಿ ಕೆಡವೋ ಸೆಟ್ ನಿರ್ಮಿಸದೆ, ಒಂದು ಕುಟುಂಬಕ್ಕೆ ನೆರಳಾಗೋ ಥರ ದೊಡ್ಡ ಸಾಹಸವನ್ನೇ ಮಾಡಿದೆ. ಚಿತ್ರೀಕರಣಕ್ಕಾಗಿ ನಿಜವಾದ ಮನೆಯನ್ನೇ ಕಟ್ಟಿಬಿಟ್ಟಿದೆ. ಇದೀಗ ಆ ಮನೆಯಲ್ಲಿ ಕುಟುಂಬ ನೆಮ್ಮದಿಯ ಜೀವನ ನಡೆಸುತ್ತಿದೆ.

ತನಗೆ ಅಲಾಟಾದ ಅಶ್ರಯ ಮನೆಯನ್ನು ಬಡ ಕುಟುಂಬದ ಬೋರೇಗೌಡ, ಪಂಚಾಯಿತಿಯಿಂದ ಹಕ್ಕು ಪಡೆದು ಮನೆಕಟ್ಟುವ ಸನ್ನಿವೇಶಕ್ಕೆ ಯಾವುದೇ ಸೆಟ್ ಹಾಕದೆ ಮೈಸೂರಿನಿಂದ ಸುಮಾರು 35 ಕಿಲೋ ಮೀಟರ್ ದೂರದಲ್ಲಿರುವ ಗದ್ದಿಗೆ ಗ್ರಾಮದಲ್ಲಿ ಕೃಷ್ಣ ಎಂಬುವವರ ಜಾಗದಲ್ಲಿ ಸನ್ನಿವೇಶ ಸಹಜವಾಗಿ ಮೂಡಿಬರಬೇಕು ಎಂಬ ಕಾರಣಕ್ಕೆ ರಿಯಲ್ ಮನೆಯನ್ನೇ ಕಟ್ಟಿಸಿಕೊಡುವ ಮೂಲಕ ಆ ಕುಟುಂಬಕ್ಕೂ ನೆರವಾಗಿದ್ದಾರೆ, ರಾಜರಾಜೇಶ್ವರಿ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರಕ್ಕೆ ಕೆ.ಎಮ್.ರಘು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಕೆ.ಎಮ್. ಲೋಕೇಶ್, ಶಶಿಕುಮಾರ್ ಬಿಸಿ. ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಹರ್ಷವರ್ಧನ್‌ರಾಜ್ ಅವರ ಸಂಗೀತ, ವೀನಸ್ ನಾಗರಾಜ್‌ಮೂರ್ತಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಪ್ರಮುಖ ತಾರಾಬಳಗದಲ್ಲಿ ಶಿವಣ್ಣ ಬೀರುಹುಂಡಿ, ಗೀತಾ, ಸಂಪತ್, ಲಾವಣ್ಯ, ಅಭಿ, ಕಲಾರತಿ ಮಹದೇವ್ ಹೀಗೆ ಹೊಸ ಪ್ರತಿಭೆಗಳ ದಂಡೇ ತುಂಬಿಕೊಂಡಿದೆ.

ಈ ವಾರ 7 ಪಾತ್ರಗಳ ಸುತ್ತ 'ರಂಗಿನರಾಟೆ'

ಇತ್ತೀಚೆಗೆ ಮಹಿಳಾ ನಿರ್ಮಾಪಕಿಯರೂ ಚಿತ್ರರಂಗಕ್ಕೆ ಹೆಚ್ಚಾಗಿ ಬರುತ್ತಿದ್ದಾರೆ. ಆ ಪಟ್ಟಿಗೆ ಕವಿತಾ ಅರುಣ್‌ಕುಮಾರ್ ಹೊಸ ಸೇರ್ಪಡೆ ಅವರು ನಿರ್ಮಿಸಿರುವ 'ರಂಗಿನರಾಟೆ' ಚಿತ್ರ ಇಂದಿನಿಂದ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಕೆಟ್ಟದ್ದನ್ನು ಮಾಡಿದವರು ಇಲ್ಲಿಯೇ ಅನುಭವಿಸುತ್ತಾರೆ ಎಂಬ ಮೆಸೇಜ್ ಇಟ್ಟುಕೊಂಡು ಆರ್ಮುಗಂ ಅವರು 'ರಂಗಿನರಾಟೆ' ಚಿತ್ರವನ್ನು ನಿರ್ದೇಶಿಸಿದ್ದಾರೆ, ರಾಜೀವ್ ರಾಥೋಡ್, ದುನಿಯಾ ರಶ್ಮಿ, ಭವ್ಯ, ಸಂತೋಷ್ ಸೇರಿದಂತೆ ಏಳು ಪ್ರಮುಖ ಪಾತ್ರಗಳ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಈ ಚಿತ್ರದಲ್ಲಿದೆ.

ಬಿಡುಗಡೆಗೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜೀವ್ ರಾಥೋಡ್ ನನಗಿದು ನಾಯಕನಾಗಿ ಮೂರನೇ ಚಿತ್ರ. ನಿರ್ದೇಶಕರು ನನಗೆ ಈ ಕಥೆ ಹೇಳಿದಾಗ ತುಂಬಾ ಕುತೂಹಲಕರವಾಗಿತ್ತು. ನಿರ್ಮಾಪಕರು ಪ್ರತಿ ಹಂತದಲ್ಲೂ ನಮಗೆ ಸಪೋರ್ಟ್ ಮಾಡುತ್ತಿದ್ದಾರೆ. ಬಹುತೇಕ ಕಾಡಿನಲ್ಲಿ ನಡೆಯುವ ಕಥೆಯಿದು. ಅನಿರೀಕ್ಷಿತವಾಗಿ ನಡೆದ ಘಟನೆಯೊಂದರಲ್ಲಿ ನಾನು, ನನ್ನ ಜೊತೆಗಿರುವವರು ಒಂದು ಕಷ್ಟಕ್ಕೆ ಸಿಲುಕಿಕೊಳ್ಳುತ್ತೇವೆ. ಅವರನ್ನೆಲ್ಲಾ ಆ ಕಷ್ಟದಿಂದ ನಾನು ಹೇಗೆ ಪಾರು ಮಾಡುತ್ತೇನೆ ಅನ್ನೋದೇ ಚಿತ್ರದ ಕಥೆ. ಒಂದು ಹಂತದಲ್ಲಿ ಅವರಿಗೆಲ್ಲ ತಾವೆಲ್ಲಿದ್ದೇವೆ, ಯಾವ ಸಮಯದಲ್ಲಿದ್ದೇವೆ ಎನ್ನುವುದೇ ತಿಳಿಯದಂತಾಗುತ್ತದೆ. ನಮ್ಮ ಜೀವನ ಎಲ್ಲಿಂದ ಆರಂಭವಾಗುತ್ತೋ ಅಲ್ಲಿಗೇ ಬಂದು ತಲುಪುತ್ತೇವೆ ಎಂದು 'ರಂಗಿನರಾಟೆ' ಮೂಲಕ ಹೇಳಹೊರಟಿದ್ದೇವೆ ಎಂದು ಹೇಳಿದರು.

ನಿರ್ಮಾಪಕಿ ಕವಿತಾ ಅರುಣ್‌ಕುಮಾರ್ ಮಾತನಾಡಿ ನಾವು ಕೇವಲ 3 ಗಂಟೆಯಲ್ಲಿ ಸಿನಿಮಾ ನೋಡಿ ಚೆನ್ನಾಗಿದೆ, ಚೆನ್ನಾಗಿಲ್ಲ ಅಂತ ನಿರ್ಧರಿಸುತ್ತೇವೆ. ಇದರಲ್ಲಿ ತೊಡಗಿಕೊಂಡಾಗಲೇ ಸಿನಿಮಾ ಮಾಡುವವರ ಕಷ್ಟ ಸುಖ ಏನೆಂದು ಗೊತ್ತಾಯಿತು ಎಂದು ಹೇಳಿಕೊಂಡರು. ನಂತರ ನಿರ್ದೇಶಕ ಆರ್ಮುಗಂ ಮಾತನಾಡಿ ಏಳು ಜನರ ಸುತ್ತ ನಡೆಯುವ ಕಥೆಯಿದು. ಸಂತೋಷ್ ಮಳವಳ್ಳಿ ಸಾಹಿತ್ಯ ಬರೆದಿದ್ದಾರೆ. ದುನಿಯಾ ರಶ್ಮಿ ಅವರಿಗೆ ತುಂಬಾ ವಿಭಿನ್ನ ಪಾತ್ರವಿದೆ. ನಿರ್ಮಾಪಕರು ಒಂದು ಲೈನ್ ಕಥೆ ಕೇಳಿಯೇ ಇಷ್ಟಪಟ್ಟಿದ್ದರು. ಈಗ ಸಿನಿಮಾ ನೋಡಿ ಖುಷಿಯಾಗಿದ್ದಾರೆ. ಜೀವನವೇ ಒಂದು ರಾಟೆಯಿದ್ದ ಹಾಗೆ. ಸದಾ ಸುತ್ತುತ್ತಲೇ ಇರುತ್ತದೆ. ಕೆಳಗಿದ್ದವರು ಮೇಲೆ, ಮೇಲಿದ್ದವರು ಕೆಳಗೆ ಬರಲೇಬೇಕು ಎನ್ನುವುದು ಈ ಚಿತ್ರದ ಕಂಟೆಂಟ್, ಚಿತ್ರದ ಬಹುತೇಕ ಕಥೆ ಕಾಡಿನಲ್ಲೇ ನಡೆಯುತ್ತದೆ ಎಂದು ಹೇಳಿದರು. ಚಿತ್ರಕ್ಕೆ ರವಿಸುವರ್ಣ ಅವರ ಛಾಯಾಗ್ರಹಣ, ಚಂದ್ರು ಓಬ್ಬಯ್ಯ ಅವರ ಸಂಗೀತವಿದೆ.





ಆದಿತ್ಯ ಅಭಿನಯದ 'ಟೆರರ್'ಗೆ ಚಾಲನೆ

ಸಿಲ್ಕ್ ಮಂಜು ಅವರ ನಿರ್ಮಾಣ ಹಾಗೂ ರಂಜನ್ ಶಿವರಾಮಗೌಡ ಅವರ ನಿರ್ದೇಶನದ 'ಟೆರರ್' ಚಿತ್ರಕ್ಕೆ ಶ್ರೀಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಚಾಲನೆ ನೀಡಲಾಯಿತು. ಮುಹೂರ್ತ ದೃಶ್ಯಕ್ಕೆ ಹಿರಿಯ ಐಪಿಎಸ್ ಅಧಿಕಾರಿ ರವಿಕಾಂತೇಗೌಡ ಅವರು ಕ್ಯಾಮರಾ ಚಾಲನೆ ಮಾಡಿದರು.. ನನ್ನ ಮೊದಲ ನಿರ್ದೇಶನದ ಚಿತ್ರ ಇದಾಗಿದ್ದು, ಮಾಫಿಯಾ ಸುತ್ತ ಹೆಣೆಯಲಾದ ಕಥೆ ಚಿತ್ರದಲ್ಲಿದೆ. ಚಿತ್ರದ ನಾಯಕ ಆದಿತ್ಯ ಅವರು ಒಬ್ಬ ಗ್ಯಾಂಗ್‌ಸ್ಟರ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹೆಚ್ಚಿನ ಭಾಗದ ಚಿತ್ರೀಕರಣ ಬೆಂಗಳೂರಿನಲ್ಲೇ ನಡೆಯುತ್ತದೆ. ಸಿಲ್ಕ್ ಮಂಜು ಅವರು ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹರ್ಷವರ್ಧನ್‌ರಾಜ್ ಅವರ ಸಂಗೀತ, ಕಾರ್ತಿಕ್‌ಶರ್ಮ ಅವರ ಛಾಯಾಗ್ರಹಣ ನಮ್ಮ ಚಿತ್ರಕ್ಕಿದೆ. ಧರ್ಮ, ಪ್ರಮೋದ್ ಶೆಟ್ಟಿ ಮುಂತಾದವರು ಇತರೆ ಪಾತ್ರಗಳಲ್ಲಿ ಅಭಿನಯಿಸಲಿದ್ದಾರೆ ಎಂದು ನಿರ್ದೇಶಕ ರಂಜನ್ ಶಿವರಾಮಗೌಡ ತಿಳಿಸಿದರು. ನಿರ್ದೇಶಕರು ಹೇಳಿದ ಕಥೆಯಲ್ಲಿ ಹೊಸತನವಿದೆ ಎನಿಸಿ ನಿರ್ಮಾಣಕ್ಕೆ ಮುಂದಾದೆ, ಕನ್ನಡ, ತೆಲುಗು, ತಮಿಳು, ಮಲೆಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ಚಿತ್ರ ನಿರ್ಮಾಣವಾಗಲಿದೆ ಎಂದರು ನಿರ್ಮಾಪಕ ಸಿಲ್ಕ್ ಮಂಜು.




ನಿರ್ದೇಶಕನ ಮೇಲೇ 'ಸಕೂಚಿ' ಪ್ರಯೋಗವಾಯ್ತು!

ಈಗಾಗಲೇ ಸಾಕಷ್ಟು ಮಾಟ-ಮಂತ್ರ, ವಾಮಾಚಾರದ ಕುರಿತಾದ ಸಿನಿಮಾಗಳು ಬಂದು ಹೋಗಿವೆ. ಆ ಸಾಲಿಗೆ 'ಸಕೂಚಿ' ಎಂಬ ಚಿತ್ರವೂ ಹೊಸ ಸೇರ್ಪಡೆ. 'ಸಾವಿನ ಸೂಚಿ' ಎಂಬ ಅಡಿಬರಹವಿರುವ ಈ ಚಿತ್ರ ಫೆ.17ರಂದು ಬಿಡುಗಡೆಯಾಗಲಿದ್ದು, ಕಳೆದವಾರ ಚಿತ್ರದ ಟ್ರೈಲರ್ ರಿಲೀಸಾಗಿದೆ. ಪತ್ರಿಕಾಗೋಷ್ಠಿಗೆ ಮಂತ್ರವಾದಿಯ ಗೆಟಪ್‌ನಲ್ಲೇ ಬಂದಿದ್ದ ನಿರ್ದೇಶಕ ಅಶೋಕ ಮಾತನಾಡಿ, ಚಿತ್ರದಲ್ಲಿ ನನ್ನದೊಂದು ವಿಭಿನ್ನ ಪಾತ್ರವಿದೆ. ಅದೇ ಈ ಗೆಟಪ್ ಎನ್ನುತ್ತಾ ಚಿತ್ರದ ಬಗ್ಗೆ ಮಾತಿಗಿಳಿದ ಅವರು, 'ಸಕೂಚಿ' ಎಂದರೆ ಅತೀ ಘೋರವಾದ ವಾಮಾಚಾರ. ಬ್ಲಾಕ್‌ಮ್ಯಾಜಿಕ್ ಕತೆಯನ್ನು ತೆಗೆದುಕೊಂಡು ಕಮರ್ಷಿಯಲ್ ಆಗಿ ಹೇಳಲು ಪ್ರಯತ್ನಿಸಿದ್ದೇನೆ. ಇದರಲ್ಲಿ ನಾಯಕ ಹೇಗೆ ಸಕೂಚಿಗೆ ಒಳಗಾಗುತ್ತಾನೆ ಎಂಬುದನ್ನು ನೈಜ ಘಟನೆಗಳ ಆಧಾರದ ಮೇಲೆ ಹೇಳಿದ್ದೇನೆ. ಚಿತ್ರದ ಶೂಟಿಂಗ್ ಸಮಯದಲ್ಲಿ ಒಂದಷ್ಟು ಘಟನೆಗಳು ನಡೆದಿವೆ ಎನ್ನುತ್ತಲೇ ಮೈಮೇಲೆ ಯಾವುದೋ ಶಕ್ತಿ ಬಂದವರಂತೆ ಕುಳಿತಲ್ಲಿಂದಲೇ ದೊಡ್ಡದಾಗಿ ಕೂಗಾಡಿದರು. ಇದು ನಿಜವೋ ಅಥವಾ ಪ್ರಚಾರದ ಮತ್ತೊಂದು ತಂತ್ರವೋ ಆ ದೇವರೇ ಬಲ್ಲ! ಈ ಹಿಂದೆ ರಂಗನಾಯಕಿ ಚಿತ್ರದಲ್ಲಿ ನಟಿಸಿದ್ದ ತ್ರಿವಿಕ್ರಮ ಸಾಮ್ರಾಟ್ ಈ ಚಿತ್ರದ ನಾಯಕನಾಗಿದ್ದು, ಪಾತ್ರ ಕುರಿತಂತೆ ಮಾತನಾಡಿ ನಾನು ವಿಕ್ಕಿ ಮಾರ್ಟಿನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನನ್ನ ಪಾತ್ರದ ಮೂಲಕ ಸಂಬಂಧ, ಸ್ನೇಹ, ಪ್ರೀತಿ ಎಲ್ಲಾ ಸಾರಲಾಗಿದೆ. ಹಿನ್ನೆಲೆ ಸಂಗೀತ ಈ ಚಿತ್ರದ ಹೈಲೈಟ್ ಎಂದರು. ನಂತರ ಮಿಸ್ ಮೈಸೂರು ಕಿರಿಟಧಾರಿ ನಾಯಕಿ ಡಯಾನ ಮಾತನಾಡಿ, ನಾನೂ ಈ ಕಥೆ ಕೇಳಿದಾಗ ಥ್ರಿಲ್ ಆದೆ. ಮೂಲತಃ ನನಗೆ ಹಾರರ್ ಸಿನಿಮಾ ಅಂದ್ರೆ ತುಂಬಾ ಇಷ್ಟ, ನಾನಿಲ್ಲಿ ಇನ್ನೋಸೆಂಟ್ ಕಾಲೇಜ್ ಹುಡುಗಿಯಾಗಿ ನಟಿಸಿದ್ದೇನೆ ಎಂದರು. ಚಿತ್ರದ ಸಹ ನಿರ್ಮಾಪಕ ಮಹಾವೀರ್ ಪ್ರಸಾದ್ ಮಾತನಾಡಿ, ಚಿತ್ರದಲ್ಲಿ ಮಾಟಮಂತ್ರ, ವಾಮಾಚಾರದ ಸುತ್ತ ನಡೆಯುವ ಕಥೆಯಿದು. ಚಾಲೆಂಜ್ ಆಗಿ ತೆಗೆದುಕೊಂಡು ಈ ಸಿನಿಮಾ ಮಾಡಿದ್ದೇವೆ ಎಂದು ಹೇಳಿದರು. ಬಿಟ್‌ಗುರು ಬ್ಯಾಂಡ್ ಖ್ಯಾತಿಯ ಗಣೇಶ್ ಗೋವಿಂದಸ್ವಾಮಿ ಈ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ. ಅಶ್ವಿನ್ ಬಿ.ಸಿ ನಿರ್ಮಾಣದ ಈ ಚಿತ್ರಕ್ಕೆ ಸಹ ನಿರ್ಮಾಪಕರಾಗಿ ಮಧುಕರ್ ಜೆ ಕೂಡ ಸಾಥ್ ನೀಡಿದ್ದಾರೆ. ಆನಂದ್ ಸುಂದ್ರೇಶ್ ಛಾಯಾಗ್ರಹಣವಿದೆ. ನೈಜ ಘಟನೆಗಳನ್ನಿಟ್ಟುಕೊಂಡು ಮಾಡಲಾದ ಈ ಚಿತ್ರದಲ್ಲಿ 30ಕ್ಕೂ ಹೆಚ್ಚು ಮಂಗಳ ಮುಖಿಯರು ಅಭಿನಯಿಸಿರುವುದು ವಿಶೇಷ.

ಸಿನಿಪದಬಂಧ-460

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಓಂ ಚಿತ್ರದ ಹಾಡಲ್ಲಿ ಕಿಸ್ಸಿಗೆ ಡಮಾರ್ ಆದವನಿಗೆ ವಿಕ್ಕಿ ಅಭಿನಯವಿದೆ 6
4.ಮಂಜು ಸ್ಫೋಟಿಸಲು ವಿಷ್ಣುಗೆ ಇಬ್ಬರು ನಾಯಕಿಯರು 4
7.ಮಣ್ಣು ತುಳಿದ ಪಾಂಡುರಂಗನ "ಭಕ್ತ" 3
9.ಜಗ್ಗೇಶ್, ರಂಭಾ ಅಭಿನಯದ ಚಿತ್ರಕ್ಕೆ ಕೆ.ವಾಸು ನಿರ್ದೇಶಕ 6
12.ಎಷ್ಟೇ ಕಷ್ಟಪಟ್ಟು ದುಡಿದರು ಬರುವ ವೇತನ ಲೆಕ್ಕಕ್ಕಿಲ್ಲ ಎನ್ನುವ ಅರ್ಥದ ಚಿತ್ರ 9
14. ವಾಸ್ತುಶಿಲ್ಪದ ಆಗರ ಅಡಗಿರುವ ಪ್ರೇಕ್ಷಣೀಯ ಸ್ಥಳಗಳು ನೆನಪಿರಲಿ ಚಿತ್ರದ ಹಾಡಿನಲ್ಲಿದೆ 6
16.ಈ ಚಿತ್ರಕ್ಕೆ "ನಡುಕ" ಉಂಟಾಗಿದೆ 3
19.ಸುಬ್ಬಿ ಸುಬ್ಬಕ್ಕ _ _ _ _ 4
20.ಟೈಗರ್ ಪ್ರಭಾಕರ್ ಈಗಿನ ಬಲಾಢ್ಯನಾದರೂ ನೆನಪಷ್ಟೆ 6

ಮೇಲಿನಿಂದ ಕೆಳಕ್ಕೆ

1.ಶಂಕರ್ ನಾಗ್ "ಕರಿನಾಗ" 5
2.ದಿ ಶೋಮ್ಯಾನ್ ಪುನೀತ್ ಇಲ್ಲಿ ತಲೆ ಕೆಳಗು 2
3.ವರ್ಷ ಚಿತ್ರದ ನಾಯಕಿ 2
5.ವೃಕ್ಷದ ನಡುವೆ ದ್ವೇಷವಿದೆ 3
6.ಥ್ರಿಲ್ಲರ್ ಮಂಜುವಿನ ಕೈಯಲ್ಲಿ ಝಳಪಿಸಿದ ಖಡ್ಗ 3
8. ಮತ್ತೇ ಹಾಡಿತು ಕೋಗಿಲೆಯಲ್ಲಿ ವಿಷ್ಣು ರೂಪಿಣಿಯನ್ನು ಕರೆದ ಬಗೆ 6
10.ಗಂಗಾಧರ್, ಕಲ್ಪನಾ ಮೋಹನ್ ಅಭಿನಯಕ್ಕೆ ಎಸ್.ಕೆ. ಅನಂತಚಾರಿ ನಿರ್ದೇಶನವಿದೆ 6
11. ಬಿ.ಸಿ. ಪಾಟೀಲ್ ಹಾಡಿದ ಲಾಲಿ 3
12.ಲೀಲಾವತಿ ಪುತ್ರ ಪ್ರಶ್ನೆ ಮಾಡುತ್ತಿದ್ದಾನೆ 3
13.ಡಾ.ರಾಜ್‌ಕುಮಾರ್ ಕೊಡಲಿ ಹಿಡಿದ "ಭಾರ್ಗವ" 5
15.ನನಸು ಮಾಡಿದ "ಸ್ವಪ್ನ" 3
16.ಬಣ್ಣದ ಗೆಜ್ಜೆ ಕಟ್ಟಿದ ನಟಿಗೆ ಮತ್ತೇರಿದೆ 3
17.ವಿಷ್ಣು ಹಾಡಿದ "ಜೋಗುಳ" 2
18.ಸೇಡು ತೀರಿಸಿಕೊಂಡವನಿಗೆ ಮಾತು ಬಾರದು 2

ವಿಜೇತರು: ಜೆ.ಮಾದೇಶ, ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಬದನಗುಪ್ಪೆ, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಸಿನಿ ಪದಬಂಧ 459ರ ಸರಿ ಉತ್ತರ

ಮೊ	ಗ್ಗಿ	ನ	ಮ	ನ	ಸು		ಅಂ	ತ	ರ್ಗಾ	ಮಿ
ದ		ಶೆ		ಗ್ಮಾ				ಬ್ಬ		ಥು
ಲ						ರಂ	ಗೋ	ಲಿ		ನ
ರಾ	ಧಿ	ಕಾ	ಪಂ	ಡಿ	ತ್		ವಿಂ		ತ	
ತ್ರಿ			ಜ				ದಾ		ವ	
	ನ	ಗ	ರ	ದ	ಲ್ಲಿ	ನಾ	ಯ	ಕ	ರು	
	ಗಾ		ದ				ನ			ಜ
	ರಿ		ಗಿ		ಓಂ	ನ	ಮಃ	ಶಿ	ವಾ	ಯ
ಜ		ನ	ಳಿ	ನಿ						ವಿ
ನ		ಮ್ರ				ಕ್ಷೀ		ಕ		ಜ
ಜ	ರ	ತಾ	ರಿ		ನಾ	ರ	ದ	ವಿ	ಜ	ಯ

ನಂ.ಗೂಡು ನಗರಸಭೆ: 2.03 ಕೋಟಿ ಉಳಿತಾಯ ಬಜೆಟ್

ಬಡಾವಣೆಗಳ ಅಭಿವೃದ್ಧಿಗೆ ಕ್ರಮ: ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ



ನಂಜನಗೂಡು, ಫೆ.9– ಇಲ್ಲಿನ ನಗರಸಭೆಯ ಬಹು ನಿರೀಕ್ಷಿತ ಬಜೆಟ್ ಅನ್ನು ಗುರುವಾರ ಮಂಡಿಸಲಾಯಿತು. ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ 2.03 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸಿದರು.

ನಗರಸಭೆ ಸಭಾಂಗಣದಲ್ಲಿ ಬಜೆಟ್ ಮಂಡಿಸಿದ ಅವರು, ಉದ್ದೇಶಿತ ಬಜೆಟ್ ಗಾತ್ರ 77 ಕೋಟಿ 38 ಲಕ್ಷಗಳಾಗಿದ್ದು, ಬಜೆಟ್ ಆರಂಭಿಕ ಶಿಲ್ಕು 4.27 ಕೋಟಿ ಇದ್ದು, ಪ್ರಸಕ್ತ ಸಾಲಿನಲ್ಲಿ 73 ಕೋಟಿ 38 ಲಕ್ಷ 30 ಸಾವಿರ ರೂಗಳನ್ನು ಸರ್ಕಾರದ ಅನುದಾನ ಹಾಗೂ ವಿವಿಧ ಮೂಲಗಳಿಂದ ನಿರೀಕ್ಷಿಸಲಾಗಿದೆ. ಒಟ್ಟು 75 ಕೋಟಿ 35 ಲಕ್ಷದ 18 ಸಾವಿರ ರೂ. ವೆಚ್ಚವಾಗುವ ಅಂದಾಜು ಪಟ್ಟಿ ತಯಾರಿಸಲಾಗಿದ್ದು, 2.03 ಕೋಟಿ ರೂ. ಉಳಿತಾಯವಾಗಲಿದೆ ಎಂದರು.

ನಗರದ ಎಲ್ಲಾ ಬಡಾವಣೆಗಳಿಗೂ ಮೂಲಸೌಕರ್ಯ ಒದಗಿಸುವುದು ನಗರಸಭೆ ಜವಾಬ್ದಾರಿ. ಹೊಸದಾಗಿ ಸೇರ್ಪಡೆಯಾದ ದೇವಿರಮ್ಮನಹಳ್ಳಿ, ಕಲ್ಲಹಳ್ಳಿ ಅಭಿವೃದ್ಧಿಗೆ 6 ಕೋಟಿ ಅನುದಾನ ಮೀಸಲಿರಿಸಲಾಗಿದೆ. ರಸ್ತೆ, ಪಾದಚಾರಿ ರಸ್ತೆ ಚರಂಡಿ ನಿರ್ಮಾಣಕ್ಕೆ 10 ಕೋಟಿ, ವಾಟರ್ ಟ್ಯಾಂಕ್ ನಿರ್ಮಾಣಕ್ಕೆ 3 ಕೋಟಿ, ಉದ್ಯಾನವನಗಳ ಅಭಿವೃದ್ಧಿಗೆ 2 ಕೋಟಿ, ಪೌರಕಾರ್ಮಿಕರ ಸಮುದಾಯ ಭವನಕ್ಕೆ 2 ಕೋಟಿ, ಸಾರ್ವಜನಿಕ ಶೌಚಾಲಯಕ್ಕೆ 1 ಕೋಟಿ, ಒಳಚರಂಡಿ ಅಭಿವೃದ್ಧಿಗೆ 1 ಕೋಟಿ, ನಲ್ಮ್ ತರಬೇತಿ, ಸಹಾಯಧನಕ್ಕಾಗಿ 2 ಕೋಟಿ, ಮಳೆ ನೀರಿನ ಚರಂಡಿ ಕಾಮಗಾರಿಗೆ 2 ಕೋಟಿ, ಶುದ್ಧ ಕುಡಿಯುವ ನೀರಿನ ಕಾಮಗಾರಿ ಮತ್ತು ಯಂತ್ರೋಪಕರಣಗಳಿಗೆ 2 ಕೋಟಿ, ನಗರಸಭೆ ಹೊಸ ಕಟ್ಟಡಕ್ಕೆ 4 ಕೋಟಿ, ಭೂಮಿ ಖರೀದಿಗೆ 80 ಲಕ್ಷ ಅನುದಾನ ಮೀಸಲಿರಿಸಲಾಗಿದೆ ಎಂದರು.

ಎಲ್ಲಾ ವರ್ಗಗಳ ಸಮುದಾಯ ಭವನ ನಿರ್ಮಾಣಕ್ಕೆ ಕ್ರಮ: ಉಪ್ಪಾರ ಸಮುದಾಯ ಭವನಕ್ಕೆ 50 ಲಕ್ಷ, ಗೌಡ ಜನಾಂಗದ ಸಮುದಾಯ ಭವನಕ್ಕೆ 25 ಲಕ್ಷ, ಮುಸ್ಲಿಂ ಜನಾಂಗದ ಸಮುದಾಯ ಭವನಕ್ಕೆ 25 ಲಕ್ಷ, ಮಡಿವಾಳ ಸಮುದಾಯ ಭವನಕ್ಕೆ 10 ಲಕ್ಷ, ಗಾಣಿಗ 10 ಲಕ್ಷ, ಕೋರೆಹುಂಡಿ ಗ್ರಾಮದ ಕುರುಬರ ಸಮುದಾಯ ಭವನಕ್ಕೆ 15 ಲಕ್ಷ ಬಸವ ಸಮುದಾಯ ಭವನಕ್ಕೆ ಅಗತ್ಯ ಪರಿಕರಗಳನ್ನು ಒದಗಿಸಲು 50 ಲಕ್ಷ, ಅಶೋಕಪುರಂ ಸಮುದಾಯ ಭವನಕ್ಕೆ 50 ಲಕ್ಷ ಪೌರಕಾರ್ಮಿಕರ ಸಮುದಾಯ ಭವನಕ್ಕೆ 2 ಕೋಟಿ, ಬೀದಿ ದೀಪ ನಿರ್ವಹಣೆಗೆ 1 ಕೋಟಿ ಅನುದಾನ ಮೀಸಲಿರಿಸಲಾಗಿದೆ ಎಂದರು.

ವಿದ್ಯುತ್ ಚಿತಾಗಾರ ನಿರ್ಮಾಣ: ನಗರದಲ್ಲಿ ವಿದ್ಯುತ್ ಚಿತಾಗಾರ ನಿರ್ಮಿಸಲು 50 ಲಕ್ಷ ಮತ್ತು ನಗರದ ಎಲ್ಲಾ ಸ್ಮಶಾನಗಳಿಗೆ ಮೂಲಸೌಕರ್ಯ ಒದಗಿಸಲು 50 ಲಕ್ಷ ಅನುದಾನ ಮೀಸಲಿರಿಸಲಾಗಿದೆ ಶೀಘ್ರ ವಿದ್ಯುತ್ ಚಿತಾಗಾರ ನಿರ್ಮಾಣವಾಗಲಿದೆ ಎಂದರು.

ಸಿಸಿ ಕ್ಯಾಮರಾ ಅಳವಡಿಕೆ: ನಗರದೆಲ್ಲೆಡೆ ಅಪರಾಧ ಪ್ರಕರಣ ತಡೆಗಟ್ಟುವ ಸಲುವಾಗಿ ಹಾಗೂ ನಾಗರಿಕರ ರಕ್ಷಣೆ ದೃಷ್ಟಿಯಿಂದ ನಗರದ ಪ್ರಮುಖ ರಸ್ತೆಗಳಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗುವುದು ಎಂದರು.

ಬಡ ಜನರಿಗೆ ಪರಿಕರ ವಿತರಣೆ: ಎಲ್ಲಾ ವರ್ಗದ ಬಡ ಜನರಿಗೆ ಆಯಾ ವೃತ್ತಿಗೆ ಸಂಬಂಧಿಸಿದಂತೆ ಪರಿಕರಗಳನ್ನು ಒದಗಿಸಲು 50 ಲಕ್ಷ ಮೀಸಲಿರಿಸಲಾಗಿದೆ ನಲ್ಮ್ ಯೋಜನೆಯಡಿ ವೃತ್ತಿ ತರಬೇತಿ ನೀಡಿ ಸಹಾಯಧನ ವಿತರಣೆಗಾಗಿ 2 ಕೋಟಿ ಮೀಸಲಿರಿಸಲಾಗಿದೆ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ ಘಟಕ ಅಭಿವೃದ್ಧಿಗೆ 50 ಲಕ್ಷ, ಪೌರ ಕಾರ್ಮಿಕರ ಗೃಹಭಾಗ್ಯ ವೆಚ್ಚಗಳಿಗೆ 30 ಲಕ್ಷ ಎಂದರು.

ಈವರೆಗೆ 23 ಕೋಟಿಗೆ ಮಾತ್ರ ಸೀಮಿತವಾಗಿದ್ದ ನಗರಸಭೆ ಬಜೆಟ್ ಅನ್ನು ಪ್ರಸಕ್ತ ವರ್ಷದಿಂದ 77 ಕೋಟಿ 38 ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ. ಬರೋಬ್ಬರಿ 3 ಅವಧಿಗೆ ನನಗೆ ಬಜೆಟ್ ಮಂಡಿಸಲು ಅವಕಾಶ ಕಲ್ಪಿಸಿದ ಎಲ್ಲಾ ಸದಸ್ಯರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ನಿಮ್ಮಗಳ ಸಹಕಾರ ಪಡೆದು ನಗರದ ಸಮಗ್ರ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು ಎಂದರು.

ಸದಸ್ಯ ಗಾಂಧಿ ಮಾತನಾಡಿ, ಈ ಬಜೆಟ್ ಭವನಗಳಿಗೆ ಸೀಮಿತವಾಗಿದೆ. ಹಳೇ ಟೌನ್ ಭಾಗದ ಜನರಿಗೆ ನೀರಿನ ಸೌಲಭ್ಯ ಕಲ್ಪಿಸುವಂತೆ ಬಹಳ ವರ್ಷದಿಂದ ಬೇಡಿಕೆ ಇಟ್ಟಿದ್ದರೂ ಅದನ್ನು ಪೂರೈಸಿಲ್ಲ ಎಂದರು.

ಇದಕ್ಕೆ ಉತ್ತರಿಸಿದ ಅವರು, ಈಗಾಗಲೇ 3 ಕೋಟಿ ಅನುದಾನ ಮೀಸಲಿರಿಸಲಾಗಿದ್ದು, ಟೆಂಡರ್ ಹಂತದಲ್ಲಿದೆ. ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದರು.

ಈ ವೇಳೆ ನಗರಸಭೆ ಉಪಾಧ್ಯಕ್ಷೆ ನಾಗಮಣಿ, ಆಯುಕ್ತ ರಾಜಣ್ಣ, ಎಇಇ ಶ್ರೀನಿವಾಸ್, ಸದಸ್ಯರಾದ ಎಸ್.ಪಿ.ಮಹೇಶ್, ಶ್ರೀಕಂಠಸ್ವಾಮಿ, ಗಂಗಾಧರ್, ವಿಜಯಲಕ್ಷ್ಮಿ, ಶ್ವೇತಲಕ್ಷ್ಮಿ, ಮಹದೇವಮ್ಮ ಸೇರಿದಂತೆ ಎಲ್ಲಾ ವಾರ್ಡ್‌ನ ಸದಸ್ಯರು, ಅಧಿಕಾರಿಗಳು ಇದ್ದರು.

ಫೆ.12ಕ್ಕೆ, ವಿರಕ್ತ ಮಠದ ನೂತನ ಕಟ್ಟಡ ಲೋಕಾರ್ಪಣೆ



ತಿ.ನರಸೀಪುರ, ಫೆ9– ತಾಲೂಕಿನ ಎಂ.ಎಲ್. ಹುಂಡಿ ಗ್ರಾಮದಲ್ಲಿ ಫೆ.12ರಂದು ವಿರಕ್ತ ಮಠದ ನೂತನ ಕಟ್ಟಡವನ್ನು ಶಾಸಕ ಜಿ.ಟಿ.ದೇವೇಗೌಡರು ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಎಂ.ಎಲ್. ವಿರಕ್ತ ಮಠದ ಮಠಾಧೀಶರು ಹಾಗೂ ಅಲ್ಲಮ ಪ್ರಭು ಸೇವಾ ಟ್ರಸ್ಟ್ ಅಧ್ಯಕ್ಷರೂ ಆದ ಶ್ರೀಗೌರಿಶಂಕರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ವಿರಕ್ತ ಮಠದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾನುವಾರ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮಿಗಳ ಸಮ್ಮುಖದಲ್ಲಿ ನಡೆಯುವ ಅದ್ದೂರಿ ಕಾರ್ಯಕ್ರಮದಲ್ಲಿ ನೂತನ ಕಟ್ಟಡ ಉದ್ಘಾಟಿಸಲಿದ್ದು, ಲಿಂಗೈಕ್ಯ ಶ್ರೀ ಶಿವಸ್ವಾಮಿಗಳ 15ನೇ ಸ್ಮರಣೋತ್ಸವವನ್ನೂ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದ ಸಿದ್ಧತೆ ಭರದಿಂದ ಸಾಗಿದ್ದು, ಕಾರ್ಯಕ್ರಮದಲ್ಲಿ ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಂದ 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದ್ದು, ಆಗಮಿಸುವ ಭಕ್ತರಿಗೆ ಅನ್ನಸಂತರ್ಪಣೆಗೆ ಸಿದ್ಧತೆ ನಡೆದಿದೆ ಎಂದರು. ಮಠದಲ್ಲಿ ಕಳೆದ 15 ವರ್ಷದಿಂದ ಯಾವುದೇ ಕಾರ್ಯಕ್ರಮ ನಡೆದಿರಲಿಲ್ಲ. ಹಾಗಾಗಿ ಭಾನುವಾರ ಸರ್ವ ಧರ್ಮ ಸಮ್ಮೇಳನ ನಡೆಯಲಿದೆ. ಮಠದಲ್ಲಿ ಎಲ್ಲಾ ಜನಾಂಗ, ಧರ್ಮ, ಜಾತಿ, ಪಂಥಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಮಠದಲ್ಲಿ ಬಸವಣ್ಣರವರ ಆದರ್ಶ, ಸಿದ್ಧಾಂತ ಪಾಲಿಸಿಕೊಂಡು ಬರಲಾಗಿದೆ ಎಂದರು.

ಶಾಸಕ ಜಿ.ಟಿ.ದೇವೇಗೌಡ ವಿರಕ್ತ ಮಠದ ನೂತನ ಕಟ್ಟಡ, ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಲ್ಲಮ ಪ್ರಭು ಸೇವಾ ಟ್ರಸ್ಟ್ ಕಟ್ಟಡವನ್ನು ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಕರ್ತೃಗಳ ಗದ್ದಿಗೆ ಉದ್ಘಾಟಿಸಲಿದ್ದು, ಶಾಸಕ ಎಂ.ಅಶ್ವಿನ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಡಾ.ಯತೀಂದ್ರ, ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್, ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಮುಲ್ ಅಧ್ಯಕ್ಷ ಪ್ರಸನ್ನ ಸೇರಿದಂತೆ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಲ್ಲಮ ಪ್ರಭು ಸೇವಾ ಟ್ರಸ್ಟ್ ಸಂಚಾಲಕ ಓಂ ಪ್ರಕಾಶ್, ಶರಣ ಸಾಹಿತ್ಯ ಪರಿಷತ್ ಮಾಧ್ಯಮ ವಕ್ತಾರ ದಯಾನಂದ ಪಟೇಲ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಜನಪದ ಕಲಾವಿದ ವೈ.ಬಿ.ಪ್ರಕಾಶ್, ಅಕ್ಕ ಮಹಾದೇವಿ ಟ್ರಸ್ಟ್ ನಿರ್ದೇಶಕ ತುರುಗನೂರು ಮಲ್ಲೇಶ್ ಹಾಜರಿದ್ದರು.

ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆಯಿರಿ: ಕಳಲೆ ಕೇಶವಮೂರ್ತಿ



ಮಲ್ಲುಂಡಿ, ಫೆ.9–ರಾಜ್ಯದ ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆದು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಕಡಬೂರು, ಚಂದ್ರವಾಡಿ, ರಾಜೂರು ಗ್ರಾಮದಲ್ಲಿ ನಮ್ಮ ಬೂತ್ ನಮ್ಮ ಹೊಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದ ಲಂಚಕೋರ ಬಿಜೆಪಿ ಸರ್ಕಾರದಿಂದ ಜನ ಬೇಸತ್ತಿದ್ದಾರೆ. ಇಂತಹ ಸರ್ಕಾರವನ್ನು ಮುಂಬರುವ ಚುನಾವಣೆಯಲ್ಲಿ ಮನೆಗೆ ಕಳುಹಿಸಬೇಕಿದೆ. ಆದ್ದರಿಂದ ಕಾರ್ಯಕರ್ತರು ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸಂಸದರಾಗಿದ್ದಾಗ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿಪಡಿಸಿದ್ದಾರೆ. ಸೋಲನ್ನು ಗೆಲುವಾಗಿ ಸ್ವೀಕರಿಸಿ ಕ್ಷೇತ್ರದ ಜನತೆಯ ಕಷ್ಟಗಳಿಗೆ ಸ್ಪಂದಿಸಿದ್ದಾರೆ. ಅಂತಹ ವ್ಯಕ್ತಿ ಕ್ಷೇತ್ರಕ್ಕೆ ಬಂದರೆ ಕ್ಷೇತ್ರ ಅಭಿವೃದ್ಧಿಯಾಗಲಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಡವರಿಗೆ 10 ಕೆಜಿ ಅಕ್ಕಿ, ಗೃಹಿಣಿಯರಿಗೆ 2 ಸಾವಿರ ಹಾಗೂ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುವುದು ಎಂದರು.

ಈ ವೇಳೆ ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಬೂತ್ ಅಧ್ಯಕ್ಷರಾದ ಮೂರ್ತಿ, ಸಿದ್ದನಾಯಕ, ಮುಖಂಡರಾದ ದಾಸಯ್ಯ, ಮಹದೇವ, ನಾಗಶೆಟ್ಟಿ, ಮಂಜುನಾಥ್, ಮಹೇಶ್, ನಾರಾಯಣ, ಮಹದೇವನಾಯಕ ಸೇರಿದಂತೆ ಇತರರಿದ್ದರು.

ರೈತರ ಆರ್ಥಿಕಾಭಿವೃದ್ಧಿಗೆ ಹೈನುಗಾರಿಕೆ ಸಹಕಾರಿ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ



ಹುಣಸೂರು, ಫೆ.9– ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಹೈನುಗಾರಿಕೆ ಸಹಕಾರಿಯಾಗಿದ್ದು, ಬೇಸಾಯ ಕೈಕೊಟ್ಟ ಸಂದರ್ಭ ಉಪಕಸುಬುಗಳಿಂದ ಜೀವನ ನಡೆಸಬಹುದು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ದಾಸನಪುರದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಳೆ ನಂಬಿ ವ್ಯವಸಾಯ ಮಾಡುವವರ ಪರಿಸ್ಥಿತಿ ಕಷ್ಟಕರವಾಗಿದೆ. ಹೈನುಗಾರಿಕೆ ಪ್ರಸ್ತುತ ಬಹಳ ದೊಡ್ಡ ಉದ್ಯಮವಾಗಿ ಲಕ್ಷಾಂತರ ಮಂದಿಗೆ ಉದ್ಯೋಗ ಕಲ್ಪಿಸಿದೆ. ಮೈಮುಲ್ ಹಾಲು ಉತ್ಪಾದಕರಿಗೆ ಹಲವು ಯೋಜನೆ ಜಾರಿಗೆ ತಂದಿದ್ದು, ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಮೈಮುಲ್ ನಿರ್ದೇಶಕ ಕೆ.ಎಸ್. ಕುಮಾರ್ ಮಾತನಾಡಿ, ಹಾಲು ಉತ್ಪಾದಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೈಮುಲ್ ಹಲವು ಯೋಜನೆ ಅನುಷ್ಠಾನಗೊಳಿಸಿದ್ದು, ಇದರಿಂದ ರೈತರ ಮಕ್ಕಳಿಗೆ ಅನುಕೂಲವಾಗಲಿದೆ. ಗುಣಮಟ್ಟದ ಹಾಲು ಪೂರೈಕೆ ಮಾಡಿದಲ್ಲಿ ಸಂಘ ಆರ್ಥಿಕವಾಗಿ ಸದೃಢವಾಗುತ್ತದೆ ಎಂದರು.

ಈ ವೇಳೆ ಮಾಜಿ ಜಿಪಂ ಸದಸ್ಯ ಕಟ್ಟನಾಯ್ಕ, ಮೈಮುಲ್ ನಿರ್ದೇಶಕಿ ಶಿವಗಾಮಿ, ಕೆಎಂಎಫ್ ವ್ಯವಸ್ಥಾಪಕ ಕರಿಬಸವಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಸುಭಾಷ್, ಮಾಜಿ ಅಧ್ಯಕ್ಷ ದಾ.ರಾ. ಮಹೇಶ್, ಡೈರಿ ಕಾರ್ಯಕಾರಿ ಸಮಿತಿ ಅಧ್ಯಕ್ಷ ಶಿವರಾಜ್, ಕಾರ್ಯದರ್ಶಿ ಉಷಾ ಬೀರಪ್ಪ , ಉಪಾಧ್ಯಕ್ಷೆ ರಾಜಮ್ಮ, ನಿರ್ದೇಶಕರಾದ ಪ್ರಕಾಶ್, ರಮೇಶ್, ಡಿ.ಮಾದೇಗೌಡ, ಪುಟ್ಟೇಗೌಡ, ಬೀರಪ್ಪ, ಮುಖಂಡರಾದ ರಾಮೇಗೌಡ, ಪುಟ್ಟೇಗೌಡ ಹಾಗೂ ಸದಸ್ಯರು ಹಾಜರಿದ್ದರು.

ಕೋಟೆಯಲ್ಲಿ ಜೀತ ವಿಮುಕ್ತ ದಿನಾಚರಣೆ



ಹೆಚ್.ಡಿ.ಕೋಟೆ, ಫೆ9– ಜೀವಿಕ ಸಂಘಟನೆ ಜೀತ ಪದ್ಧತಿ ನಿರ್ಮೂಲನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ತಹಸೀಲ್ದಾರ್ ಪಿ.ಎಸ್.ಮಹೇಶ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಗುರುವಾರ ತಾಲೂಕು ಆಡಳಿತ ಹಾಗೂ ಜೀವಿಕ ಸಂಘಟನೆ ವತಿಯಿಂದ ಹಮ್ಮಿಕೊಂಡಿದ್ದ ಜೀತ ವಿಮುಕ್ತ ದಿನಾಚರಣೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

1976ರಲ್ಲಿ ಜೀತ ವಿಮುಕ್ತ ಕಾನೂನು ಜಾರಿಯಾದ ನಂತರ ಜೀತದಾಳುಗಳು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಯಿತು. ಆದರೆ ಇನ್ನೂ ಕೂಡ ಸಮಾಜದಲ್ಲಿ ಜೀತ ಪದ್ಧತಿ ಜೀವಂತವಿರುವುದು ವಿಪರ್ಯಾಸ. ಜೀತ ಪದ್ಧತಿಯಂತಹ ಅನಿಷ್ಟ ಪದ್ಧತಿ ತೊಡೆದು ಹಾಕಬೇಕಿದೆ. ಹೀಗಾಗಿ ಜೀತ ಪದ್ಧತಿ ಬಗ್ಗೆ ಮಾಹಿತಿ ನೀಡಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ತಾಪಂ ಇಓ ಜೆರಾಲ್ಡ್ ರಾಜೇಶ್ ಮಾತನಾಡಿ, ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಒಟ್ಟು 400 ಜನ ಜೀತದಾಳುಗಳು ಜೀತದಿಂದ ವಿಮುಕ್ತಿಗೊಂಡಿದ್ದು ಅದರಲ್ಲಿ ಎಚ್.ಡಿ.ಕೋಟೆ ತಾಲೂಕಿನಲ್ಲಿ 220 ಜನರಲ್ಲಿ 123 ಜನರು ಜೀತದಾಳುಗಳು ಮಾತ್ರ ನಿಖರವಾಗಿದ್ದು, ಗ್ರಾಪಂನಿಂದ ಇವರೆಲ್ಲರಿಗೂ ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ನೀಡಲಾಗಿದೆ. ಅದೇ ರೀತಿ ತಾಲೂಕಿನ ಎಲ್ಲಾ ಇಲಾಖೆಯ ಮುಖ್ಯಸ್ಥರು ಜೀತ ವಿಮುಕ್ತರಿಗೆ ಮೊದಲ ಆದ್ಯತೆಯಲ್ಲಿ ತಮ್ಮ ಇಲಾಖೆಯಲ್ಲಿ ಸಿಗುವ ಸವಲತ್ತು ನೀಡಬೇಕು ಎಂದರು.

ಇದೇ ಸಂದರ್ಭ ಜೀತ ವಿಮುಕ್ತರಿಗೆ ಜಾಬ್ ಕಾರ್ಡ್ ವಿತರಣೆ ಮಾಡಲಾಯಿತು. ಜೀವಿಕ ಸಂಘಟನೆ ಜಿಲ್ಲಾ ಸಂಚಾಲಕ ಬಸವರಾಜ್, ಜೀವಿಕ ಒಕ್ಕೂಟದ ರಾಜ್ಯ ಅಧ್ಯಕ್ಷ ಮಹದೇವ್, ಜೀವಿಕ ಮಹಿಳಾ ಒಕ್ಕೂಟದ ಅಧ್ಯಕ್ಷ ಮಲ್ಲಿಗಮ್ಮ, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಮಕ್ಕಳ ಮತ್ತು ಶಿಶು ಅಭಿವೃದ್ಧಿ ಅಧಿಕಾರಿ ಆಶಾ, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಶಶಿಕಲಾ, ಸಮಾಜ ಕಲ್ಯಾಣಾಧಿಕಾರಿ ರಾಮಸ್ವಾಮಿ, ಬಿಇಓ ಉದಯಕುಮಾರ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸಿಪಿಐ ಶಬೀರ್ ಹುಸೇನ್, ಎಇಇ ಬೋರಯ್ಯ, ನಾಗರಾಜು ಇದ್ದರು.

ನಂಜನಗೂಡಲ್ಲಿ ಮಹಾಶಿವರಾತ್ರಿ ಜಾಗರಣೆಗೆ ಸಕಲ ಸಿದ್ಧತೆ ಕೈಗೊಳ್ಳಿ

ಅಧಿಕಾರಿಗಳಿಗೆ ಶಾಸಕ ಬಿ.ಹರ್ಷವರ್ಧನ್ ಸೂಚನೆ



ನಂಜನಗೂಡು, ಫೆ.9– ದಕ್ಷಿಣಕಾಶಿ ನಂಜನಗೂಡಿನಲ್ಲಿ ಫೆ.18ರಂದು ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಹಾಶಿವರಾತ್ರಿ ಜಾಗರಣೆಯನ್ನು ವಿಜೃಂಭಣೆಯಿಂದ ಆಚರಿಸಲು ಸಕಲ ಸಿದ್ಧತೆ ಕೈಗೊಳ್ಳುವಂತೆ ಶಾಸಕ ಬಿ. ಹರ್ಷವರ್ಧನ್ ಸೂಚಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ದಾಸೋಹ ಭವನದಲ್ಲಿ ಗುರುವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಫೆ.18ರ ಸಂಜೆ 6 ರಿಂದ 19ರ ಬೆಳಗ್ಗೆ 7ರವರೆಗೆ ದೇಗುಲದ ಮುಂಭಾಗ ಜಾಗರಣೆಯಲ್ಲಿ ನಿರತರಾಗುವ ಸಾವಿರಾರು ಭಕ್ತರಿಗೆ ನೆರವಾಗಲು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುವುದು. ಭಕ್ತರ ವಾಹನ ನಿಲುಗಡೆಗೆ ಪ್ರತ್ಯೇಕ ಪಾರ್ಕಿಂಗ್ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಜೊತೆಗೆ ಶ್ರೀಕಂಠೇಶ್ವರಸ್ವಾಮಿ ದರ್ಶನಕ್ಕೆ ತೆರಳುವ ಭಕ್ತರು ಯಾವುದೇ ಕಿರಿಕಿರಿ ಇಲ್ಲದೆ ದೇವರ ದರ್ಶನ ಪಡೆಯಲು ಅಗತ್ಯ ಸಿದ್ಧತೆ ಕಲ್ಪಿಸಬೇಕು. ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವುದರಿಂದ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸುವಂತೆ ಸಭೆಯಲ್ಲಿದ್ದ ವೃತ್ತ ನಿರೀಕ್ಷಕರಿಗೆ ಸೂಚಿಸಿದರು.

ಮಹಾಶಿವರಾತ್ರಿ ಪ್ರಯುಕ್ತ ಕಪಿಲಾ ನದಿಯಲ್ಲಿ ಪುಣ್ಯ ಸ್ನಾನಕ್ಕೆ ಹೆಚ್ಚಿನ ಜನರು ಆಗಮಿಸುವ ನಿರೀಕ್ಷೆಯಿದ್ದು, ದೇಗುಲದ ಸ್ನಾನಘಟ್ಟ ಸ್ವಚ್ಛಗೊಳಿಸಬೇಕು. ಜೊತೆಗೆ ನದಿ ತೀರದಲ್ಲಿರುವ ಬಟ್ಟೆ ಬದಲಿಸುವ ಶೆಡ್‌ಗಳನ್ನು ದುರಸ್ತಿಪಡಿಸಿ ಭಕ್ತರ ಬಳಕೆಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ದೇಗುಲದ ಸಿಬ್ಬಂದಿಗಳಿಗೆ ಸೂಚಿಸಿದರು.

ರಾಜ್ಯದ ಪ್ರಮುಖ ಶಿವ ದೇವಾಲಯಗಳಲ್ಲೊಂದಾಗಿರುವ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ಹಬ್ಬವನ್ನು ಉತ್ಸವದಂತೆ ಆಚರಿಸಬೇಕಿದೆ. ಆ ಮೂಲಕ ಮಹಾಶಿವರಾತ್ರಿ ಕಳೆಗಟ್ಟುವಂತೆ ನೋಡಿಕೊಳ್ಳಬೇಕಿದೆ ಎಂದರು. ಸಭೆಯಲ್ಲಿ ನಗರಸಭೆ ಅಧ್ಯಕ್ಷ ಹೆಚ್.ಎಸ್. ಮಹದೇವಸ್ವಾಮಿ, ತಹಸೀಲ್ದಾರ್ ಶಿವಮೂರ್ತಿ, ತಾಪಂ ಇಓ ಶ್ರೀನಿವಾಸ್, ಪೌರಾಯುಕ್ತ ರಾಜಣ್ಣ, ದೇಗುಲದ ಎಇಓ ವೆಂಕಟೇಶ ಪ್ರಸಾದ್, ವೃತ್ತ ನಿರೀಕ್ಷಕ ಬಸವರಾಜು, ಸಂಚಾರಿ ಠಾಣೆ ಎಸ್‌ಐ ಯಾಸ್ಮಿನ್ ತಾಜ್ ಮತ್ತಿತರರಿದ್ದರು.

ಕರೋಹಟ್ಟಿಯಲ್ಲಿ ಮಡಿವಾಳ ಮಾಚಿದೇವರ ಸಂಘ ಉದ್ಘಾಟನೆ



ತಿ.ನರಸೀಪುರ, ಫೆ.9– ವೀರ ಮಡಿವಾಳ ಮಾಚಿದೇವರ ಹೆಸರಲ್ಲಿ ಅಸ್ತಿತ್ವಕ್ಕೆ ಬಂದಿರುವ ಸಂಘದಿಂದ ಮಾಚಿದೇವರ ವ್ಯಕ್ತಿತ್ವಕ್ಕೆ ಗೌರವ ತರುವಂತಹ ಕಾರ್ಯ ಚಟುವಟಿಕೆ ಹಮ್ಮಿಕೊಳ್ಳುವಂತೆ ಶಾಸಕ ಎಂ.ಅಶ್ವಿನ್ ಕುಮಾರ್ ಸಲಹೆ ನೀಡಿದರು.

ತಾಲೂಕಿನ ಕರೋಹಟ್ಟಿ ಗ್ರಾಮದ ಆವರಣದಲ್ಲಿ ಗುರುವಾರ ವೀರ ಮಡಿವಾಳ ಮಾಚಿದೇವರ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ಮಡಿವಾಳ ಮಾಚಿದೇವರ ಜಯಂತಿ ಹಾಗೂ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಸಂಘದ ಕಾರ್ಯ ಚಟುವಟಿಕೆಗಳು ಸಂಘಟನೆಗೆ ಪೂರಕವಾಗಿರಬೇಕು. ಮಾಚಿದೇವರ ವ್ಯಕ್ತಿತ್ವಕ್ಕೆ ಗೌರವ ತರುವಂತಿರಬೇಕು ಹಾಗೂ ಸಮರ್ಥ ನಿರ್ವಹಣೆಯ ಮೂಲಕ ಸಾರ್ಥಕತೆ ಕಾಣಬೇಕು. ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಂತೆ ಮಡಿವಾಳ ಸಮುದಾಯಕ್ಕೆ ಕರೆ ನೀಡಿದರು.

ಮಡಿವಾಳರ ಸಂಘದ ಜಿಲ್ಲಾಧ್ಯಕ್ಷ ಎಂ.ರಾಜು ಮಾತನಾಡಿ, ನಮ್ಮ ಸಮುದಾಯದ ಪರ ಧ್ವನಿ ಎತ್ತುವವರು ಯಾರೂ ಇಲ್ಲದ ಕಾರಣ ಮಡಿವಾಳ ಸಮುದಾಯ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿದೆ. ನಮ್ಮನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಲು ಶಾಸಕರು ಅಧಿವೇಶನದಲ್ಲಿ ನಮ್ಮ ಸಮುದಾಯದ ಪರ ಮಾತನಾಡುವಂತೆ ನಾವು ಈ ಮೂಲಕ ಮನವಿ ಮಾಡುವುದಾಗಿ ತಿಳಿಸಿದರು.

ಇದಕ್ಕುತ್ತರಿಸಿದ ಶಾಸಕ ಅಶ್ವಿನ್, ಈ ಹಿಂದೆ ದೊಡ್ಡಪುರದ ಕಾರ್ಯಕ್ರಮದಲ್ಲೂ ಸಮುದಾಯ ಮುಖಂಡರು ಈ ಬೇಡಿಕೆ ಇಟ್ಟಿದ್ದರು. ಈಗಲೂ ಕೇಳಿದ್ದೀರಿ. ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿರ್ಧರಿಸಬೇಕಿರುವುದರಿಂದ ಸರ್ಕಾರಕ್ಕೆ ನಿಮ್ಮ ಬೇಡಿಕೆ ಬಗ್ಗೆ ಖಂಡಿತವಾಗಿಯೂ ಮಾತನಾಡುವುದಾಗಿ ಭರವಸೆ ನೀಡಿದರು.

ನಿಗಮದ ಸೌಲಭ್ಯ ಪಡೆಯಲು ಶಾಸಕರು ಶಿಫಾರಸು ಮಾಡಲು ಅವಕಾಶವಿಲ್ಲ. ಜಿಲ್ಲಾಧಿಕಾರಿಗಳು, ಜಿಪಂ ಸಿಇಓ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ. ಶಾಸಕರು ಮಾಡಿಕೊಡಲಿಲ್ಲ ಎನ್ನಬೇಡಿ ಎಂದು ಸ್ಪಷ್ಟನೆ ನೀಡಿದರು.

ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ ಹಿರಿಯ ಕಾಯಕ ಯೋಗಿ ಕರೋಹಟ್ಟಿಯ ಮಂಟ್ಯಶೆಟ್ಟಿ, ತಿ.ನರಸೀಪುರ ಲಿಂಗಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಕರೋಹಟ್ಟಿ ವಿರಕ್ತಮಠದ ಸಿದ್ದಲಿಂಗ ದೇಶಿಕೇಂದ್ರ ಸ್ವಾಮೀಜಿ, ಗ್ರಾಪಂ ಅಧ್ಯಕ್ಷೆ ಮಮತಾ, ಸಂಘದ ಜಿಲ್ಲಾ ಕಾರ್ಯದರ್ಶಿ ಚೆನ್ನಕೇಶವ, ಖಜಾಂಚಿ ಜಗದೀಶ್ ಕುಮಾರ್, ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಬಸವರಾಜೇಗೌಡ, ಮಹಿಳಾ ಘಟಕದ ಜಿಲ್ಲಾ ಕಾರ್ಯದರ್ಶಿ ಜಯಲಕ್ಷ್ಮಿ, ಮಹಿಳಾ ಘಟಕದ ಅಧ್ಯಕ್ಷೆ ಸಾಕಮ್ಮ, ಗೌಡರ ಮಾದಪ್ಪ, ರೈತ ಸಂಘದ ತಾಲೂಕು ಅಧ್ಯಕ್ಷ ಕೆ.ಕುಮಾರಸ್ವಾಮಿ, ಬಲ್ಲುಶೆಟ್ಟರು, ಆಲಗೂಡು ಬಸವರಾಜು, ತಲಕಾಡು ಸಿದ್ದಶೆಟ್ಟಿ, ಸಂಘದ ಪದಾಧಿಕಾರಿಗಳು ಮತ್ತು ನಿರ್ದೇಶಕರು, ಗೌರವಾಧ್ಯಕ್ಷ ಸೋಮಶೆಟ್ಟಿ, ಅಧ್ಯಕ್ಷ ಸಿ.ನಿಂಗರಾಜು, ಉಪಾಧ್ಯಕ್ಷ ಮಂಟೆಶೆಟ್ಟಿ, ಕಾರ್ಯದರ್ಶಿ ಎಸ್.ಬಸವರಾಜು, ಕೆ.ಎಂ.ಸಿದ್ದರಾಜು, ಲಿಂಗರಾಜು, ಕರೋಹಟ್ಟಿ ಸಿದ್ದರಾಜು, ಚನ್ನಾಜಮ್ಮ, ವಾಟಾಳು ರಾಜಮ್ಮ, ಹ್ಯಾಕನೂರು ಯೋಗೇಶ್, ಆದಿಬೆಟ್ಟಳ್ಳಿ ಬಸವರಾಜು, ಕರೋಹಟ್ಟಿ ನಟರಾಜು, ನವೀನ್ ಮತ್ತಿತರರಿದ್ದರು.



ಸರಗೂರು ತಾಲೂಕಿನ ಕಾಟವಾಳು ಗ್ರಾಮದಲ್ಲಿ ಶ್ರೀಹುಲಿ ಮಾಸ್ತಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.



ಬನ್ನೂರಿನ ಹೇಮಾದ್ರಂಬ ಜಾತ್ರೆಯಲ್ಲಿ ಈಡಿಗ ಜನಾಂಗದವರಿಂದ ಶೇಷಗಜ ವಾಹನೋತ್ಸವ ವೈಭವದಿಂದ ನಡೆಯಿತು.

ನಾಗರಹೊಳೆಯಲ್ಲಿ ಪಕ್ಷಿ ಸಮೀಕ್ಷೆ ಆರಂಭ


ಹುಣಸೂರು, ಫೆ.9– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಗುರುವಾರ (ಫೆ.9)ದಿಂದ ಪಕ್ಷಿಗಳ ಸಮೀಕ್ಷೆ ಕಾರ್ಯ ಪ್ರಾರಂಭವಾಗಿದೆ.

ಉದ್ಯಾನದ 8 ವಲಯಗಳ 91 ಬೀಟ್‌ಗಳಲ್ಲಿ ಪಕ್ಷಿ ಸಮೀಕ್ಷೆ ಆರಂಭವಾಗಿದ್ದು, 4 ದಿನಗಳ ಸಮೀಕ್ಷಾ ಕಾರ್ಯದಲ್ಲಿ ಸ್ವಯಂ ಸೇವಕರು ಹಾಗೂ ಪೊನ್ನಂಪೇಟೆ ಅರಣ್ಯ ಕಾಲೇಜಿನ ವಿದ್ಯಾರ್ಥಿಗಳು ಸಮೀಕ್ಷೆ ನಡೆಸಲಿದ್ದಾರೆ. ಕಳೆದ ಸಾಲಿನಲ್ಲಿ 276 ಪ್ರಭೇದಗಳು ಪತ್ತೆಯಾಗಿದ್ದು, ಈ ಸಾಲಿನಲ್ಲಿ ಪ್ರಭೇದಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ. ನಾಗರಹೊಳೆ ಎಂದರೆ ಹುಲಿ, ಆನೆ ಅಲ್ಲ. ಇಲ್ಲಿ ಸಾಕಷ್ಟು ಪಕ್ಷಿಗಳಿವೆ. ಅವುಗಳ ಬಗ್ಗೆ ತಿಳಿದುಕೊಳ್ಳುವ, ಇತರರಿಗೆ ಅರಿವು ಮೂಡಿಸುವ ಸಲುವಾಗಿ ಮೊದಲ ಬಾರಿಗೆ ಇ–ಬರ್ಡ್ ಆ್ಯಪ್ ಮೂಲಕ, ಸ್ವಯಂ ಸೇವಾ ಸಂಸ್ಥೆ ಸಹಕಾರದಿಂದ ಪಕ್ಷಿ ಸಮೀಕ್ಷೆ ನಡೆಸಲಾಗುತ್ತಿದೆ.

ಎಂ.ಎಸ್. ಸಿದ್ದರಾಜುಗೆ ಪಿಹೆಚ್.ಡಿ



ಮೈಸೂರು, ಫೆ.9– ಡಾ. ಹೆಚ್.ಟಿ. ಬಸವರಾಜಪ್ಪ ಅವರ ಮಾರ್ಗದರ್ಶನದಲ್ಲಿ ಎಂ.ಎಸ್. ಸಿದ್ದರಾಜು ಅವರು ಭೂ ವಿಜ್ಞಾನ (ಅರ್ಥ್ ಸೈನ್ಸ್) ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.


ಕನ್ನೇಗೌಡ ಟೈಗರ್ಸ್
ಕೆ.ಜಿ.ಕೊಪ್ಪಲ್, ಮೈಸೂರು
Happy Birthday
Happy Birthday
ಬೀಮಮಹೇಶ್
ರವರಿಗೆ
ಜನ್ಮದಿನದ ಶುಭಾಶಯಗಳು
9008881117
9008888117